PEER - REVIEWED JOURNAL
ISSN: 2320-9941
ಸಂಪುಟ - 9, ಸಂಚಿಕೆ- 4
VOLUME: 09, ISSUE: 04

ಪ್ರತಿಸ್ಪಂದ

ಕೊಡು ಕೊಳ್ಳುವಿಕೆಯ ಸಂಕರ

PRATHISPANDA

An Exchange of Creative Impulse

ಗೌರವ ಸಂಪಾದಕರು
ಕೆ. ಆರ್. ಬಸವರಾಜು

ಸಂಪಾದಕರು
ಡಾ. ಸರಸ್ವತಿ ಕೆ. ಬಿ.

ಭಾಗ - ೩
PART - 3



ಸಾಹಿತ್ಯ, ಸಂಸ್ಕೃತಿ – ಸಂಶೋಧನಾ ತ್ರೈಮಾಸಿಕ ತಜ್ಞ ಪರಿಶೀಲನ ಪತ್ರಿಕೆ
literature, culture - Research Quarterly Peer - Reviewed journal
ISSN: **2320–9941**

ಪ್ರತಿಸ್ಪಂದ

ಕೊಡು–ಕೊಳ್ಳುವಿಕೆಯ ಸಂಕರ

PRATHISPANDA

An Exchange of creative Impulse

ಭಾಗ – 03, PART - 3

ಸಂಪುಟ: 09, ಸಂಚಿಕೆ 04, ಡಿಸೆಂಬರ್ 2025

VOLUME: 09, ISSUE: 04, DECEMBER 2025

ಗೌರವ ಸಂಪಾದಕರು

ಕೆ. ಆರ್. ಬಸವರಾಜು

ಸಂಪಾದಕರು

ಡಾ. ಸರಸ್ವತಿ ಕೆ. ಬಿ.

ಪ್ರಕಟಣೆ :

ಪ್ರತಿಸ್ಪಂದ ಸಾಹಿತ್ಯ, ಸಂಸ್ಕೃತಿ – ಸಂಶೋಧನಾ ತ್ರೈಮಾಸಿಕ ಪತ್ರಿಕೆ

ತೋಟದ ಮನೆ ನಂ 107(25)

ಕಂಚಾಘಟ್ಟ ಹೊಸ ಬಡಾವಣೆ

ತಿಪಟೂರು 572201

e-mail: prathispanda@gmail.com

website : https://prathispandha.wordpress.com/

ತಜ್ಞ ಪರಿಶೀಲನ ಸಮಿತಿ
PEER REVIEW COMMITTEE

ಡಾ. ಸರಸ್ವತಿ ಕೆ. ಬಿ.
ಸಹ ಪ್ರಾಧ್ಯಾಪಕರು, ಇಂಗ್ಲೀಷ್ ವಿಭಾಗ
ಬಿ.ಎಂ.ಎಸ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಹುಳಿಯಾರು – ಕೆಂಕೆರೆ
ತುಮಕೂರು ಜಿಲ್ಲೆ, ಕರ್ನಾಟಕ

Dr. Saraswati K. B
Associate Professor, English Department
BMS Govt. First Grade College, Huliyar - Kenkere
Tumkur District, Karnataka

ಡಾ. ಎಂ. ರಂಗಸ್ವಾಮಿ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮದ್ರಾಸ್ ವಿಶ್ವವಿದ್ಯಾಲಯ, ಚೆನ್ನೈ, ತಮಿಳುನಾಡು

Dr. M. Rangaswamy
Assistant Professor,
Kannada Department
University Of Madras,
Chenni, Tamil Nadu

ಡಾ. ಜ್ಯೋತಿ ಕೆ. ಬಿ.
ಸಹ ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊರಟಗೆರೆ
ತುಮಕೂರು ಜಿಲ್ಲೆ, ಕರ್ನಾಟಕ

Dr. Jyoti K. B.
Associate Professor, English Department
Govt. First Grade College, Koratagere,
Tumkur District, Karnataka

ಡಾ. ಗೋವಿಂದರಾಯ ಎಂ.
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಧುಗಿರಿ
ತುಮಕೂರು ಜಿಲ್ಲೆ, ಕರ್ನಾಟಕ

Dr. Govindaraya M.
Associate Professor
Kannada Department
Govt. First Grade College, Madhugiri
Tumkur District, Karnataka

ಅನಿತ ಕೆ. ವಿ.
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮೌಂಟ್ ಕಾರ್ಮಲ್ ಕಾಲೇಜು ಸ್ವಾಯತ್ತ, ವಸಂತನಗರ
ಬೆಂಗಳೂರು, ಕರ್ನಾಟಕ

Anitha K. V.
Assistant Professor, Kannada Department
Mount Carmel College Autonomous, Vasanthnagar
Bengaluru, Karnataka

ಡಾ. ರವಿಶಂಕರ್ ಎ. ಕೆ.
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಕ್ರಿಸ್ತು ಜಯಂತಿ ಡೀಮ್ಡ್ ಟು ಬಿ ವಿಶ್ವವಿದ್ಯಾಲಯ
ಕೆ. ನಾರಾಯಣಪುರ
ಬೆಂಗಳೂರು, ಕರ್ನಾಟಕ

Dr. Ravishankar A. K.
Assistant Professor, Kannada Department
Kristu Jayanti Deemed to be University,
K. Narayanapura
Bengaluru, Karnataka

ಸಿದ್ಧರಾಮಯ್ಯ ಡಿ. ಎಂ
ಪದವೀಧರ ಪ್ರಾಥಮಿಕ ಶಿಕ್ಷಕ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಬಾಡೇನಹಳ್ಳಿ, ಗುಬ್ಬಿ ತಾಲ್ಲೂಕು
ತುಮಕೂರು ಜಿಲ್ಲೆ, ಕರ್ನಾಟಕ

Siddaramaiah D. M
Graduate Primary Teacher
Government Higher Primary School
Baadenahalli, Gubbi Taluk,
Tumkur District, Karnataka

ಪ್ರೊ. ರಾಮು ಟಿ. ಡಿ.
ಪದವೀಧರ ಪ್ರಾಥಮಿಕ ಶಿಕ್ಷಕ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಕಾತ್ರಿಕೆಹಾಲ್, ಚಿಕ್ಕನಾಯಕನಹಳ್ಳಿ ತಾಲ್ಲೂಕು
ತುಮಕೂರು ಜಿಲ್ಲೆ, ಕರ್ನಾಟಕ

Ramu T. D
Graduate Primary Teacher
Government Higher Primary School
Kathrikehal, C N Halli Taluk
Tumkur District, Karnataka

ಕಾನೂನು ಸಲಹೆಗಾರರು
ಪೃಥ್ವಿ ಸೂರಿ
ಲೇಖಕರು ಹಾಗೂ ವಕೀಲರು

ಸಂಪಾದಕೀಯ...

ಕಾಳನುಯದಿ ಬಿತ್ತೆ ಸಂಜೆಗದು ಪೈರಹುದೆ
ಪಾಲುಂಟು ಕಾಲಂಗೆ ನಮ್ಮ ಕೃಷಿಗಳಲಿ ।
ವೇಳೆ ಗಡು ಮರೆತಾತುರದಿನ್ ಅಡುಗೆ ಪಕ್ಕಹುದೆ
ತಾಳುಮೆಯೆ ಪರಿಪಾಕ – ಮಂಕುತಿಮ್ಮ ॥

ಸವಾಲುಗಳನ್ನು ಎದುರಿಸಿ ಮೇಲೇಳುವ ಶಕ್ತಿ ಅಥವಾ Resilience ಗುಣವು ಅಸಾಧಾರಣವಾದದ್ದು. ವಸಾಹತು ಪರಿಭಾಷೆಯಲ್ಲಿ ಈ ಸ್ವಭಾವವು ದಾಸ್ಯವೆಂದು ಭಾವಿಸಲ್ಪಡುತ್ತದೆ. ಜೀವನದ ಅಪರಿಮಿತ ಶಕ್ತಿಯನ್ನು ಎದುರಾಗುವ ಪ್ರಯತ್ನದ ಕಾರಣದಿಂದಲೇ ತನ್ನ ಜೀವ ಸೆಲೆಯನ್ನು ಜಾಗೃತವಾಗಿಡುವ ಹೆಮ್ಮಿಂಗ್‌ವೇಯ ಮುದುಕನ ರೂಪಕ ಅನನ್ಯವಾದದ್ದು.

ಎಂತಹ ಕಠಿಣ ಪರಿಸ್ಥಿತಿಯಲ್ಲೂ ಏಳುವ ಸಮಸ್ಥಿತಿಗಳಿಸುವ ಪ್ರಕ್ರಿಯೆಗೆ ಕೆಲವು ಪೂರ್ವ ನಿಯಮಗಳಿರುತ್ತವೆ. Integrity, ತೀವ್ರಮೌನ, disinterestedness ಕೀಟ್ಸ್ ಕವಿ ಹೇಳುವ Negative Capability ಇಂತಹವು.

ಬದುಕಿನ ಬಗ್ಗೆ ನಾವು ಕಟ್ಟಿಕೊಳ್ಳುವ ಭ್ರಮೆಗಳು ನಿರಸನಗೊಂಡಾಗ, ತ್ರಿವ್ರವಾದ ಭಾವೋದ್ವೇಗಗಳು, ಹತ್ತಿರದವರನ್ನು ಕಳೆದುಕೊಂಡಾಗ ಆಗುವ ನೋವು, ಬದುಕುವ ಅಸ್ತಿತ್ವವನ್ನೇ ಅಲುಗಾಡಿಸುವ ಬಡತನ, ಯುದ್ಧಗಳು ಬರಗಾಲ, ರೋಗ ರುಜಿನ, ಯಾತನೆಗಳು ಮನುಷ್ಯರಲ್ಲಿ ಸಹಜವಾಗಿ Resilience ಗುಣವನ್ನು ಹೆಚ್ಚಿಸುತ್ತವೆ.

ಇಂದಿನ ಯುವ ಸಮೂಹವು ಇಂತಹ ಯಾವುದೇ ನೈಜ ದುರಂತಗಳು ಉಂಟುಮಾಡುವ ನೋವಿಗಿಂತ ಕಲ್ಪನೆಯಲ್ಲೇ ಕಾಡುವ ಭಯ, ಗೀಳು, ಅತಿಯಾದ ನಿರೀಕ್ಷೆ ಸ್ವಾರ್ಥದಿಂದ ಬರುವ ಹಠ, ಎಲ್ಲರನ್ನೂ, ಎಲ್ಲದನ್ನೂ ಒಳಗೊಳ್ಳದೇ ಇರುವ ಕಾರಣದಿಂದ ನೋವು ಅನುಭವಿಸುತ್ತಿದ್ದಾರೆ. ಇದು ಅಸಹಜ ಯಶಸ್ಸಿಗೆ ಅಡ್ಡದಾರಿಗಳನ್ನು

ಹುಡುಕುವ ಸಾಮರ್ಥ್ಯವಿಲ್ಲದಿದ್ದರೂ ಯಶಸ್ವಿ ಎಂದು ತೋರಿಸುವ ಕಾರಣದಿಂದ ದಿಕ್ಕು ತಪ್ಪುತ್ತಿದ್ದಾರೆ.

ನೋಡುವ, ಒಳನೋಟ ನೀಡುವ ಕಣ್ಣು ಕಳೆದುಕೊಂಡು ಅಂದರಾಗುವ ಮುನ್ನ ಎಚ್ಚೆತ್ತುಕೊಳ್ಳುವುದು ಅನಿವಾರ್ಯವಾಗಿದೆ. ಇಂತಹ ಪ್ರಜ್ಞಾವಿಹೀನ ಸ್ಥಿತಿ ಸಂಶೋಧನೆಗಳಿಗೆ ಮಾರಕವಾಗಿದೆ.

– ಡಾ. ಸರಸ್ವತಿ ಕೆ. ಬಿ

(ಈ ಪತ್ರಿಕೆಯಲ್ಲಿ ಪ್ರಕಟವಾದ ಎಲ್ಲಾ ಅಭಿಪ್ರಾಯಗಳು, ಆಯಾ ಲೇಖಕರ ಸಂಶೋಧನೆ, ಅಧ್ಯಯನಗಳಾಗಿರುತ್ತವೆ. ಆದ್ದರಿಂದ ಲೇಖನದ ಹಕ್ಕನ್ನು ಆಯಾ ಲೇಖಕರು ಹೊಂದಿರುತ್ತಾರೆ. ಪ್ರಕಟಣೆಯ ಹಕ್ಕನ್ನು ಪತ್ರಿಕೆಗೆ ನೀಡಿರುತ್ತಾರೆ.)

ISSN : 2320-9941

Linking ISSN (ISSN-L): 2320-9941

Key-title: Prathispandha

Title proper: Prathispandha.

Country: India

Medium: Print

Last modification date: 01/09/2014

Type of record: Confirmed

ISSN Center responsible of the record: ISSN National Centre for India

For all potential issues concerning this bibliographic record (missing or wrong data etc.), please contact the ISSN National Centre mentioned above by clicking on the link.

ಪರಿವಿಡಿ INDEX

1. ನಿರಂಜನ ಜಂಗಮ ಪೀಠ–ಶ್ರೀಸಿದ್ಧಗಂಗಾಮಠ

ಡಾ. ರೇಣುಕಪ್ರಸಾದ್ ಬಿ. ಆರ್. 1–9

2. ಕುವೆಂಪು ಮತ್ತು ಕನ್ನಡ ನಾಡು–ನುಡಿ ಚಿಂತನೆ

ಪ್ರೊ. ವನಜಾಕ್ಷಿ ಆರ್ ಹಳ್ಳಿಯವರ 10–19

3. ಕಾಲಜ್ಞಾನಿ ಕನಕ ನಾಟಕದಲ್ಲಿರುವ ವೈಚಾರಿಕ ಪ್ರಜ್ಞೆ

ಡಾ. ಜಯಚಂದ್ರ ಶೇಖರ ವೈ. 20–25

4. ಗ್ರಾಮಸೇವಕಿ ಕಾದಂಬರಿಯಲ್ಲಿ ಸ್ತ್ರೀ ಶೋಷಣೆ

ಶ್ರೀಮತಿ ರಾಜೇಶ್ವರಿ ವೈ.ಎಂ.

ಡಾ. ರಾಜಕುಮಾರ ಬಡಿಗೇರ 26–31

5. ಕುಮಾರವ್ಯಾಸ ಭಾರತ ಕಾವ್ಯದಲ್ಲಿ 'ದೈವ–ಮಾನವ'ರ ನಡುವಿನ ಸಂಘರ್ಷ

ರವಿ .ಎನ್ 32–38

6. ಕುವೆಂಪುರವರ ಜಲಗಾರ ನಾಟಕದಲ್ಲಿ ವೈಚಾರಿಕ ದೃಷ್ಟಿಕೋನ

ಡಾ. ನರೇಂದ್ರ ಬಾಬು ಸಿ.ಆರ್. 39–47

7. ಮೈದಾನ ಕಾದಂಬರಿ : ಅಂತರಂಗದ ಹುಡುಕಾಟ

ದೇವಿಂದ್ರಪ್ಪ 48–54

8. ಶ್ರೀರಂಗರ 'ಸ್ವಾರ್ಥತ್ಯಾಗ' ನಾಟಕ – ಒಂದು ವಿಮರ್ಶಾತ್ಮಕ ಅಧ್ಯಯನ

ಅರ್ಪಿತ ಸಿ. ಎಂ.

ಡಾ. ವೆಂಕಟರೆಡ್ಡಿ ರಾಮರೆಡ್ಡಿ 55–62

9. ಶಂಕರ ಮೊಕಾಶಿ ಪುಣೇಕರ ಅವರ ಸಣ್ಣ ಕಥೆಗಳಲ್ಲಿ ಅನ್ವೇಷಣೆಯ ಸ್ವರೂಪ

ಮಧುಕುಮಾರ್ ಎಚ್. ಎಸ್ .

ಡಾ. ವೆಂಕಟರೆಡ್ಡಿ ರಾಮರೆಡ್ಡಿ 63–72

10. ಜನಪದರು ಮತ್ತು ಭೂಮಿಯ ಒಡನಾಟ

ಡಾ. ಶಿವಾನಂದ ಬ. ಟವಳಿ 73–81

11. 'ಅಂತರಾತ್ಮ ಶುದ್ಧಿಗೆ ದಾರಿದೀಪ' ಪುರಂದರದಾಸರ 'ಮಲವ ತೊಳೆಯಬಲ್ಲರಲ್ಲದೆ'

ಕೀರ್ತನೆ – **ಡಾ. ರಂಗಸ್ವಾಮಿ ಹೆಚ್. 82–94**

12. ಜನರಿಂದ, ಜನರಿಗಾಗಿ, ಜನರಿಗೋಸ್ಕರ ಹುಟ್ಟಿದ ಕರ್ನಾಟಕದ ಜಾನಪದ ಕಲೆಗಳು – **ಡಾ. ಭವ್ಯ ಅಶೋಕ್ ಸಂಪಗಾರ್** **95–102**

13. ಮನ ಮಂದಿರ

ಡಾ. ರವಿಶಂಕರ್ ಎ. ಕೆ. **103–110**

ನಿರಂಜನ ಜಂಗಮ ಪೀಠ–ಶ್ರೀಸಿದ್ಧಗಂಗಾಮಠ

1
ಡಾ. ರೇಣುಕಪ್ರಸಾದ್ ಬಿ. ಆರ್.
ಸಹ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ತುಮಕೂರು–572102

ಸಂನ್ಯಾಸಿಗಳು, ಸಂನ್ಯಾಸಾಶ್ರಮದ ದೀಕ್ಷೆ ಪಡೆದು ಸರ್ವಸಂಗ ಪರಿತ್ಯಾಗಿಗಳಾಗಿ ವೈರಾಗ್ಯ ಸಂಪನ್ನರಾದವರು ನಡೆಸುವ ವಿರಕ್ತಮಠಗಳನ್ನು ನಿರಂಜನ ಜಂಗಮಪೀಠವೆಂದು ಕರೆಯಲಾಗುತ್ತದೆ. ಸರ್ವಸಂಗ ಪರಿತ್ಯಾಗಿಗಳಾದ ಸಂನ್ಯಾಸಿಗಳನ್ನು ನಿರಾಭಾರಿ ಜಂಗಮರು ವಿರಕ್ತರು ಎಂಬುದಾಗಿ ಕರೆಯಲಾಗುತ್ತದೆ. ವೈರಾಗ್ಯಪರರಾದ ಇವರು ನಿತ್ಯ ಸಂಚಾರಿಗಳಾಗಿರುತ್ತಾರೆ. ಈ ಜಂಗಮರಿಗೆ ಹನ್ನೆರಡನೇ ಶತಮಾನದಲ್ಲಿ ಹೆಚ್ಚಿನ ಮಾನ್ಯತೆ ಇತ್ತು.

'ಶ್ರೀ ಗುರು ಶಿಷ್ಯಾನುಭವಿ ಪೂರ್ವಾಶ್ರಮವ ಕಳೆದು ಭಕ್ತನ ಮಾಡಿದ ಬಳಿಕ ಆ ಭಕ್ತ ಜಂಗಮನಾಗುತ್ತಾನೆ.' 'ಗುರುವಿನ ಗುರು ಪರಮ ಗುರು ಜಂಗಮ.' ಎಂಬುದು ವಚನಕಾರ ಚನ್ನಬಸವಣ್ಣನ ಮಾತು. ಇದು ಜಂಗಮತ್ವದ ಹಿರಿಮೆಗೆ ಹಿಡಿದ ಕನ್ನಡಿಯಾಗಿದೆ. ಈ ವಿರಕ್ತಸ್ಥಾನ

ಶರಣರ ಕ್ರಾಂತಿಯ ಫಲವಾಗಿ ವೀರಶೈವ ಸಮಾಜದಲ್ಲಿ ಹುಟ್ಟಿ ತನ್ನ ಅಸ್ತಿತ್ವದ ಉನ್ನತಿಯನ್ನು ಪಡೆಯಿತು. ಇದನ್ನು ಕಪಟರಾಳ ಕೃಷ್ಣರಾಯರು 'ವೀರಶೈವ ಹೊಸ ಗುರುವರ್ಗ' ಎಂದು ಕರೆದಿದ್ದಾರೆ. ಹಾಗೂ ಇದನ್ನು ವಿರಕ್ತ ಸಮಯಾಚಾರವೆಂದೂ ಇದಕ್ಕೆ ಅಲ್ಲಮಪ್ರಭು ಹರಿಕಾರನೆಂದು ಹೇಳಲಾಗಿದೆ. ಅಲ್ಲಮಪ್ರಭು ನಿರಾಭಾರಿ ಜಂಗಮರ ಲಕ್ಷಣಗಳನ್ನು ವಿವರಿಸುತ್ತಾ 'ಹೆಣ್ಣು, ಹೊನ್ನು, ಮಣ್ಣು, ಕೋಪ, ಶಾಪವ, ಭ್ರಾಂತಿಯ ಬಿಟ್ಟು ಷಡುಲೋಭದ ರುಚಿ ಹಿಂಗಿ ಜಂಗಮವಾದಲ್ಲದೆ ಭವ ಹಿಂಗದು' ಎಂದಿದ್ದಾರೆ. ಶರಣರು ಗುರುತಿಸಿರುವಂತೆ ಜೀವ–ಆತ್ಮಗಳ ಸಂಬಂಧವಾದ ಶೂನ್ಯವಸ್ತುವಿನ ಜ್ಞಾನವುಳ್ಳ ಮಹಾನುಭಾವಿಯೇ ಜಂಗಮ. ಅಲ್ಲಮಪ್ರಭುಗಳು ಇಂತಹ ಜ್ಞಾನವುಳ್ಳ ಶೂನ್ಯವಸ್ತುವಿನ ಮಹಾನುಭಾವಿಯಾದುದರಿಂದಲೇ ಆತನನ್ನು ಜಂಗಮನೆಂದೂ, ಜಗದ್ಗುರುವೆಂದೂ ಬಸವಣ್ಣನು ಪೂಜಿಸಿದನಲ್ಲದೆ ಆತನು ಮಂಡಿಸಿದ ಪೀಠಕ್ಕೆ 'ಶೂನ್ಯಪೀಠ' ಅಥವಾ 'ಶೂನ್ಯಸಿಂಹಾಸನ' ಎಂದು ಕರೆದನು. ಹಾಗಾಗಿ ಹನ್ನೆರಡನೇ ಶತಮಾನದಲ್ಲಿ ಕಲ್ಯಾಣದಲ್ಲಿ ಪ್ರಾರಂಭವಾದ ಶೂನ್ಯಪೀಠವೇ ಮುಂದಿನ ನಿರಾಭಾರಿ ಜಂಗಮ ಸಂಪ್ರದಾಯದ ಅಡಿಗಲ್ಲಾಯಿತು. ಇದೇ ವಿರಕ್ತ ಪರಂಪರೆಯ ಮೂಲ ಪೀಠವೂ ಆಯಿತು.

ನಿರಂಜನವಂಶ ರತ್ನಾಕರದಲ್ಲಿ ಶೂನ್ಯಸಿಂಹಾಸನದ ಆಧಿಪತ್ಯವನ್ನು ಶಿವಾನುಭವ ಚರಂತಿಪಟ್ಟ ಎಂದು ಕರೆಯಲಾಗಿದೆ. ಆದಿ ಜಗದ್ಗುರು ಅಲ್ಲಮನಿಂದ ಪ್ರಾರಂಭವಾಗುವ ಈ ಶಿವಾನುಭವ 'ಚರಂತಿಪಟ್ಟ'ದ ಹತ್ತೊಂಬತ್ತನೆಯ ಗುರುವಾದ ತೋಂಟದ ಸಿದ್ದಲಿಂಗೇಶ್ವರರು ಏಳುನೂರು ಮಂದಿ (700 ಬುಡಕಟ್ಟಿನ ಮಠಗಳು) ಚರಮೂರ್ತಿಗಳಿಗೆ (ಶಿಷ್ಯಗಣಂಗಳಿಗೆ) ಗುರುವಾಗಿದ್ದರು. "ಈ ಏಳುನೂರು ಮಂದಿ ಬುಡಕಟ್ಟಿನ ಚರಮೂರ್ತಿಗಳ ಕರಸಂಜಾತರಾದ ಮೂರು ಸಾವಿರ ಮಂದಿ ವಿರಕ್ತ ಮಾಹೇಶ್ವರರಿದ್ದರು." [1]

ಹನ್ನೆರಡನೆಯ ಶತಮಾನದಲ್ಲಾದ ಕಲ್ಯಾಣದ ಕ್ರಾಂತಿಯ ನಂತರ "ವಿಜಯ ಕಲ್ಯಾಣಪುರ (ವಿಜಯನಗರ)ವಾದ ವಿದ್ಯಾನಗರದಲ್ಲಿ ಈ ಪರಂಪರೆ ನೂರೊಂದು ವಿರಕ್ತರಿಂದ ಮುಂದುವರೆಯಿತು. ವಾಣಿಜ್ಯಪುರವಾದ ಹರದನಹಳ್ಳಿಯಲ್ಲಿ ಶ್ರೀಗೋಸಲಸಿದ್ಧೇಶ್ವರರು ವಿರಕ್ತ ಪರಂಪರೆಯನ್ನು ಮುಂದುವರೆಸಿದ ಮಹಾನುಭಾವರು ಅವರ ಶಿಷ್ಯ ಪರಂಪರೆಯ ಧ್ರುವತಾರೆ ಶ್ರೀತೋಂಟದ ಸಿದ್ಧಲಿಂಗೇಶ್ವರರು. ಅವರಿಂದಲೇ ಕರ್ನಾಟಕ, ತಮಿಳುನಾಡುಗಳಲ್ಲಿ ವೀರಶೈವ ಮತ ಸಾಹಿತ್ಯ ಮತ್ತು ಸಂಸ್ಕೃತಿಗಳು ಪುನರುಜ್ಜೀವನಗೊಂಡವು ಎಂಬುದಾಗಿ ವಿರಕ್ತ ಪರಂಪರೆಯನ್ನು ವಿವರಿಸಲಾಗಿದೆ."[2]

ವಿರಕ್ತಮಠಗಳ ಹುಟ್ಟಿಗೆ ಕಾರಣವಾದ ಶರಣ ಚಳವಳಿಯನ್ನು ಕುರಿತಂತೆ ಡಾ.ಶಿವಾನಂದ ಕೆಳಗಿನಮನಿ ಅವರು ತಮ್ಮ ಲೇಖನವೊಂದರಲ್ಲಿ ಹೀಗೆ ಅಭಿಪ್ರಾಯ ಪಡುತ್ತಾರೆ. "ವೈದಿಕ ಧರ್ಮದಲ್ಲಿದ್ದ ವರ್ಣಾಶ್ರಮಧರ್ಮಗಳನ್ನು, ಕರ್ಮಸಿದ್ಧಾಂತಗಳನ್ನು ಅಲ್ಲಗಳೆದು, ಮನುಷ್ಯ ಮನುಷ್ಯನಾಗಿ ಮತ್ತು ಮನುಷ್ಯನನ್ನು ಮನುಷ್ಯನೆಂಬಂತೆ ಕಾಣುವ ವಿಧಾನವನ್ನು ಮೊದಲಿಗೆ ವಚನ ಸಾಹಿತ್ಯದಲ್ಲಿ ಕಾಣುತ್ತೇವೆ. ವ್ಯಕ್ತಿ ಆಗಬೇಕು, ಎಂದು ಬಯಸಿ ತನ್ನೆದುರಿಗೆ ಮನುಷ್ಯನ ಅಳುಕನ್ನು ಹೋಗಲಾಡಿಸಿ, ಆತನಲ್ಲೂ ಘನತೆಯನ್ನು ತುಂಬಲು ಯತ್ನಿಸಿದರು. ಒಂದು ಸಮಾಜದ ಬದುಕನ್ನು ಸರಿಪಡಿಸಬೇಕಾದರೆ, ಆ ಸಮಾಜದ ಜನತೆ ಯಾವುದರ ಹಿಡಿತದಲ್ಲಿ ನಲುಗುತ್ತಿರುವರು ಎಂಬ ಭಾವನೆಗಳನ್ನು ಅರ್ಥೈಸಿಕೊಳ್ಳುವುದು ಎಷ್ಟು ಮುಖ್ಯವೋ, ಹಾಗೇ ಅವರಲ್ಲಿ ಸುಪ್ತವಾಗಿ ಹುದುಗಿದ್ದ ಅಗಾಧ ಶಕ್ತಿ, ಸಾಮರ್ಥ್ಯಗಳನ್ನು ಪತ್ತೆ ಹಚ್ಚಿ, ಅವರ ಜ್ಞಾನಸಿದ್ಧಿ ಅನುಭಾವ ಹೀಗೆ ಯಾವುದೇ ಸಾಧಕರ ಹಂತಗಳನ್ನು ಗುರುತಿಸಿ ಸಮಾಜಕ್ಕೆ ಪ್ರಚುರ ಪಡಿಸುವುದು ಅವರ ಉದ್ದೇಶವಾಗಿತ್ತು."[3] ಅಂದರೆ ಶರಣರು ಕರ್ಮ ಸಿದ್ಧಾಂತಗಳನ್ನು ಅಲ್ಲಗಳೆದು ವ್ಯಕ್ತಿಯ ಸಾಧನೆಗೆ ಪೂರಕವಾಗುವ ಜ್ಞಾನಸಿದ್ಧಿ, ಅನುಭಾವಗಳನ್ನು ತನ್ನಲ್ಲಿ ಅಡಗಿರುವ ಅಗಾಧ ಶಕ್ತಿಯ ಫಲವಾಗಿ ಎಲ್ಲಾ ಸಾಧಕರೂ ಪಡೆದುಕೊಳ್ಳಬಹುದು ಎಂಬುದನ್ನು ತಿಳಿಸಲು ಪ್ರಯತ್ನಿಸಿದರು. ಶರಣರಲ್ಲಿದ್ದ ಮಾನವೀಯ ಬಾಂದವ್ಯ, ಈ ನೆಲದ ಮೇಲೆ ಸಾಧ್ಯವಾಗಬೇಕಿದ್ದ ಮಾನವ ಪ್ರೀತಿ, ಅದನ್ನು ಅರಸುವ ಕ್ರಿಯೆ ಮುಂತಾದವನ್ನು ಅವರ ವಚನಗಳಲ್ಲಿ ಕಾಣಬಹುದಾಗಿದೆ. ಜಡ ವ್ಯವಸ್ಥೆಗಳನ್ನು ವಿರೊಧಿಸಿ ಸರ್ವರನ್ನು ಸಮಾನತೆಯ ನೆಲೆಯಲ್ಲಿ ಕಾಣುವ ಹಂಬಲದ ಫಲವಾಗಿ ವಚನಕಾರರ ಧರ್ಮ ಸಂಸ್ಕೃತಿ ಬೆಳೆಯಿತು. ತದ ನಂತರ ಮಠ ಸಂಸ್ಕೃತಿಯಾಯಿತು. ಎನ್ನುತ್ತಾರೆ.

"ವಚನಕಾರರು ಮತ್ತು ಈ ಮಠ ಸಂಸ್ಕೃತಿಯು ಧರ್ಮದಲ್ಲಿ ಅಂತರ್ಗತವಾಗಿದ್ದ ಸಮಾನತೆಯ ತತ್ತ್ವವನ್ನು ಅರ್ಥಮಾಡಿಕೊಳ್ಳಲು, ಅಲ್ಲಿ ಬಳಕೆಯಾಗುತ್ತಿದ್ದ ಕೆಲವು ಧಾರ್ಮಿಕ ಪರಿಭಾಷೆಗಳನ್ನು ಗಮನಿಸಿದರೆ ಆ ಪರಿಭಾಷೆಗಳು ಕೇವಲ ಆಧ್ಯಾತ್ಮಿಕ, ಮಹತ್ವದ ಅರ್ಥ ವ್ಯಂಜಕ ಶಬ್ದಗಳಾಗಿರದೆ, ಅಂದಿನ ಧಾರ್ಮಿಕ ತಿಳಿವಳಿಕೆಯ ಸಂಸ್ಕಾರಗಳಿಗೆ ನೀತಿ ನಿಷ್ಪನ್ನಗಳಿಗೆ ವಚನಧರ್ಮ ಮಠ ಸಂಸ್ಕೃತಿಯ ಮೂಲಕ ಬಹು ದೊಡ್ಡ ಕಾಣ್ಕೆಯನ್ನು ನೀಡಿದೆ. ಇದರಿಂದ ಧಾರ್ಮಿಕ ಪುರುಷರ ಮತ್ತು ಭಕ್ತರ ಸಂಬಂಧ ವ್ಯಕ್ತಿಗೌರವ, ಆತ್ಮಗೌರವವನ್ನು ಎತ್ತಿ ಹಿಡಿಯುವಲ್ಲಿ, ಈ

ಮಠಸಂಸ್ಕೃತಿಯ ಪ್ರಭುತ್ವ, ಧಾರ್ಮಿಕವಾಗಿ ಮಹತ್ವದ ಪಾತ್ರ ವಹಿಸಿತ್ತು."4 ಈ ರೀತಿಯಾಗಿ ಶರಣಸಂಸ್ಕೃತಿಯು ಮಠಸಂಸ್ಕೃತಿಯ ಮೂಲಕ ವ್ಯಕ್ತಿಕಲಾಣ ಹಾಗೂ ಸಮಾಜಕಲ್ಯಾಣವನ್ನು ಸಾಧಿಸುವಲ್ಲಿ ಪ್ರಮುಖ ಪಾತ್ರ ವಹಿಸಿತು. ಗುರು ಮಠಗಳಿಗಿಂತ ಭಿನ್ನವಾಗಿದ್ದ ವಿರಕ್ತ(ಶರಣ) ಮಠಗಳು ಜ್ಞಾನಮಾರ್ಗಿ ಮಠಗಳಾಗಿ ಮುಂದುವರೆಯುತ್ತವೆ.

ಗುರುವಿರಕ್ತ–ಪೀಠಾಧಿಕಾರಿಗಳ ನಡುವೆ ಉಡುಗೆ–ತೊಡುಗೆ, ಆಚಾರ–ವಿಚಾರ ಮತ್ತು ಷಟ್‌ಸ್ಥಲ ಮಾರ್ಗದಲ್ಲಿ ಸಾಮ್ಯಗಳು ಕಂಡುಬರುತ್ತವೆ. ಆದರೆ ಗೋತ್ರ–ಸೂತ್ರಾಧಿ ಮೂಲ ಕ್ರಿಯಾಚರಣೆಯಲ್ಲಿ ಭಿನ್ನತೆಗಳು ಕಂಡುಬರುತ್ತವೆ. ಪೀಠಾಧಿಕಾರಿಗಳು ಕ್ರಿಯಾಪ್ರಧಾನ ವರ್ಗದವರಾದರೆ, ವಿರಕ್ತ ವರ್ಗದವರು ಜ್ಞಾನಪ್ರಧಾನ ಮಾರ್ಗಿಗಳು. ಗುರುವರ್ಗದ ಮಠಗಳು ಸಾಮಾನ್ಯವಾಗಿ ಊರಿನ ಮಧ್ಯೆ ಇದ್ದರೆ ವಿರಕ್ತ ವರ್ಗದ ಮಠಗಳು ಸಾಮಾನ್ಯವಾಗಿ ಊರ ಹೊರಗಿರುತ್ತವೆ. ಗುರುವರ್ಗದವರು ಶರಣ ಪಥ ಮಾರ್ಗಾನುಯಾಯಿಗಳಾಗಿರುತ್ತಾರೆ. ವಿರಕ್ತವರ್ಗದವರು ಸಂಚಾರಿಗಳಾಗಿ ಮೋಕ್ಷ ಪಡೆಯುವ ಉದ್ದೇಶ ಹೊಂದಿರುತ್ತಾರೆ.

ನಿರಂಜನ ಜಂಗಮಪೀಠ–ಗೋಸಲ ಸಿದ್ಧೇಶ್ವರರು: ಚಾಮರಾಜನಗರದಿಂದ ಮೂರು ಮೈಲು ದೂರದಲ್ಲಿ ದಕ್ಷಿಣಕ್ಕಿರುವ ಹರದನಹಳ್ಳಿ ಒಂದು ಕಾಲದಲ್ಲಿ ಪ್ರಖ್ಯಾತವಾದ ಊರು. ಅಲ್ಲಿ ವೀರಶೈವ ಬಣಜಿಗರೆಂದು ಕರೆಯುವ ವ್ಯಾಪಾರಸ್ಥರು 'ಅಳಲೇಶ್ವರ' ಎಂಬ ಶಿವ ದೇವಸ್ಥಾನವನ್ನು ನಿರ್ಮಿಸಿದರು. ಮುಂದೆ ಇದು ದಕ್ಷಿಣ ಭಾರತದ 'ಶೈವ' ಪುಣ್ಯ ಕ್ಷೇತ್ರವಾಗಿ ಪ್ರಖ್ಯಾತವಾಯಿತು. ಈ ಕ್ಷೇತ್ರದ ಪ್ರಭಾವಕ್ಕೆ ಒಳಗಾದ ಶರಣರೊಬ್ಬರು ಇಲ್ಲಿ ತಪೋನುಷ್ಠಾನ ನಿರತರಾಗಿದ್ದರು. ಅವರ ಮಹಿಮೆಯಿಂದ ಪ್ರೇರಣೆಗೊಂಡ ಭಕ್ತರು ಅವರಿಗಾಗಿ ಒಂದು ಮಠವನ್ನು ಕಟ್ಟಿಸಿ ಅವರನ್ನು ಪೀಠಾಧಿಪತಿಗಳನ್ನಾಗಿ ಮಾಡಿದರು. ಹೀಗೆ ಪೀಠಾಧಿಪತಿಗಳಾದವರೇ 'ಅನಾದಿಗಣನಾಥರು' ಎಂದು ತೊಂಟದ ಸಿದ್ಧಲಿಂಗೇಶ್ವರರು ತಮ್ಮ ಒಂದು ವಚನದಲ್ಲಿ ಹೇಳುತ್ತಾರೆ. ಇವರನ್ನು ನಿರಂಜನ ಜಂಗಮ ಗುರು ಪರಂಪರೆಯಲ್ಲಿ ನಾಲ್ಕನೆಯ ಪೀಠಾಧೀಶರೆಂದು ಗುರುತಿಸಲಾಗಿದೆ.

ನಿರಂಜನ ಜಂಗಮ ಪೀಠಾಚಾರ್ಯರಲ್ಲಿ ಗೋಸಲ ಸಿದ್ಧೇಶ್ವರರು ಹದಿನೈದನೆಯವರು. ಆದರೆ ಹರದನಹಳ್ಳಿ ನಿರಂಜನ ಜಂಗಮ ಪೀಠದ ಪರಂಪರೆಯಲ್ಲಿ ಹನ್ನೆರಡನೆಯವರು. ಹಾಗೆಯೇ ತೋಂಟದ ಸಿದ್ಧಲಿಂಗೇಶ್ವರರು ನಿರಂಜನ ಜಂಗಮ

ಪರಂಪರೆಯಲ್ಲಿ ಹತ್ತೊಂಬತ್ತನೆಯ ಪೀಠಾಧಿಪತಿಗಳಾದರೆ ಹರದನಹಳ್ಳಿ ಪರಂಪರೆಯಲ್ಲಿ ಹದಿನಾರನೆಯ ಪೀಠಾಧಿಪತಿಗಳು. ತೋಂಟದ ಸಿದ್ಧಲಿಂಗೇಶ್ವರರು ತಮ್ಮ ಈ ಗುರು ಪರಂಪರೆಗೆ ಹಿಂದಿನ ಶೂನ್ಯಪೀಠಾಧಿಪತಿಗಳಾದ ಅಲ್ಲಮಪ್ರಭು, ಚೆನ್ನಬಸವಣ್ಣ, ಸಿದ್ಧರಾಮೇಶ್ವರರನ್ನು ಒಳಗೊಂಡಂತೆ, ನಿರಂಜನ ವಂಶ ರತ್ನಾಕರದಲ್ಲಿ ಕಾಣಿಸಿರುವ ಗುರು ಪರಂಪರೆ ಹೀಗಿದೆ:

1. ಅಲ್ಲಮಪ್ರಭು– ಶ್ರೀಶೈಲದ ಕದಲೀ ಮಠದಲ್ಲಿ ಐಕ್ಯ.
2. ಚೆನ್ನಬಸವೇಶ್ವರರು– ಉಳಿವೆಯ ಮಹಾಮನೆಯಲ್ಲಿ ಇವರ ಗದ್ದುಗೆ.
3. ಸಿದ್ಧರಾಮೇಶ್ವರರು– ಸೊನ್ನಲಾಪುರ ಇವರ ಐಕ್ಯಸ್ಥಳ.
4. ಅನಾದಿ ಗಣನಾಥ– ಕೊಂಕಣ ಕಡಲ ತಡಿಯ ಕಲ್ಮಠದಲ್ಲಿ ಇವರು ಬಯಲಾದುದು.
5. ಆದಿಗಣೇಶ್ವರ(ಪ್ರಭುಸ್ವಾಮಿ)–ಕೊಳ್ಳೇಗಾಲ ತಾ. ಕುಂತೂರು ಪ್ರಭುಸ್ವಾಮಿ ಬೆಟ್ಟದ ಬಳಿಯ ಮಠದಲ್ಲಿ ಐಕ್ಯ.
6. ನಿರ್ಮಾಯಗಣೇಶ್ವರರು– ಕೊಳ್ಳೇಗಾಲ ತಾ. ಮಹದೇಶ್ವರ ಬೆಟ್ಟದಲ್ಲಿ ನಿರ್ವಯಲಾದರು.
7. ನಿರಂಜನಸ್ವಾಮಿಗಳು– ಕಲ್ಯಾಣದ ತ್ರಿಪುರಾಂತಕ ಕೆರೆಯ ತಟದ ರುದ್ರಮುನಿ ಸ್ವಾಮಿಗಳ ಮಠದಲ್ಲಿ ಐಕ್ಯ.
8. ಜ್ಞಾನಾನಂದಸ್ವಾಮಿಗಳು– ಕಲ್ಯಾಣದಿಂದ ಬಂದು ಶ್ರೀಶೈಲದ ಪ್ರಭುದೇವರ ಮಠದಲ್ಲಿ ಬಯಲಾದರು.
9. ಆತ್ಮಗಣವರರು– ಶ್ರೀಶೈಲದ ಕದಳಿಯ (ಗುಹೆ) ಬನದಲ್ಲಿ ನಿರ್ವಯಲಾದರು.
10. ಆಧ್ಯಾತ್ಮಗಣನಾಥರು– ತಿರುವಣ್ಣಾಮಲೆಯ ಕೆಂಗನಮಃಶಿವಾಯ ಗವಿಯಲ್ಲಿ ಐಕ್ಯ.
11. ರುದ್ರಮುನಿಸ್ವಾಮಿಗಳು– ಚಿತ್ರದುರ್ಗ ಜಿಲ್ಲೆ. ನಾಯಕನಹಟ್ಟಿಯಲ್ಲಿ ಸಮಾಧಿಸ್ಥರಾದರು.
12.ಬಸವಪ್ರಭುಸ್ವಾಮಿಗಳು– ಬಿಜಾಪುರ ಜಿ. ಜಮಖಂಡಿ ತಾ. ತೇರದಾಳದಲ್ಲಿ ತೋರುಗದ್ದುಗೆ ಇದೆ.
13. ಆದಿಲಿಂಗದೇವರು–ಬೆಳಗಾಂ ಜಿಲ್ಲೆ, ಸವದತ್ತಿ ತಾ. ಸೋಗಲಕ್ಷೇತ್ರದ ಕಲ್ಲೂರುಗುಡ್ಡದಲ್ಲಿ ಗದ್ದುಗೆ ಇದೆ.
14. ಚೆನ್ನವೀರಸ್ವಾಮಿಗಳು– ಸವದತ್ತಿ ತಾ. ಮನೋಳಿಯ ಪಂಚಲಿಂಗೇಶ್ವರ ದೇವಾಲಯದಲ್ಲಿ ಗದ್ದುಗೆ ಇದೆ.
15. ಗೋಸಲಸಿದ್ಧೇಶ್ವರರು– ತುಮಕೂರು ಸಮೀಪದ ಸಿದ್ಧಗಂಗೆ ಬೆಟ್ಟದಲ್ಲಿ ಶಿವಯೋಗ

ಸಮಾಧಿ ಇದೆ.

16. ಶಂಕರದೇವರು– ತುಮಕೂರು ಜಿ. ಕೊರಟಗೆರೆ ಸಮೀಪದ ಬೆಟ್ಟದಲ್ಲಿ ಇವರ ಐಕ್ಯ.
17. ದಿವ್ಯಲಿಂಗದೇವರು– ಹರದನಹಳ್ಳಿ ಅಣಿಲೇಶ್ವರ ದೇವಾಲಯದಲ್ಲಿ ಶಿವಯೋಗ ಸಮಾಧಿ ಇದೆ.
18. ಗೋಸಲಚೆನ್ನಬಸವೇಶ್ವರರು– ತುಮಕೂರು ಜಿ. ಗುಬ್ಬಿ ಮಠದಲ್ಲಿ ಇವರ ತೋರು ಗದ್ದುಗೆ ಇದೆ.
19. ತೋಂಟದಸಿದ್ಧಲಿಂಗೇಶ್ವರರು– ತುಮಕೂರು ಜಿ. ಕುಣಿಗಲ್ ತಾ. ಎಡೆಯೂರಿನ ಸ್ವಾಮಿಮಠದಲ್ಲಿ ಶಿವಯೋಗದಲ್ಲಿ ಮೂರ್ತಗೊಂಡ ತೋರಗದ್ದುಗೆ ಇದೆ.

ಈ ಗುರು ಶಿಷ್ಯ ಸಂಬಂಧದ ಮೂಲ ಅನಾದಿವಿಡಿದು ಬಂದದ್ದೆಂಬುದಕ್ಕೆ ಅವರ ಮುಂದಿನ ವಚನವೇ ಸಾಕ್ಷಿ.

"ಅನಾದಿಗಣೇಶ್ವರನ ಶಿಷ್ಯ ಆದಿಗಣೇಶ್ವರ; ಆದಿಗಣೇಶ್ವರನ ಶಿಷ್ಯರು ನಿರ್ವಾಯನೆಂಬಗಣೇಶ್ವರ; ನಿರ್ವಾಯನೆಂಬಗಣೇಶ್ವರನ ಶಿಷ್ಯರು ನಿರಂಜನನೆಂಬಗಣೇಶ್ವರ: ನಿರಂಜನನೆಂಬಗಣೇಶ್ವರನ ಶಿಷ್ಯರು ಜ್ಞಾನಾನಂದನೆಂಬ ಗಣೇಶ್ವರರು; ಜ್ಞಾನಾನಂದನೆಂಬಗಣೇಶ್ವರನ ಶಿಷ್ಯರು ಆತ್ಮಗಣೇಶ್ವರರು; ಆತ್ಮಗಣೇಶ್ವರನ ಶಿಷ್ಯರು ಆದ್ಯಾತ್ಮಗಣೇಶ್ವರರು; ಆದ್ಯಾತ್ಮನೆಂಬಗಣೇಶ್ವರನ ಶಿಷ್ಯರು ರುದ್ರನೆಂಬಗಣೇಶ್ವರರು; ರುದ್ರನೆಂಬಗಣೇಶ್ವರನ ಶಿಷ್ಯರು ಬಸವಪ್ರಭುದೇವರು; ಬಸವಪ್ರಭುದೇವರ ಶಿಷ್ಯರು ಆದಿಲಿಂಗದೇವರು; ಆದಿಲಿಂಗದೇವರ ಶಿಷ್ಯರು ಚೆನ್ನವೀರೇಶ್ವರದೇವರು; ಚೆನ್ನವೀರೇಶ್ವರದೇವರ ಶಿಷ್ಯರು ಹರದನಹಳ್ಳಿಗೋಸಲದೇವರು; ಹರದನಹಳ್ಳಿಗೋಸಲದೇವರ ಶಿಷ್ಯರು ಶಂಕರದೇವರು; ಶಂಕರದೇವರ ಶಿಷ್ಯರು ದಿವ್ಯಲಿಂಗದೇವರು; ದಿವ್ಯಲಿಂಗದೇವರ ಶಿಷ್ಯರು ಚೆನ್ನಬಸವೇಶ್ವರದೇವರು; ಚೆನ್ನಬಸವೇಶ್ವರದೇವರ ಕರಕಮಲದಲ್ಲಿ ಉತ್ಪತ್ತಿಯಾದ ಶಿಶು ಸಿದ್ಧಲಿಂಗ ನಾನಯ್ಯ."[೫]

ಹರದನಹಳ್ಳಿಯ ಶೈವ ಪರಂಪರೆಗೆ ಕುರುಹು ಎಂಬಂತೆ ಒಂದು ಶಿಲಾಶಾಸನವು ದೊರೆತಿದೆ. "ಹರದನಹಳ್ಳಿಯಲ್ಲಿರುವ ಆ ಶಿಲಾಶಾಸನಗಳಲ್ಲಿ 'ಅಣಿಲೇಶ್ವರ' ದೇವಸ್ಥಾನದ ಹೆಸರು ಪ್ರಸ್ತಾಪವಾಗಿದೆ. ಮೊದಲಬಾರಿಗೆ ಕ್ರಿ.ಶ. ೧೩೬೮ನೇ ವರ್ಷದ ೨೦೬ನೇ ನಂಬರು ಶಾಸನ 'ದಿಬ್ಯಲಿಂಗೇಶ್ವರ ಅಣಲೇಶ್ವರ ದೇವರಿಗೆ' ಸೇವೆಗಾಗಿ ಭಕ್ತರಾದ ಗೌಡರುಗಳು ಭೂಮಿಯನ್ನು ದತ್ತಿಕೊಟ್ಟ ವಿಷಯವನ್ನು ತಿಳಿಸುತ್ತದೆ."[೬]

ಹರದನಹಳ್ಳಿಯಲ್ಲಿ ಗೋಸಲ ಸಿದ್ಧೇಶ್ವರರು ಶೂನ್ಯಪೀಠಾಧೀಶ್ವರರಾಗಿ ಶತಪವಾಡ

ಮಹಾತ್ಮರೆಂದು ಪ್ರಸಿದ್ಧರಾಗಿದ್ದರು. ಅಣಿಲೇಶ್ವರ ದೇವಾಲಯದ ನಿರ್ಮಾಣದ ವೇಳೆಗೆ (ಕ್ರಿ.ಶ.1317) ಜಗದ್ಗುರು ಮಠವು ಗುರುಗಳಿಗೆ ಒಪ್ಪಿಸಿದ ಸಂಗತಿಯೂ ತಿಳಿದು ಬಂದಿದೆ. ಹೊಯ್ಸಳ ರಾಜನು ಶಾಸನ ಧರ್ಮವನ್ನು ಮಾಡಿದ ಆ ತಾರಣ ಸಂವತ್ಸರ (ಕ್ರಿ.ಶ.1344) ರ ಆನಂತರ ಬಹಶಃ ಸ್ವಲ್ಪಕಾಲ ಹರದನಹಳ್ಳಿಯಲ್ಲಿಯೇ ಇದ್ದು ಬಳಿಕ ಆ ಅಮೃತೇಶ್ವರ ಲಿಂಗಕ್ಕೆ ನೇಮಿಸಿದ ಕ್ರಿಯಾಮೂರ್ತಿಗಳಾದ ಶಂಕರಾಚಾರ್ಯಸ್ವಾಮಿಗಳಿಗೆ ತಮ್ಮ ಶಿವಾನುಭವ ಚರಂತಿಗೆ ಪಟ್ಟವನ್ನು ಮಾಡಿ 101 ಷಟ್‌ಸ್ಥಲ ಬ್ರಹ್ಮಿಗಳಾದ ವಿರಕ್ತ ಮೂರ್ತಿಗಳೊಡನೆ ಅಲ್ಲಿಂದ ದೇಶಾಟನ ಹೊರಟು ಶಿವಗಂಗಾ ಕ್ಷೇತ್ರಕ್ಕೆ ಬಂದುದಾಗಿ ತಿಳಿದು ಬರುತ್ತದೆ.

ಹರದನಹಳ್ಳಿ ಮಠವನ್ನು ಗೋಸಲ ಪೀಠವೆಂದು ಪ್ರೊ. ಮಹದೇವಪ್ಪನವರು ಸಿದ್ಧಗಂಗಾ ಕ್ಷೇತ್ರವು 1977ರಲ್ಲಿ ಪ್ರಕಟಿಸಿರುವ 'ದಾಸೋಹಸಿರಿ' ಸಮರ್ಪಣ ಗ್ರಂಥದಲ್ಲಿ 'ಗೋಸಲ, ಗೋಸಲ ಸಿದ್ಧೇಶ್ವರ–ಒಂದು ಅಧ್ಯಯನ' ಎಂಬ ಲೇಖನವನ್ನು ಬರೆದಿದ್ದಾರೆ. ಆದರೆ ಆ ಲೇಖನದಲ್ಲಿಯ ವಿಚಾರಗಳನ್ನು ಅಲ್ಲಗಳೆಯುವಂತೆ ಹೆಚ್.ಗಂಗಾಧರನ್ ಅವರು ತಮ್ಮ ವಿಚಾರಗಳನ್ನು ಈ ರೀತಿಯಾಗಿ ಮಂಡಿಸುತ್ತಾರೆ; "ಶ್ರೀಸಿದ್ಧಲಿಂಗೇಶ್ವರರು ತಮ್ಮ ವಚನದಲ್ಲಿ ಗುರು ಪರಂಪರೆಯನ್ನು ಸ್ಮರಿಸುವಾಗ ಶ್ರೀಸಿದ್ಧೇಶ್ವರರನ್ನು ಮಾತ್ರ ಗೋಸಲ ಸಿದ್ಧೇಶ್ವರರೆಂದು ಕರೆದಿದ್ದಾರೆ. ಉಳಿದವರು ಯಾರಿಗೂ ಗೋಸಲ ಶಬ್ದ ಬರುವುದಿಲ್ಲ. ಆದುದರಿಂದ ಹರದನಹಳ್ಳಿಯ ಮಠ ನಿರಂಜನ ಮಠವೇ ಹೊರತು ಅದು ಗೋಸಲ ಪೀಠವಾಗುವುದಿಲ್ಲ. ನಿರಂಜನ ಶಬ್ದ ವಚನದಲ್ಲಿ ಬರುತ್ತದೆ. ಆದ್ದರಿಂದ ನಿರಂಜನ ಪೀಠವೆಂದು ಭಾವಿಸಬಹುದು. ಗೋಸಲ ಶಬ್ದದ ತಾತ್ವಿಕ ಅರ್ಥವೂ ನಿರಂಜನ ಶಬ್ದಕ್ಕೆ ಸಂವಾದಿಯಾಗುತ್ತದೆ ಎಂದು ಭಾವಿಸಿದರೂ ಸಹ ಹಿಂದಿನ ಯಾವ ಗುರುಗಳಿಗೂ ಇಲ್ಲದ ಈ ಒಕ್ಕಣೆ ಸಿದ್ಧೇಶ್ವರರಿಗೆ ಮಾತ್ರ ಇರುವುದರಿಂದಲೂ ಸಹ ಹರದನಹಳ್ಳಿ ಪೀಠವನ್ನು ಗೋಸಲ ಪೀಠವೆನ್ನಲು ಬರುವುದಿಲ್ಲ. ವಿದ್ವಾಂಸರ ಊಹೆಯಂತೆ ಗೋಸಲ ಎಂಬುದು ಜನ್ಮಸ್ಥಳದ ಸಂಕೇತವೆಂದೂ ನಿರ್ಧರಿಸುವುದು ಕಷ್ಟಸಾಧ್ಯ ಎನ್ನುತ್ತಾರೆ ಹೆಚ್. ಗಂಗಾಧರನ್.

ಪ್ರೊ. ಮಹದೇವಪ್ಪನವರು ಗೋಸಲ ಶಬ್ದಕ್ಕೆ ನಾನಾ ಅರ್ಥಗಳನ್ನು ತಮ್ಮ ಲೇಖನದಲ್ಲಿ ವಿವರಿಸಿದ್ದಾರೆ. ಅದು ನಿರ್ವಿವಾದ. ಅವರ ಲೇಖನದಲ್ಲಿ ಸಿದ್ಧೇಶ್ವರರೇ ಸಿದ್ಧಗಂಗೆಯಲ್ಲಿ ಬಂಡೆಯಲ್ಲಿ ತೀರ್ಥೋದ್ಭವವನ್ನುಂಟು ಮಾಡಿದ್ದರೆಂದು ಹೇಳಿದ್ದಾರೆ. ಇದು ಕಾವ್ಯಗಳಲ್ಲಿಯೂ ಉಲ್ಲೇಖವಾಗಿದೆ. ಇದು ಸಹ ನಿರ್ವಿವಾದ ಸಂಗತಿ. ಈ ಹಿನ್ನೆಲೆಯಲ್ಲಿ ಗೋಸಲ ಶಬ್ದದ ಅರ್ಥವನ್ನು ಗಮನಿಸುವುದು ಸೂಕ್ತ. ಶ್ರೀಯುತರ

ಲೇಖನದಲ್ಲಿರುವ ಅರ್ಥ ವಿವರಣೆಯಲ್ಲಿ 'ಗೋ' ಶಬ್ದಕ್ಕಿರುವ 51 ಅರ್ಥಗಳಲ್ಲಿ ೧೪ನೆಯ ಅರ್ಥ 'ಉದಕ' ಎಂದಿದೆ. 'ಸಲ' ಶಬ್ದಕ್ಕೆ 'ಚಲಿಸು', 'ಚರಿಸು' ಎಂಬ ಅರ್ಥವಿರುವಂತೆ ಹೇಳಿದೆ. ಈ ಅರ್ಥವ್ಯಾಪ್ತಿಯನ್ನು ಅಂಗೀಕರಿಸಿ ಬಂಡೆಯಲ್ಲಿ ಜಲವನ್ನು ಚಲಿಸಿದವರು, ಅರ್ಥಾತ್ ಶಿಲೆಯಲ್ಲಿ ಜಲವನ್ನು ಸೃಜಿಸಿದವರು ಅಂದರೆ ಶಿಲೆಯಲ್ಲಿ ತೀರ್ಥೋದ್ಭವಗೈದವರನ್ನು ಗೋಸಲರೆಂದು ಶಿಷ್ಯ ಪರಂಪರೆ ಕರೆದಿರುವ ಸಾಧ್ಯತೆಯಿದೆ. ಸಿದ್ಧೇಶ್ವರರು ಹರದನಹಳ್ಳಿಯಿಂದ ಬಂದಾಗ ಅನೇಕ ಜನ ಶಿಷ್ಯರೊಡಗೂಡಿ ಅನೇಕ ಕಡೆ ವಿದ್ವತ್ ಸಭೆಗಳಲ್ಲಿ ಭಾಗವಹಿಸಿದ್ದ ಸಂಗತಿಗಳೂ ಉಲ್ಲೇಖವಾಗಿವೆ. ಅವರ ಶಿಷ್ಯ ಪರಂಪರೆಯುಲ್ಲಿ ಬಂದವರಲ್ಲಿ ಗುಬ್ಬಿ ಚನ್ನಬಸವಣ್ಣನವರು, ಸಿದ್ಧಲಿಂಗೇಶ್ವರರು ಕನ್ನಡ, ಸಂಸ್ಕೃತ ಭಾಷೆಗಳಲ್ಲಿ ಘನವಿದ್ವಾಂಸರಾಗಿದ್ದರೆಂಬುದು ಅವರ ವಚನಗಳಿಂದ ತಿಳಿದುಬರುತ್ತದೆ. ಆದುದರಿಂದ ಸಿದ್ಧೇಶ್ವರರಿಗೆ ಗೋಸಲ ಎಂಬ ನಾಮನಿರ್ದೇಶನ ಸಿದ್ಧಗಂಗಾ ಕ್ಷೇತ್ರದಲ್ಲಿ ತೀರ್ಥೋದ್ಭವಗೈದುದರ ಸ್ಮರಣಾರ್ಥ ಬಂದುದಾಗಿದೆ. ಎಂದು ನಿರ್ಧರಿಸಲು ಯಾವ ಬಾಧಕವೂ ಇಲ್ಲ. ಸಿದ್ಧಲಿಂಗೇಶ್ವರರು ಗುರುಗಳನ್ನು ಹರದನಹಳ್ಳಿಯ ಗೋಸಲ ಸಿದ್ಧೇಶ್ವರರೆಂದು ಕರೆದಿರುವುದರಿಂದ ಅವರು ಹರದನಹಳ್ಳಿಯಲ್ಲಿರುವಾಗಲೇ ಗೋಸಲ ಸಿದ್ಧೇಶ್ವರರೆಂದು ಕರೆದಿದ್ದಾರೆಂದು ಸೂಚಿಸಬಹುದು. ಆದರೆ ಸಿದ್ಧಲಿಂಗೇಶ್ವರರು ವಚನ ರಚಿಸುವ ವೇಳೆಗಾಗಲೇ ಪ್ರೌಢರಾಗಿದ್ದರು ಮತ್ತು ಅನೇಕ ಕ್ಷೇತ್ರಗಳ ಸಂಚಾರ ಮಾಡಿದ್ದರು. ಅನೇಕ ಶರಣರು ಸಿದ್ಧೇಶ್ವರರೆಂಬ ಹೆಸರನ್ನು ಹೊಂದಿದ್ದರು. ಬೆಂಗಳೂರು, ತುಮಕೂರು ಜಿಲ್ಲೆಗಳಲ್ಲಿ ಸಿದ್ಧರು ವಾಸ ಮಾಡುತ್ತಿದ್ದ ಬೆಟ್ಟ ಕಾಡುಗಳಿಗೆ ಈಗಲೂ ಸಿದ್ಧರ ಹೆಸರಿದೆ. ಇವೆಲ್ಲಾ ಸಿದ್ಧಲಿಂಗೇಶ್ವರರಿಗೆ ಪರಿಚಯವಿತ್ತು. ಆದುದರಿಂದ ತನ್ನ ಗುರು ಯಾರೆಂಬುದನ್ನು ನಿರ್ದಿಷ್ಟವಾಗಿ ಸೂಚಿಸಲು ಹರದನಹಳ್ಳಿಯ ಗೋಸಲ ಸಿದ್ಧೇಶ್ವರರೆಂದು ಕರೆದಿದ್ದಾರೆ. ಹಾಗೆಂದರೆ ಸಿದ್ಧೇಶ್ವರರಿಗೆ ಹರದನಹಳ್ಳಿ ಮಠದ ಸಂಬಂಧವಿಲ್ಲವೆಂದಲ್ಲ. ಕೆಲಕಾಲ ಆ ಮಠದ ಪೀಠಾಧೀಶರಾಗಿದ್ದು ನಂತರ ದೇಶ ಸಂಚಾರಕ್ಕೆ ಧರ್ಮ ಪ್ರಚಾರದ ಯಾತ್ರೆಯನ್ನು ಕೈಗೊಂಡು ಸಿದ್ಧಗಂಗಾ ಬೆಟ್ಟದಲ್ಲಿ ಬಂದು ನೆಲೆಸುತ್ತಾರೆ. ಹರದನಹಳ್ಳಿ ಬಿಟ್ಟು ಬರುವಾಗ ಶಂಕರದೇವರಿಗೆ ಮಠಾಧಿಕಾರವನ್ನಿತ್ತು ಬರುತ್ತಾರೆ."[೭] ಹೀಗೆ ಗೋಸಲಸಿದ್ಧೇಶ್ವರರು ನಿರಂಜನ ಜಂಗಮ ಪರಂಪರೆಯವರೆಂದು ಪ್ರತಿಪಾದಿಸಲಾಗಿದೆ. ಈ ಎಲ್ಲಾ ವಿಚಾರಗಳಿಂದ ಗೋಸಲ ಸಿದ್ಧೇಶ್ವರರೇ ಸಿದ್ಧಗಂಗೆಯಲ್ಲಿ ಮಠವನ್ನು ಕಟ್ಟಿದವರೆಂಬುದು ನಿರ್ವಿವಾದ ಸಂಗತಿಯಾಗಿ ತಿಳಿದು ಬರುತ್ತದೆ.

ಅಡಿಟಿಪ್ಪಣಿಗಳು :

1. ಬಿ.ಸಿ.ವೀರಪ್ಪ 'ಬೆಂಗಳೂರು ನಗರದ ವೀರಶೈವ ಮಠಗಳು ಒಂದು ಸಾಂಸ್ಕೃತಿಕ ಅಧ್ಯಯನ' (2001) ಪುಟ–49
2. ಬಿ.ಸಿ.ವೀರಪ್ಪ 'ಬೆಂಗಳೂರು ನಗರದ ವೀರಶೈವ ಮಠಗಳು ಒಂದು ಸಾಂಸ್ಕೃತಿಕ ಅಧ್ಯಯನ' (2001) ಪುಟ–49
3. (ಸಂ)ಚಂದ್ರಶೇಖರ ಪಾಟೀಲ, ಲೇ. ಶಿವಾನಂದ ಕೆಳಗಿನಮನಿ, 'ಸಂಕ್ರಮಣ', ಲೇಖನ; ಮಠಗಳು ಮತ್ತು ಪ್ರಭುತ್ವ; ಒಂದು ಅನುಸಂದಾನ, (ಮೇ,ಜೂನ್ 2013), ಪುಟ–16
4. (ಸಂ)ಚಂದ್ರಶೇಖರ ಪಾಟೀಲ, ಲೇ. ಶಿವಾನಂದ ಕೆಳಗಿನಮನಿ, 'ಸಂಕ್ರಮಣ', ಲೇಖನ; ಮಠಗಳು ಮತ್ತು ಪ್ರಭುತ್ವ; ಒಂದು ಅನುಸಂದಾನ, (ಮೇ,ಜೂನ್ 2013), ಪುಟ–16
5. (ಪ್ರ.ಸಂ)ಪಂ.ಚನ್ನಪ್ಪ ಎರೆಸೀಮೆ, ಲೇ.ಸಿ.ಮಹಾದೇವಪ್ಪ, 'ದಾಸೋಹ ಸಿರಿ',(1997), ಪುಟ–196.
6. ಲೇ. ಹೆಚ್.ಗಂಗಾಧರನ್, 'ಗೋಸಲಪೀಠ ಪರಂಪರೆ' (2008), ಪುಟ–12.
7. ಲೇ. ಹೆಚ್.ಗಂಗಾಧರನ್, 'ಗೋಸಲಪೀಠ ಪರಂಪರೆ' (2008), ಪುಟ–12,13,14.

ಕುವೆಂಪು ಮತ್ತು ಕನ್ನಡ ನಾಡು–ನುಡಿ ಚಿಂತನೆ

1
ಪ್ರೊ. ವನಜಾಕ್ಷಿ ಆರ್ ಹಳ್ಳಿಯವರ
ಪ್ರಾಂಶುಪಾಲರು
ಸರ್ಕಾರಿ ಪ್ರಥಮದರ್ಜೆ ಕಾಲೇಜು
ರಾಜಾಜಿನಗರ ಬೆಂಗಳೂರು–10
drvanajakshi3@gmail.com

ಆಧುನಿಕ ಕನ್ನಡ ನವೋದಯ ಸಾಹಿತ್ಯ ಚಳುವಳಿಯ ಮೇರು ಶಿಖರವಾಗಿ, ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ಕೃತಿ ರಚಿಸಿ 'ರಾಷ್ಟ್ರಕವಿ' ಎಂಬ ಹೆಗ್ಗಳಿಕೆಗೆ ಪಾತ್ರರಾದ ಕವಿ ಕುವೆಂಪು ಅವರು ಈ ಶತಮಾನದ ಮರೆಯಲಾಗದ ಮಾಣಿಕ್ಯವೇ ಸರಿ. ನಿಸರ್ಗದ ಮಡಿಲಲ್ಲಿ ಜನಿಸಿ 'ನಿಸರ್ಗಕವಿ' ಎಂದೇ ಪ್ರಖ್ಯಾತರಾದ ಕುವೆಂಪು ಕನ್ನಡ ನಾಡಿಗೆ ಮೊದಲ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟವರೆಂಬ ಕೀರ್ತಿಗೂ ಭಾಜನರಾದವರು. ಕುವೆಂಪು ಅವರ ಸಾಹಿತ್ಯಕೃಷಿ ಬಹು ವಿಸ್ತಾರವಾದುದು. ಅವರು ಆಯ್ದುಕೊಳ್ಳುವ ವಸ್ತುವಿಷಯದಲ್ಲೂ ಕೂಡ ವೈವಿಧ್ಯತೆಯುಂಟು. ಇಹ–ಪರದ ಎಲ್ಲ ವಿಷಯಗಳೊಂದಿಗೆ ಸಾಮಾಜಿಕ, ಧಾರ್ಮಿಕ, ರಾಜಕೀಯ, ಆರ್ಥಿಕ, ಶೈಕ್ಷಣಿಕ, ನಾಡು–ನುಡಿ ಇತ್ಯಾದಿ ವಿಷಯಗಳನ್ನು ಕುರಿತಂತೆ ಅವರು ಅಭಿವ್ಯಕ್ತಿಸುವ ವಿಚಾರಗಳು ವಿಭಿನ್ನ ಮತ್ತು

ವೈವಿಧ್ಯಮಯವಾಗಿರುವಂಥವುಗಳಾಗಿವೆ. ಅವರ ಸಾಹಿತ್ಯದ ಒಂದೊಂದು ಕೃತಿಯೂ ಒಂದೊಂದು ಸಂಶೋಧನಾ ಪ್ರಬಂಧಕ್ಕೆ ಆಕರವಾಗುವಷ್ಟು ಸತ್ವಯುತವಾದವುಗಳು. ಇಷ್ಟೊಂದು ವಿಸ್ತಾರವಾದ ಕುವೆಂಪು ಅವರ ಸಾಹಿತ್ಯ ಕುರಿತು ಚರ್ಚಿಸುವುದೆಂದರೆ ಅದು ಆಕಾಶಕ್ಕೆ ಕೈ ಹಾಕಿದಂತೆಯೇ ಸರಿ ! ಹಾಗಾಗಿ ಪ್ರಸ್ತುತ ಲೇಖನದಲ್ಲಿ ಕುವೆಂಪು ಅವರು ಕನ್ನಡ ನಾಡು–ನುಡಿ ಕುರಿತು ಆಲೋಚಿಸಿದ ವಿಷಯಗಳನ್ನು ಕ್ರೋಢೀಕರಿಸಿ ವಿವೇಚಿಸುವ ಒಂದು ಕಿರುಪ್ರಯತ್ನ ಮಾಡಲಾಗಿದೆ.

ಕುವೆಂಪು ಅವರು ತಮ್ಮ ವಿದ್ಯಾಭ್ಯಾಸದ ದಿನಗಳಲ್ಲಿಯೇ (ಕಿರುವಯಸ್ಸಿನಲ್ಲಿಯೇ) ಸಾಹಿತ್ಯ ರಚನೆಗೆ ತೊಡಗಿದವರು. ಆದರೆ ಅವರು ಆರಂಭದಲ್ಲಿ ಬರೆದದ್ದು ಮಾತೃಭಾಷೆ ಕನ್ನಡದಲ್ಲಲ್ಲ ; ಆಂಗ್ಲಭಾಷೆಯಲ್ಲಿ !. ಇಂಗ್ಲೀಷ್ ನ ರೊಮ್ಯಾಂಟಿಕ್ ಸಾಹಿತ್ಯದ ಪ್ರಭಾವಕ್ಕೊಳಗಾಗಿದ್ದ ಕುವೆಂಪು ಅವರು ಹತ್ತನೇ ತರಗತಿಯಲ್ಲಿರುವಾಗಲೇ `Beginners muse ಎಂಬ ಆರು ಕವನಗಳ ಸಂಕಲನವೊಂದನ್ನು ಪ್ರಕಟಿಸಿದರು. ತಾವು ಬರೆದ ಇಂಗ್ಲೀಷ್ ಕವನಗಳನ್ನು ಐರಿಷ್ ಕವಿ ಜೇಮ್ಸ್ ಕಸಿನ್ ಅವರ ಸಲಹೆಗಾಗಿ ಕಳುಹಿಸಿದರು. ಕಸಿನ್ ಅವರು ಕುವೆಂಪು ಅವರು ರಚಿಸಿದ ಕವನಗಳನ್ನು ಕೂಲಂಕುಶವಾಗಿ ಪರಿಶೀಲಿಸಿ, ಬಂಗಾಳಿ ಭಾಷೆಯಲ್ಲಿ ಕವಿ ರವೀಂದ್ರರು ಬರೆದಂತೆ, ನಿನ್ನ ಮಾತೃಭಾಷೆಯಾದ ಕನ್ನಡದಲ್ಲಿಯೇ ಕವಿತೆ ಬರೆಯುವಂತೆ ಸಲಹೆ ನೀಡಿದರು'. ಬಹುಶಃ ಈ ಘಟನೆಯೇ ಕುವೆಂಪು ಅವರು ಕನ್ನಡದ ಪ್ರಖ್ಯಾತ ಕವಿಯಾಗಲು ಕಾರಣವಾಯಿತು. ಪಾಶ್ಚಾತ್ಯ ಸಾಹಿತಿಗಳು, ದಾರ್ಶನಿಕರು, ಸಂತರು, ಹಾಗೂ ಋಷಿಗಳ ವಿಚಾರ ಧಾರೆಗೆ ಮನಸೋತಿದ್ದ ಕುವೆಂಪು ಅವರು ತಮ್ಮದೇ ಸ್ವದೇಶೀ ನೆಲೆಗೆ ಮುಖಮಾಡಿದ್ದು ಒಂದು ಕ್ರಾಂತಿಕಾರಕ ಸಂದರ್ಭವೇ ಆಗಿದೆ.

"ಕನ್ನಡಕ್ಕಾಗಿ ಕೈಯೆತ್ತು ನಿನ್ನ ಕೈ ಕಲ್ಪವೃಕ್ಷವಾಗುತ್ತದೆ
ಕನ್ನಡಕ್ಕಾಗಿ ಕೊರಳೆತ್ತು ಅಲ್ಲಿ ಪಾಂಚಜನ್ಯ ಮೂಡುತ್ತದೆ
ಕನ್ನಡಕ್ಕಾಗಿ ಕಿರುಬೆರಳೆತ್ತಿದ್ದರೂ ಸಾಕು
ಇಂದು ಅದೇ ಗೋವರ್ಧನಗಿರಿಯಾಗುತ್ತದೆ " (1)

ಎಂದು ನುಡಿಯುವ ಕುವೆಂಪುರವರಿಗೆ ತಮ್ಮ ಬದುಕಿನಾದ್ಯಂತ ಕಾಡಿದ ಬಹುಮುಖ್ಯ ವಿಷಯ ಕನ್ನಡ ನಾಡು–ನುಡಿ ಚಿಂತನೆಯೇ ಆಗಿದೆ. ಕನ್ನಡ ಭಾಷೆ, ದೇಶ ಭಾಷೆಗಳಲ್ಲಿಯೇ ಉತ್ಕೃಷ್ಟವೆಂದು ಸಾರುವ ಕುವೆಂಪು ಅದನ್ನು ಉಳಿಸಿ ಬೆಳೆಸುವ ಹೊಣೆಗಾರಿಕೆ ಪ್ರತಿಯೊಬ್ಬ ಕನ್ನಡಿಗನದ್ದಾಗಿದೆ ಎನ್ನುತ್ತಾರೆ. "ಕನ್ನಡ ಮಾಧ್ಯಮ ಸಂಪೂರ್ಣವಾಗಿ ಯಶಸ್ವಿಯಾಗಿ ಪ್ರತಿಷ್ಠಾಪಿತವಾಗುವ ತನಕ ಕನ್ನಡಿಗರಿಗೆ

ಉದ್ಧಾರವಿಲ್ಲ, ಮೋಕ್ಷವಿಲ್ಲ. ಇಂಗ್ಲೀಷಿನ ಮೂಲಕ ಪಡೆಯುವ ಶಿಕ್ಷಣ ಗಾಳಿಗೋಪುರವಲ್ಲದೇ ಮತ್ತೇನು ಆಗಲಾರದು."(2) 'ಇರುವಲ್ಪ ಶಕ್ತಿಯನು ಇರುವಲ್ಪ ದ್ರವ್ಯವನು ಪರಭಾಷೆ ಮೋಹಕ್ಕೆ ಚೆಲ್ಲಬೇಡಿ' ಎಂದು ಎಚ್ಚರಿಸುತ್ತಾರೆ. ನಮಗೆ ಬೇಕಾದುದು ತ್ರಿಭಾಷಾ ಸೂತ್ರವಲ್ಲ, ದ್ವಿಭಾಷಾ ಸೂತ್ರ ಎಂದು ಒಪ್ಪಿಕೊಳ್ಳುವ ಕುವೆಂಪು, "ಪ್ರಾದೇಶಿಕ ಭಾಷೆಗೆ ಅಗ್ರಸ್ಥಾನ ಕೊಡಬೇಕು, ಅದೇ ಶಿಕ್ಷಣ ಮಾಧ್ಯಮವಾಗಬೇಕು, ಅದೇ ರಾಜ್ಯಭಾಷೆಯೂ ಆಗಬೇಕು"(3) ನಮ್ಮ ಕನ್ನಡ ಭಾಷೆ ವಿದ್ಯಾಭ್ಯಾಸದ ಅತ್ಯುನ್ನತ ಮಟ್ಟಗಳಲ್ಲಿಯೂ ಶಿಕ್ಷಣ ಮಾಧ್ಯಮವಾಗಲು ಸಮರ್ಥವಾಗಿದೆ ಎನ್ನುವುದರ ಬಗೆಗೆ ಯಾರೂ ಸಂದೇಹ ಪಡಬೇಕಾಗಿಲ್ಲ. ಏಕೆಂದರೆ "ಕನ್ನಡ ಸಾಹಿತ್ಯದಲ್ಲಿಯೂ ಪಾಶ್ಚಾತ್ಯ ಸಾಹಿತ್ಯದ ಔನ್ನತ್ಯಗಳನ್ನೂ ಮೀರುವ ಸಾಹಿತ್ಯ ಸೃಷ್ಠಿಯಾಗಿದೆ, ಆಗುತ್ತದೆ"(4) ಮಾತೃಭಾಷೆಯ ಮೂಲಕವಾಗಿ ನಡೆಯುವ ಶಿಕ್ಷಣವೇ ಸರ್ವೋತ್ಕೃಷ್ಟವಾದುದೆಂದು ನುಡಿಯುವ ಕುವೆಂಪು ಅವರು ಆಯಾ ಪ್ರಾದೇಶಿಕ ಭಾಷೆಗಳಲ್ಲಿ ತಾಯ್ನುಡಿಗೆ ಮೊದಲ ಆದ್ಯತೆ ಇರಬೇಕೆನ್ನುವುದನ್ನು ಒತ್ತಿ ಹೇಳುತ್ತಾರೆ.

ಕನ್ನಡ ನಾಡು–ನುಡಿಯ ವಿಷಯ ಬಂದಾಗ ಕುವೆಂಪು ಅವರು ದಿಟ್ಟ ಉತ್ತರದ ಛಾಟಿ ಬೀಸುತ್ತಿದ್ದರು. 'ಕನ್ನಡ ವಿಷಯದಲ್ಲಿ ನಾನು ಟ್ಯಾಂಕರಿನಂತೆ ಮುನ್ನುಗ್ಗುತ್ತೇನೆ. ನೀವು ದಾರಿ ಬಿಟ್ಟರೋ ಸರಿ. ಇಲ್ಲವೋ ಅಪ್ಪಚ್ಚಿಯಾಗುತ್ತೀರಿ' ಎನ್ನುತ್ತಾ 'ಅಖಂಡ ಕರ್ನಾಟಕ' ಎಂಬ ಕವಿತೆ ರಚಿಸಿ ಇಡೀ ಮೈಸೂರು ಮಂತ್ರಿಮಂಡಲವನ್ನು ಕಟುವಾಗಿ ಟೀಕಿಸಿದರು. ಹರಿದು ಹಂಚಿಹೋಗಿದ್ದ ಕರ್ನಾಟಕವನ್ನು ಒಂದುಗೂಡಿಸಬೇಕೆಂಬ ಹಂಬಲದಿಂದ ರಾಜರ ನಿಯಂತ್ರಣದಲ್ಲಿದ್ದ ಕನ್ನಡ ಪ್ರದೇಶವನ್ನು ಮುಕ್ತಗೊಳಿಸಿ ಪ್ರಜಾಪ್ರಭುತ್ವ ತತ್ವಗಳಡಿಯಲ್ಲಿ ಸರ್ವಸಮಾನತೆಯ ಬೀಜಾಂಕುರವಾಗಲು ಶ್ರಮಿಸಿದರು. ಇಂಥಹ ಸನ್ನಿವೇಷದಲ್ಲಿ ಅವರು ಇದಕ್ಕೆ ಅಡ್ಡಿಪಡಿಸಿದವರು ಯಾರೇ ಇರಲಿ ಅವರ ವಿರುದ್ಧ ಸಿಡಿದೆದ್ದರು.

"ನೃಪತುಂಗನೆ ಚಕ್ರವರ್ತಿ
ಪಂಪನಲ್ಲಿ ಮುಖ್ಯಮಂತ್ರಿ
ರನ್ನ ಜನ್ನ ನಾಗವರ್ಮ
ರಾಘವಾಂಕ ಹರಿಹರ
ಬಸವೇಶ್ವರ ನಾರಾಣಪ್ಪ
ಸರ್ವಜ್ಞ ಷಡಕ್ಷರ

ಸರಸ್ವತಿಯೇ ರಚಿಸಿದೊಂದು
ನಿತ್ಯ ಸಚಿವ ಮಂಡಲ
ತನಗೆ ರುಚಿರ ಮಂಡಲ"

(ಅಖಂಡ ಕರ್ನಾಟಕ – ಕುವೆಂಪು)

ಎಂದು ಕನ್ನಡ ನಾಡಿನ ಸಾಹಿತ್ಯ ಸಾಧಕರಿಂದ ರಚಿತವಾದ ನಿತ್ಯ ಸಚಿವ ಮಂಡಲದಲ್ಲಿ ರಾಜಪ್ರಭುತ್ವದಲ್ಲಿದ್ದಂತೆ ಯಾವ ಕಲಹಗಳಿಲ್ಲ. ಜಾತಿ–ಮತ, ಪದವಿ–ಅಂತಸ್ತಿಗಾಗಿ ಕಿತ್ತಾಟವಿಲ್ಲ. ಇಲ್ಲಿ ಸರ್ವಸಮಾನತೆಯೇ ಮೂಲಮಂತ್ರ ಎಂಬುದನ್ನು ದೃಷ್ಟಾಂತಗಳ ಮೂಲಕ ವಿವರಿಸಿದ್ದಾರೆ.

ಪ್ರಸ್ತುತ ಸಾಮಾಜಿಕ ವ್ಯವಸ್ಥೆಯಲ್ಲಿ ಅರಾಜಕತೆ, ಹಗೆತನ, ಮತಾಂಧತೆ, ಧರ್ಮ–ಜಾತಿ ಕಲಹಗಳಿಂದ ನಾಡಿನ ಎಷ್ಟೋ ಯುವಜನಾಂಗ ದಿಕ್ಕು ತಪ್ಪುತ್ತಿದ್ದಾರೆ. ನಾಡು–ನುಡಿಯ ಮಾತು ಬಂದಾಗಲೆಲ್ಲ ಹೋರಾಟಗಳು ತಾರಕಕ್ಕೇರಿ ಸಮಾಜದ ಸ್ವಾಸ್ಥ್ಯವನ್ನೇ ಹದಗೆಡಿಸಿವೆ. ಕನ್ನಡ ನಾಡಿನ ಪವಿತ್ರ ನದಿ ಕಾವೇರಿ ನೀರಿನ ಸಮಸ್ಯೆ, ಮಹಾರಾಷ್ಟ್ರ ಮತ್ತು ಕರ್ನಾಟಕದ ಮಧ್ಯದಲ್ಲಿ ಬೆಳಗಾವಿ ಗಡಿ ಸಮಸ್ಯೆಗಳು ಇಂದಿಗೂ ನಮ್ಮನ್ನು ಕಾಡುತ್ತಲೇ ಇವೆ.

ಸಾಮಾಜಿಕ ವ್ಯವಸ್ಥೆಯ ಬೆಳವಣಿಗೆಯಲ್ಲಿ ಅಪಾಯಕಾರಿ ಅಂಶಗಳೇ ಹೆಚ್ಚಾಗಿದ್ದು, ಮೌಲ್ಯವರ್ಧಿತ ಸಾಮಾಜಿಕ ಪರಿಸರ ಮೂಲೆಗುಂಪಾಗುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಕುವೆಂಪು ಅವರ ವಿಚಾರಧಾರೆ, ನಾಡು–ನುಡಿಯ ಚಿಂತನೆಗಳು ಪ್ರಭುತ್ವ ಹಾಗೂ ಪುರೋಹಿತಶಾಯಿ ವಿರುದ್ಧ ಇರುವ ಅವರ ಸ್ಪಷ್ಟ ಹಾಗೂ ಗಟ್ಟಿತನದ ನುಡಿಗಳು ಇಂದು ತೀರ ಅಗತ್ಯವೆನಿಸಿವೆ. ಕನ್ನಡ ನಾಡಿನಲ್ಲಿಯೇ ಬಾಳಿ–ಬದುಕಿ ಮಾತೃಭೂಮಿಗೆ ದ್ರೋಹ ಬಗೆಯುವವರ ವಿರುದ್ಧ ಕುವೆಂಪು ಕಿಡಿಕಾರುತ್ತಾರೆ. ಪರಭಾಷಿಗರು ನಮ್ಮ ನೆಲದಲ್ಲಿ ತಳವೂರಿ ಕನ್ನಡ ನುಡಿಯನ್ನು ನಿರ್ಲಕ್ಷಿಸಿ ತಮ್ಮ ದರ್ಪ ಮೆರೆಯುತ್ತಿದ್ದಾರೆ.

"ಸಾಯುತಿದೆ ನಿಮ್ಮ ನುಡಿ ಓ ಕನ್ನಡದ ಕಂದರಿರ
ಹೊರನುಡಿಯ ಹೊರೆಯಿಂದ ಕುಸಿದು ಕುಗ್ಗಿ
ರಾಜನುಡಿಯೆಂದೊಂದು ರಾಷ್ಟ್ರನುಡಿಯೆಂದೊಂದು
ದೇವನುಡಿಯೆಂದೊಂದು ಹತ್ತಿ ಜಗ್ಗಿ
ನಿರನಿಟಿಲು ನಿಟಲೆಂದು ಮುದಿಮೂಳೆ ಮುರಿಯುತಿ

ಕನ್ನಡಮ್ಮನ ಬೆನ್ನು ಬಳುಕಿ ಬಗ್ಗಿ”

(ಸಾಯುತಿದೆ ನಿಮ್ಮ ನುಡಿ – ಕುವೆಂಪು)

ಎಂಬಲ್ಲಿ ಮುಂದೊಂದು ದಿನ ಕನ್ನಡ ನಾಡಿನಲ್ಲಿ ಕನ್ನಡಿಗರೇ ಪರದೇಶಿಗಳಾಗುತ್ತಾರೆ. ಕನ್ನಡಮ್ಮ ನಲುಗಿಹೋಗುತ್ತಾಳೆ ಎಂಬುದನ್ನು ನೋವಿನಿಂದ ನುಡಿಯುತ್ತಾ, ಕನ್ನಡಿಗರನ್ನು ಎಚ್ಚರಿಸಿದ್ದಾರೆ!!

‘ಜೈ ಭಾರತ ಜನನಿಯ

ತನುಜಾತೆ

ಜಯಹೇ ಕರ್ನಾಟಕ

ಮಾತೆ !

ಜಯ ಸುಂದರ ನದಿ

ವನಗಳ ನಾಡೇ

ಜಯಹೇ ರಸಋಷಿ

ಬೀಡೆ’

(ಜೈ ಭಾರತ ಜನನಿ – ಕುವೆಂಪು)

ಕುವೆಂಪು ಅವರ ಈ ಗೀತೆಯನ್ನು ಕ್ರಿ.ಶ.2004 ರಲ್ಲಿ ಕರ್ನಾಟಕ ಸರ್ಕಾರ ‘ನಾಡಗೀತೆ’ಯಾಗಿ ಸ್ವೀಕರಿಸಿದೆ. ಇದರಲ್ಲಿ ನಿಸರ್ಗದ ರಮಣೀಯತೆಯಿಂದ ಕಂಗೊಳಿಸುವ ಕರ್ನಾಟಕದಲ್ಲಿ ಸಾಹಿತ್ಯ ಕೃಷಿ, ಶಿಲ್ಪಕಲೆಯ ಸೊಬಗು, ಸಮಾನತೆಯ ಧರ್ಮಕ್ಕೆ ಕೊರತೆಯಿಲ್ಲ. ಸರ್ವಜನಾಂಗದ ಶಾಂತಿಯ ತೋಟದಂತಿರುವ ಕರ್ನಾಟಕ, ಭಾರತದ ರಾಜ್ಯಗಳಲ್ಲಿ ತನ್ನ ಸ್ಥಾನವನ್ನು ಕಂಡುಕೊಳ್ಳುವ ತನ್ನ ಅಕ್ಕಪಕ್ಕದ ರಾಜ್ಯಗಳ ಜನತೆಯೊಂದಿಗೆ ಸಹಬಾಳ್ವೆಯನ್ನು ಕಟ್ಟಿಕೊಳ್ಳುವ, ಆದರೆ ಅದೇ ಸಂದರ್ಭದಲ್ಲಿ ಅಭದ್ರತೆ ಮತ್ತು ಭಯಕ್ಕಿಂತ ಹೆಚ್ಚಾಗಿ ಆತ್ಮವಿಶ್ವಾಸ ಮತ್ತು ಶಕ್ತಿಯ ಸ್ಥಾನದಿಂದ ತನ್ನ ಸ್ವಾಭಿಮಾನ ಮತ್ತು ಘನತೆಯನ್ನು ಕಾಪಾಡಿಕೊಳ್ಳುವ ಕರ್ನಾಟಕದ ಚಿತ್ರಣ ನೀಡುತ್ತ ನಾಡು ನುಡಿಯ ಬಗ್ಗೆ ಅಭಿಮಾನ ವ್ಯಕ್ತಪಡಿಸುತ್ತಾರೆ. ಕರ್ನಾಟಕ ಭಾರತ ಮಾತೆಯ ಮಗಳೆಂದು ಸಾರಿ ಹೇಳುವ ಕುವೆಂಪು ಎಂದಿಗೂ ಭಾರತ ಮತ್ತು ಕರ್ನಾಟಕವನ್ನು ಪ್ರತ್ಯೇಕಿಸಿ ನೋಡಲಿಲ್ಲ. ಅವೆರಡೂ ಅವಿಭಾಜ್ಯ ಅಂಗಗಳಂತೆ ಎಂದರವರು ! ಇಂತಹ ಸಂಪದ್ಭರಿತವಾದ ಕನ್ನಡ ನಾಡನ್ನು ಸಂರಕ್ಷಿಸಿಕೊಳ್ಳುವ ಜವಾಬ್ದಾರಿ ಕನ್ನಡ ಜನರದ್ದಾಗಬೇಕು ಅದಕ್ಕಾಗಿಯೇ..

"ಕನ್ನಡಕೆ ಹೋರಾಡು ಕನ್ನಡದ ಕಂದ
ಕನ್ನಡವ ಕಾಪಾಡು ನನ್ನ ಆನಂದಾ
ಜೋಗುಳದ ಹರಕೆಯಿದು ಮರೆಯದಿರು ಚಿನ್ನ
ಮರೆತೆಯಾದರೆ ಅಯ್ಯೋ ಮರೆತಂತೆ ಚಿನ್ನ"

(ಕನ್ನಡಮ್ಮನ ಹರಕೆ – ಕುವೆಂಪು)

ಎಂದು ಕನ್ನಡಿಗರಿಗೆ ಕಿವಿ ಮಾತು ಹೇಳುತ್ತಾರೆ. ಪರಭಾಷೆಗಳ ವ್ಯಾಮೋಹಕ್ಕೆ ತುತ್ತಾಗಿ ತಾಯ್ನುಡಿಯನ್ನು ಕಡೆಗಣಿಸದಿರುವಂತೆ ಕಟುವಾಗಿಯೇ ಎಚ್ಚರಿಸುತ್ತಾರೆ. 'ಕನ್ನಡ ಕಾವ್ಯಗಳನ್ನೋದುವಾತನು ಅಮೇರಿಕದಲ್ಲಿದ್ದರೂ ಅದು ಕರ್ನಾಟಕವೆ. ಪಂಪನೋದುವ ನಾಲಿಗೆ ಮಿಸಿಸಿಪಿ ಹೊಳೆಯ ನೀರನ್ನು ಈಂಟಿದರೂ ಅದು ಕಾವೇರಿಯೇ ಕುಮಾರವ್ಯಾಸನನಾಲಿಪ ಕಿವಿ ಆಂಡೀಸ್ ಪರ್ವತವನ್ನೇರುತ್ತಿದ್ದರೂ ಅದು ಸಹ್ಯಾದ್ರಿಯೆ' ಎನ್ನುತ್ತಾರೆ ಕುವೆಂಪು. "ನುಡಿಯೊಲ್ಮೆಯೊಂದಿದ್ದರೆ ದೇಶ ದೇವಿಯ ಗುಡಿಯ ಕಟ್ಟಡದ ಕಲ್ಲುಗಳ ಬೆಸುಗೆಗೆ ವಜ್ರಗಾರೆಯಾಗುತ್ತದೆ. ಆ ಒಲ್ಮೆ ಮಡಿದಂದು ಕಟ್ಟಡದ ಕಲ್ಲುಗಳು ಸಡಿಲಗೊಂಡು ಗುಡಿಕೆಳಕ್ಕುರುಳಿ ನೆಲಸಮವಾಗುತ್ತದೆ" (5) ಹಾಗಾಗದಂತೆ ಕನ್ನಡಿಗರಾದ ನಾವೆಲ್ಲರೂ ಜಾಗೃತಿ ವಹಿಸಬೇಕಿದೆ. ತಾಯಿನುಡಿಯನ್ನು ಪೋಷಿಸಿ ಬೆಳೆಸುವ ಹೊಣೆ ಎಲ್ಲ ಕನ್ನಡಿಗರದ್ದಾಗಬೇಕು. ಹಾಗೆಂದ ಮಾತ್ರಕ್ಕೆ "ಕರ್ನಾಟಕ, ಕನ್ನಡ ಇಷ್ಟೇ ಸಂಕುಚಿತದಲ್ಲಿ ನಿಮ್ಮ ಪ್ರಜ್ಞೆ ಇಟ್ಟು ಕೊಳ್ಳುವುದು ಬೇಡ. ನಾನೂ ಕರ್ನಾಟಕಕ್ಕಾಗಿ, ಕನ್ನಡಕ್ಕಾಗಿ ಕೆಲಸ ಮಾಡಿದ್ದೇನೆ. ಆದರೆ ನನ್ನ ಪ್ರಜ್ಞೆ ವಿಶ್ವಪ್ರಜ್ಞೆ" (6) ಎನ್ನುವ ಕುವೆಂಪು ಮಾತೃಭಾಷೆಯನ್ನು ಸಂರಕ್ಷಿಸುವ ಕರ್ತವ್ಯದೊಂದಿಗೆ, ಜ್ಞಾನಸಂಪಾದನೆಗೆ ಪರಭಾಷೆಗಳನ್ನು ದ್ವೇಷಿಸದೇ ಗೌರವಿಸುವ ಗುಣ ನಮ್ಮದಾಗಬೇಕು. ಅಂದಾಗಲೇ ವಿಶ್ವಮಾನವರಾಗಿ ಬೆಳೆಯಲು ಸಾಧ್ಯವಾಗುತ್ತದೆ.

'ಮೊಲೆಯ ಹಾಲೆಂತಂತೆ
ಸವಿಜೇನು ಬಾಯ್ಕೆ
ತಾಯಿಯಪ್ಪುಗೆಯಂತೆ
ಬಲು ಸೊಗಸು ಮೇಯ್ಗೆ
ಗುರುವಿನೊಳ್ನುಡಿಯಂತೆ
ಶ್ರೇಯಸ್ಸು ಬಾಳ್ಗೆ
ತಾಯ್ನುಡಿಗೆ ದುಡಿದು ಮಡಿ
ಇಹ ಪರಗಳೇಳ್ಗೆ"

(ಕನ್ನಡಮ್ಮನ ಹರಕೆ – ಕುವೆಂಪು)

'ತಾಯ್ನಾಡು' ಹೆತ್ತ ತಾಯಿಯಷ್ಟೇ ಪೂಜನೀಯ ! ಮಾತೃಭೂಮಿ ನಮಗೆಲ್ಲ ಆಸರೆಯನಿತ್ತು ಪೊರೆಯುತಿರುವ ಜನನಿಯಷ್ಟೇ ಪವಿತ್ರಳು. ಹಾಗಾಗಿ ಮಣ್ಣಿನ ಋಣ ತೀರಿಸಬೇಕಾದ್ದು ಪ್ರತಿಯೊಬ್ಬ ಮನುಷ್ಯನ ಆದ್ಯ ಕರ್ತವ್ಯ ಕೂಡ ! 'ಕನ್ನಡ ನಾಡಿನ ರಾಜಧಾನಿಯಲ್ಲಿ ಕನ್ನಡವೇ ಅಗ್ರಗಣ್ಯ ಮತ್ತು ಅಗ್ರಮಾನ್ಯ. ಆಡಳಿತ ಭಾಷೆಯಿಂದ ಹಿಡಿದು ಶಿಕ್ಷಣ ಮಾಧ್ಯಮದವರೆಗೂ ಸರ್ವಕ್ಷೇತ್ರಗಳಲ್ಲಿಯೂ ಕನ್ನಡ ಭಾಷೆಗೇ ಅಗ್ರಸ್ಥಾನವಿರಬೇಕು" ಎನ್ನುವ ಕುವೆಂಪು ಪರಭಾಷೆಗಳ ಗಾಳಕ್ಕೆ ಸಿಕ್ಕು ನಮ್ಮತನವನ್ನು ಮರೆತದ್ದೇ ಆದಲ್ಲಿ ಅದು 'ತಾಯ್ನಾಡು-ತಾಯ್ನುಡಿ'ಗೆ ಮಾಡುವ ಅಪಮಾನವೇ ಸರಿ !

"ರನ್ನ ಪಂಪರ ನಚ್ಚು
ಕನ್ನಡದ ಸೊಲ್ಲು
ಬಸವದೇವನ ಮೆಚ್ಚು
ಹರಿಹರನ ಗೆಲ್ಲು ;
ನಾರಣಪ್ಪನ ಕೆಚ್ಚು
ಬತ್ತಳಿಕೆ ಬಿಲ್ಲು
ಕನ್ನಡವ ಕೊಲುವ ಮುನ್
ಓ ನನ್ನ ಕೊಲ್ಲು"

(ಕನ್ನಡಮ್ಮನ ಹರಕೆ – ಕುವೆಂಪು)

ಎಂದು ಕಟುವಾಗಿ ಪ್ರತಿಕ್ರಿಯಿಸಿರುವ ಕುವೆಂಪು, ಸಮೃದ್ಧಯುತವಾದ ನಾಡು-ನುಡಿಯಲ್ಲಿ ಸಾಹಿತ್ಯ ಕಟ್ಟಿ ಸಮರ್ಪಿಸಿದ ನಮ್ಮ ಪುರಾತನರ ಮಾರ್ಗಾನುಸರಣಿ ನಮ್ಮದಾಗಬೇಕಿದೆ. ನಾಡು ನುಡಿಗಾಗಿ ತನು-ಮನವನ್ನು ಸಮರ್ಪಿಸಲೂ ಸನ್ನದ್ಧರಾಗಬೇಕು. ಅದು ಬಿಟ್ಟು ಕನ್ನಡ ನಾಡು-ನುಡಿಯ ಬಗ್ಗೆ ಅಪಮಾನಿಸುವವರು, ಧಿಕ್ಕರಿಸುವವರು, ಹೀಯಾಳಿಸುವವರು ಯಾರಾದರೂ ಇದ್ದರೆ ಅಂಥವರು 'ಮೊದಲು ನನ್ನನ್ನು ಕೊಲ್ಲಲಿ' ಎಂಬ ಕಟುವಾದ ನಿಲುವು ತಳೆಯುತ್ತಾರೆ ಕುವೆಂಪು !

" ಕರ್ನಾಟಕ ಎಂಬುದೇನು
ಹೆಸರೆ ಬರಿಯ ಮಣ್ಣಿಗೆ ?
ಮಂತ್ರ ಕಣಾ ! ಶಕ್ತಿ ಕಣಾ !
ತಾಯಿ ಕಣಾ ! ದೇವಿ ಕಣಾ !

ಬೆಂಕಿ ಕಣಾ ! ಸಿಡಿಲು ಕಣಾ !”

(ಅಖಂಡ ಕರ್ನಾಟಕ – ಕುವೆಂಪು)

ಕರ್ನಾಟಕವೆಂಬುದು ಬರಿ ಮಣ್ಣಿನ ತಾಣವಲ್ಲ ಅದು ಶತಮಾನಗಳಿಂದ ನೂರಾರು ಋಷಿ ಮುನಿಗಳು ತಪಗೈದು ಮಂತ್ರ ಪಠಿಸಿದ ಪವಿತ್ರಸ್ಥಳ. ಕನ್ನಡ ಮಾತೆ ತನ್ನ ನೆಲದಲ್ಲಿ ಹುಟ್ಟಿ ಬೆಳೆದ ಮಕ್ಕಳನ್ನು ತಾಯಾಗಿ, ಆದಿಶಕ್ತಿಯಾಗಿ ಸಂರಕ್ಷಿಸುತ್ತಾಳೆ. ಅವರ ಬದುಕಿಗೆ ಆಸರೆಯಾಗಿ ನಿಂತು ಕಾಪಾಡುತ್ತಾಳೆ. ಕರ್ಣಾಟಕದ ಮಣ್ಣಿನಲ್ಲಿ ತಪಶ್ಶಕ್ತಿ, ದೈವೀಗುಣ, ಮಾತೃವಾತ್ಸಲ್ಯ, ಎಲ್ಲವೂ ಅಡಗಿದೆ. ನಾಡು–ನುಡಿಯ ಬಗ್ಗೆ ಅವಮಾನಿಸುವವರಿಗೆ ಬೆಂಕಿಯಾಗಿ, ಸಿಡಿಲಾಗಿ ಅಬ್ಬರಿಸುವ ದೈತ್ಯಪ್ರತಿಭೆಯೂ ಅವಳ ಮಕ್ಕಳಲ್ಲುಂಟು ಕನ್ನಡಿಗರು ಕೆಚ್ಚೆದೆಯ ವೀರರು. ಕನ್ನಡ ತಾಯ ಮಡಿಲಲ್ಲಿ ಜನಿಸಿದ ಕನ್ನಡಿಗರೇ ನಿಜವಾದ ಪುಣ್ಯಾತ್ಮರು ! ಏಕೆಂದರೆ “ನಮ್ಮ ಕನ್ನಡ ನಾಡಿಗೆ ದೇವರು ಸಹ್ಯಾದ್ರಿಯನ್ನು ದಯಪಾಲಿಸಿದ್ದಾನೆ. ತುಂಗಾ–ಕಾವೇರಿಯನ್ನು ದಯಪಾಲಿಸಿದ್ದಾನೆ. ಪಶ್ಚಿಮ ಸಮುದ್ರದ ಸಂಗ ಸಾನಿಧ್ಯಗಳನ್ನು ಕೃಪೆ ಮಾಡಿದ್ದಾನೆ. ಜೊತೆಗೆ ಅವೆಲ್ಲಕ್ಕೂ ಹೆಗಲೆಣೆಯಾಗಿ ನಿಂತರೂ ನಮಗೆ ಒಡನಾಡಿಗಳಾಗಿರುವಂತೆ ಪಂಪ ನಾರಣಪ್ಪರನ್ನು ಅನುಗ್ರಹಿಸಿದ್ದಾನೆ”(7). ಇಷ್ಟೊಂದು ಸಮೃದ್ಧಯುತವಾದ ಕನ್ನಡ ನಾಡು–ನುಡಿ ನಮ್ಮದು ಎಂದು ಹೇಳುವುದೇ ಹೆಮ್ಮೆಯ ಸಂಗತಿ.

ಕುವೆಂಪು ಅವರು ಹೇಳುವ ಹಾಗೆ – ``Many of the westerners, evn those who have not stepped up the university’s have made great discoveries in the science, the reason is that they think in their languages’’ (8) ಎಂಬಲ್ಲಿ ಮಾತೃಭಾಷೆಯಿಂದ ಎಲ್ಲವನ್ನೂ ಜಯಿಸಲು, ಸಾಧಿಸಲು ಸಾಧ್ಯವಾಗುವುದು ಹಾಗಾಗಿ ನಮ್ಮ ನಾಡು ನುಡಿಗೆ ಪ್ರಥಮ ಆದ್ಯತೆ ಇರಬೇಕೆನ್ನುವುದನ್ನು ಒತ್ತಿ ಹೇಳುವುದರ ಮೂಲಕ ಕನ್ನಡ ಪರ ಕಾಳಜಿಗೆ ಸಾಕ್ಷಿಯಾಗಿದ್ದಾರೆ.

“ನಾನು ಅವಧೂತನಾಗಿ ಹೋಗುವುದಿಲ್ಲ. ಕನ್ನಡವು ತನ್ನ ಸ್ಥಾನವನ್ನು ಅಧಿಕೃತವಾಗಿ ಪಡೆಯುವ ತನಕ, ನನ್ನ ಪ್ರಾಣವಿರುವ ತನಕ, ಕನ್ನಡಕ್ಕಾಗಿ ದುಡಿಯುವುದು, ಕನ್ನಡಕ್ಕಾಗಿ ವ್ಯಕ್ತಿಗಳನ್ನು ದುಡಿಯಲು ಪ್ರಚೋದಿಸುವುದು, ಅದಕ್ಕಾಗಿ ಭಗವಂತನಲ್ಲಿ ಮೊರೆಯಿಡುವುದು ಮಾಡುತ್ತೇನೆ. ನನ್ನೆಲ್ಲ ತಃಪಶಕ್ತಿಯನ್ನು ಅಥವಾ ಪ್ರಾರ್ಥನಾ ಶಕ್ತಿಯನ್ನು ಕನ್ನಡದ ಸೇವೆಗಾಗಿ ಮೀಸಲಿಡುತ್ತೇನೆ”(9) ಎಂದು

ಪಣತೊಡುವ ಕುವೆಂಪು ಅವರಂತಹ ನಾಡಿನ ಹಿರಿಯರ ಪ್ರಯತ್ನ ಪೂರ್ವಕ ಶ್ರಮ ಮತ್ತು ಕಾಳಜಿಯ ಪ್ರತಿಫಲವಾಗಿಯೇ ಇಂದು ಕನ್ನಡ ನಾಡು ದೇಶ–ವಿದೇಶಗಳಲ್ಲಿ ತನ್ನನ್ನು ಗುರುತಿಸಿಕೊಳ್ಳಲು ಸಾಧ್ಯವಾಗಿರುವುದು.

ನಾಡು–ನುಡಿಯ ಸಂರಕ್ಷಣೆ ಕೇವಲ ನಮ್ಮ ಹಿರಿಯರದಷ್ಟೇ ಅಲ್ಲ. ಅವರು ಉಳಿಸಿ ಬೆಳೆಸಿದ ನಾಡಿನ ಸಂಪತ್ತನ್ನು, ಭಾಷಾ ಸಾಹಿತ್ಯವನ್ನೂ ಮತ್ತಷ್ಟು ಗಟ್ಟಿಗೊಳಿಸುವ ಜವಾಬ್ದಾರಿ ಎಲ್ಲ ಕನ್ನಡಿಗರದ್ದೂ ಆಗಿರಬೇಕಾದ್ದು ಅಗತ್ಯ ಮತ್ತು ಅನಿವಾರ್ಯವಾದುದು. ಕವಿ ಕುವೆಂಪು ಅವರಂತೆ ಪ್ರತಿಯೊಬ್ಬ ಕನ್ನಡಿಗನೂ ತನ್ನ ನಾಡು–ನುಡಿಗಾಗಿ ಸಮರ್ಪಿಸಿಕೊಂಡದ್ದೇ ಆದಲ್ಲಿ ಅದೆಷ್ಟೋ ಆಕ್ರಮಣಗಳು ನಡೆದರೂ ಅವುಗಳಿಗೆಲ್ಲ ಜಗ್ಗದೇ ವಿಶ್ವ ಭೂಪಟದಲ್ಲಿ ನಕ್ಷತ್ರದಂತೆ ಮಿನುಗಲು ತನ್ನ ತನದ ದೇಸೀ ಸೊಗಡಿನಿಂದ ಅದು ಸದಾ ಕಂಗೊಳಿಸುವಂತಾಗುವಲ್ಲಿ ಯಾವುದೇ ಅನುಮಾನವಿಲ್ಲ. ಕನ್ನಡದ ಡಿಂಡಿಮವನ್ನು ವಿಶ್ವದೆತ್ತರಕ್ಕೆ ಮೊಳಗಿಸಲು ಕುವೆಂಪು ಅವರಂತೆ ಕನ್ನಡಿಗರೆಲ್ಲರೂ ಮುಂದಾಗಬೇಕಿರುವುದು ಅನಿವಾರ್ಯವಾಗಿದೆ.

ಅಡಿ ಟಿಪ್ಪಣಿಗಳು :

1. ಮನುಜಮತ ವಿಶ್ವಪಥ ; ಕುವೆಂಪು ; ಉದಯರವಿ ಪ್ರಕಾಶನ, ಮೈಸೂರು : 2014 : ಪುಟ–1
2. ವಿಚಾರಕ್ರಾಂತಿಗೆ ಆಹ್ವಾನ ; ಕುವೆಂಪು ; ಉದಯರವಿ ಪ್ರಕಾಶನ, ಮೈಸೂರು : 2015 : ಪುಟ – 41
3. ಅಣ್ಣನ ನೆನಪು ; ಕೆ.ಪಿ.ಪೂರ್ಣಚಂದ್ರ ತೇಜಸ್ವಿ ; ಪುಸ್ತಕ ಪ್ರಕಾಶನ, ಮೈಸೂರು ; 2014 ; ಪುಟ – 130
4. ವಿಚಾರಕ್ರಾಂತಿಗೆ ಆಹ್ವಾನ ; ಕುವೆಂಪು ; ಉದಯರವಿ ಪ್ರಕಾಶನ, ಮೈಸೂರು : 2015 : ಪುಟ – 36
5. ವಿಚಾರಕ್ರಾಂತಿಗೆ ಆಹ್ವಾನ ; ಕುವೆಂಪು ; ಉದಯರವಿ ಪ್ರಕಾಶನ, ಮೈಸೂರು : 2015 : ಪುಟ – 72
6. ವಿಚಾರಕ್ರಾಂತಿಗೆ ಆಹ್ವಾನ ; ಕುವೆಂಪು ; ಉದಯರವಿ ಪ್ರಕಾಶನ, ಮೈಸೂರು : 2015 : ಪುಟ – 65
7. ಕುವೆಂಪು ನುಡಿತೋರಣ ; ಬಿ.ಆರ್.ಸತ್ಯನಾರಾಯಣ ; ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ ಕುಪ್ಪಳ್ಳಿ ; 2018 ; ಪುಟ–95

8. ಮನುಜಮತ ವಿಶ್ವಪಥ ; ಕುವೆಂಪು ; ಉದಯರವಿ ಪ್ರಕಾಶನ, ಮೈಸೂರು : 2014 : ಪುಟ–50

9. ಅಣ್ಣನ ನೆನಪು ; ಕೆ.ಪಿ.ಪೂರ್ಣಚಂದ್ರ ತೇಜಸ್ವಿ ; ಪುಸ್ತಕ ಪ್ರಕಾಶನ, ಮೈಸೂರು ; 2014 ; ಪುಟ – 168

ಆಕರ ಗ್ರಂಥಗಳು :

1. ಅಣ್ಣನ ನೆನಪು ; ಕೆ.ಪಿ.ಪೂರ್ಣಚಂದ್ರ ತೇಜಸ್ವಿ ; ಪುಸ್ತಕ ಪ್ರಕಾಶನ, ಮೈಸೂರು ; 2014
2. ಮನುಜಮತ ವಿಶ್ವಪಥ ; ಕುವೆಂಪು ; ಉದಯರವಿ ಪ್ರಕಾಶನ, ಮೈಸೂರು : 2014
3. ವಿಚಾರಕ್ರಾಂತಿಗೆ ಆಹ್ವಾನ ; ಕುವೆಂಪು ; ಉದಯರವಿ ಪ್ರಕಾಶನ, ಮೈಸೂರು : 2015
4. ಕುವೆಂಪು ನುಡಿತೋರಣ ; ಬಿ.ಆರ್.ಸತ್ಯನಾರಾಯಣ ; ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ ಕುಪ್ಪಳ್ಳಿ ; 2018
5. ಕೋಗಿಲೆ ಮತ್ತು ಸೋವಿಯೆಟ್ ರಷ್ಯಾ ; ಕುವೆಂಪು ; ಉದಯರವಿ ಪ್ರಕಾಶನ, ಮೈಸೂರು ; 2012
6. ಇಕ್ಷು ಗಂಗೋತ್ರಿ ; ಕುವೆಂಪು ; ಉದಯರವಿ ಪ್ರಕಾಶನ, ಮೈಸೂರು ; 2021
7. ಪುಷ್ಪಿ ನಮನ ; ಕುವೆಂಪು ; ಉದಯರವಿ ಪ್ರಕಾಶನ, ಮೈಸೂರು ; 2021
8. ಕುವೆಂಪು ಸಮಗ್ರ ಸಾಹಿತ್ಯ ಮಾಲೆ ; ಕುವೆಂಪು ; ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ, ಕುಪ್ಪಳ್ಳಿ ; 2013

***

ಕಾಲಜ್ಞಾನಿ ಕನಕ ನಾಟಕದಲ್ಲಿರುವ ವೈಚಾರಿಕ ಪ್ರಜ್ಞೆ

1
ಡಾ. ಜಯಚಂದ್ರ ಶೇಖರ ವೈ.
ಸಹ ಪ್ರಾಧ್ಯಾಪಕರು
ಕನ್ನಡ ವಿಭಾಗ
ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು
ಯಲಹಂಕ ಉಪನಗರ, ಬೆಂಗಳೂರು–64

ಕಿ.ರಂ. ನಾಗರಾಜ ಅವರ ನಾಟಕವು ಒಟ್ಟು ಏಳು ದೃಶ್ಯಗಳನ್ನು ಒಳಗೊಂಡಿದ್ದು, ಕನಕದಾಸ, ವ್ಯಾಸರಾಯ, ಪುರಂದರದಾಸ, ಕೇಶವ, ಕನಕದಾಸರ ಸಂಗಡಿಗರು, ವ್ಯಾಸರಾಯರ ಶಿಷ್ಯರು, ಸಂಸ್ಕೃತ ಪಾಠಶಾಲೆ ಮತ್ತು ದೇವಸ್ಥಾನದ ಪಂಡಿತರು, ಭಟರು, ಹೀಗೆ ಕೆಲವು ಪಾತ್ರಗಳು ಬರುತ್ತವೆ. ಕನಕದಾಸರ ಮನಸ್ಸು ವೈರಾಗ್ಯದತ್ತ ಹೊರಳುವುದು, ವ್ಯಾಸರಾಯರಲ್ಲಿ ದಾಸತ್ವ ಪಡೆದ ನಂತರ ಕನಕದಾಸರು ಎದುರಿಸುವ ಬಗೆ ಬಗೆಯ ಪರೀಕ್ಷೆಗಳನ್ನು ರಚನೆಕಾರರು ಸೊಗಸಾಗಿ ಸೃಷ್ಟಿಸಿದ್ದಾರೆ.

ಕಿ.ರಂ ನಾಗರಾಜ್‌ರವರು ನಾಟಕವನ್ನು ಬರೆಯುವಾಗಲೇ ವೈಚಾರಿಕ ನಿಲುವಿನೊಂದಿಗೆ ನಾಟಕವನ್ನು ರಚಿಸಿ, ಕನಕರ ಬಗ್ಗೆ ಹೊಸದೊಂದು ವಿಚಾರವನ್ನು ಹೇಳಲು ಹೊರಟಿದ್ದಾರೆ. ಇಂದಿನ ಸಮಾಜದಲ್ಲಿ ತಳಮೂಲ ಸಂಸ್ಕೃತಿಯಿಂದ ಬಂದಂತಹ ಆನೇಕ ಜನರಿಗೆ ಮೇಲು ಕೀಳೆಂಬ ಭಾವನೆಯು ಸಮಾಜದಲ್ಲಿ

ಅವರನ್ನು ಅನಿಷ್ಟರು ಎಂಬಂತೆ ಪ್ರತಿಬಿಂಬಿಸುತ್ತಿದ್ದರು. ಆದರೆ ಈ ನಾಟಕದಲ್ಲಿ ಕೃಷ್ಣ ಪ್ರತ್ಯಕ್ಷವಾಗುವುದರ ಮೂಲಕ ಎಲ್ಲಾ ಜನಾಂಗಗಳಿಗೂ ನಾನು ಸೇರಿದವನು, ನನ್ನ ಭಕ್ತಿಯನ್ನು ಎಲ್ಲಾರಿಗೂ ನೀಡಿ, ಜನರಿಗೆ ಭಕ್ತಿಯ ಅರಿವನ್ನು ನೀಡುತ್ತೇನೆ ಎಂಬ ಭಕ್ತಿಯ ಮಹಾ ಸಾಗರದಲ್ಲಿರುವ ಜನರಿಗೆ ಮನದಟ್ಟು ಮಾಡುವ ಸಂದರ್ಭವನ್ನು ಕಾಣುತ್ತೇವೆ, ಅದರ ಜೊತೆಗೆ ಕನಕದಾಸರು 'ಸಾಮ್ರಾಟ್ ಅಶೋಕನ' ಮತ್ತು 'ಬಾಹುಬಲಿಯ' ರೀತಿಯಲ್ಲಿ ಯುದ್ಧವನ್ನು ಗೆದ್ದಿದ್ದರೂ ಅಲ್ಲಿ ನಡೆದ ಸಾವು ನೋವುಗಳನ್ನು ಗಮನಿಸಿ, ಇಷ್ಟು ಜನರ ಆಕ್ರಂದನಕ್ಕೆ ನಾನೇ ಕಾರಣನಾದೆ ಎಂಬಂತೆ ವೈರಾಗ್ಯವನ್ನು ತಾಳುವ ಮನಸ್ಥಿತಿ ಮತ್ತು ಮೇಲು ಕೀಳೆಂಬ ಭಾವನೆಯಿಂದ ದೂರವಾಗುವ ಸನ್ನಿವೇಶವನ್ನು ಸಹ ನಾಟಕದಲ್ಲಿ ಪ್ರಸ್ತುತಪಡಿಸಿದ್ದಾರೆ.

ಕನಕದಾಸರು ಜಾತೀಯ ಬಲೆಯಲ್ಲಿ ಸಿಕ್ಕಿಕೊಂಡಿರುವ ಜನರಿಗೆ ಸಮಾಜದಲ್ಲಿ ನೀವು ನಿಮ್ಮ ಕೆಲಸ, ಜೀವನ ಮತ್ತು ಬದುಕು ಇವುಗಳಿಗೆ ಅರಿವಿನ ಬೆಳಕನ್ನು ನೀಡುವುದರ ಮೂಲಕ ತಮ್ಮ ಗುರಿಯನ್ನು ಮತ್ತು ಸಮಾಜದಲ್ಲಿ ನೀವು ಸಮಾನತೆಯಿಂದ ಇರಬೇಕಾದರೆ ನಮಗೆ ಅಡ್ಡವಾಗಿರುವ ಜಾತಿ ತಾರತಮ್ಯವನ್ನು ಹೋಗಲಾಡಿಸುವುದು ಮುಖ್ಯ ಎಂಬುದನ್ನು ಕನಕದಾಸರ ಮೂಲಕ ನಾಗರಾಜ್‌ರವರು ಈ ನಾಟಕದಲ್ಲಿ ಹೇಳಿಸಿದ್ದಾರೆ. ಇಲ್ಲಿ ವ್ಯಾಸರಾಯರ ಚಿಂತನೆ, ಪುರಂದರ ದಾಸರ ವಿದ್ವತ್ತು ಇವುಗಳ ನಡುವೆ ಕನಕದಾಸರ ಭಕ್ತಿ ಇವೆಲ್ಲವೂ ಸಮಾಜದಲ್ಲಿ ಶ್ರೇಷ್ಠ ಎಂಬುದನ್ನು ತಿಳಿಸಿದ್ದಾರೆ.

ವಿಜಯನಗರ ಅರಸರ ಪರವಾಗಿ ಯುದ್ಧಕ್ಕೆ ಹೋಗಿ ಗೆದ್ದು ಬರುತ್ತಿರುವ ಕನಕ ನಾಯಕನನ್ನು ಸ್ವಾಗತಿಸುವ ಸಂಭ್ರಮದೊಂದಿಗೆ ನಾಟಕ ಆರಂಭಗೊಳ್ಳುತ್ತದೆ. ಊರ ಜನರಲ್ಲಿ ಸಂಭ್ರಮವಿದ್ದರೆ ಕನಕನಲ್ಲಿ ಯಾವ ಸಂಭ್ರಮವೂ ಇಲ್ಲದೆ ಯುದ್ಧದಿಂದ ಘಾಸಿಯಾದ ಮನದ ವ್ಯಾಕುಲತೆ ಹೆಚ್ಚಾಗಿರುತ್ತದೆ. ತನಗೆ ಜಯಕಾರ ಹಾಕುವವರಿಗೆ ವಂದಿಸುವ ಕನಕ, ತಾನಿನ್ನು ತನ್ನ 'ದೇವರ' ಮತ್ತು 'ಭಕ್ತಿ'ಯ ಹುಡುಕಾಟದಲ್ಲಿ ತೊಡಗಿ ದೇಶಾಂತರ ಹೋಗುವೆ ಎಂದು ಹೇಳುತ್ತಾನೆ. ಯುದ್ಧ ಎನ್ನುವುದು ಒಬ್ಬನ ಸ್ವಾರ್ಥಕ್ಕಾಗಿ ನಡೆಯುವ ಒಂದು ಕಾರ್ಯ, ನನ್ನ ಸ್ವಾರ್ಥಕ್ಕಾಗಿ ಎಷ್ಟೋ ಜನಗಳ ಜೀವಬಲಿ ನೀಡಬೇಕಾಯಿತು. ಈ ಯುದ್ಧ ಕೇವಲ ನಮ್ಮ ಸ್ವಾರ್ಥ ಆಗಿರುವುದರಿಂದ ಇನ್ನು ಮುಂದೆ ಶಸ್ತ್ರಾಸ್ತ್ರಗಳನ್ನು ಹಿಡಿದು ಒಬ್ಬನ ಸ್ವಾರ್ಥಕ್ಕಾಗಿ ಯುದ್ಧ ಮಾಡುವುದನ್ನು ಬಿಟ್ಟು ತರ್ಕದಿಂದ ಸಮಾಜದ ಜನತೆಗಾಗಿ ಯುದ್ಧ ಮಾಡಲು ನಾನು ಸಿದ್ಧನಿದ್ದೇನೆ ಎನ್ನುವ ತಾತ್ವಿಕ ಅಂಶವನ್ನು ಕಾಣುತ್ತೇವೆ. ಸಮಾಜದ ಎಷ್ಟೋ ಏರುಪೇರುಗಳನ್ನು

ಕಂಡಂತ ಕನಕನಿಗೆ ಈ ಯುದ್ಧದಿಂದ ವೈರಾಗ್ಯ ಮೂಡಿ ಜನರ ಒಳಿತಿಗಾಗಿ ನಾನು ಏನಾದರೂ ಮಾಡಬೇಕೆಂಬ ಸಾಮಾಜಿಕ ಮೌಲ್ಯವು ಮೂಡಿರುವುದನ್ನು ಗಮನಿಸುತ್ತೇವೆ. ಇದರ ಮೂಲಕ ನಾಟಕಕಾರರು ಯುದ್ಧವೇ ಮುಖ್ಯವಲ್ಲ, ಸಾವೊಂದೇ ಎಲ್ಲದಕ್ಕೂ ಅಂತ್ಯವಲ್ಲ, ಇದರೆಲ್ಲರ ಮುಖ್ಯವಾಗಿ ಮಾನವೀಯತೆ ಎದ್ದು ಕಾಣಿಸುತ್ತದೆ. ಪ್ರತಿಯೊಂದು ಸಾವಿಗೂ ಬೆಲೆ ಇದೆ, ಈ ಸಾವು ನೋವುಗಳ ಬದಲಾಗಿ ಸಮಾಜಕ್ಕೆ ನಮ್ಮಿಂದ ಬದಲಾವಣೆ ಮಾರ್ಗವೇನು ಎಂಬುದನ್ನು ಕನಕ ಹೇಳಹೊರಟಿದ್ದಾರೆ.

ಕನಕ ಕೃತಿ ರಚನೆಯಲ್ಲಿ ಮಗ್ನನಾಗಿರುವಾಗ ಸಂಸ್ಕೃತ ಪಾಠಶಾಲೆಯ ಪಂಡಿತರು ಬಂದು ತಾವೇ ಶ್ರೇಷ್ಠ! ತಮಗಿಂತ ನೀವೆಲ್ಲಾ ಕನಿಷ್ಠರು ಎಂಬಂತೆ ಗಲಾಟೆ ಮಾಡುತ್ತಾರೆ. ಕನಕನು ಪ್ರತಿನಿತ್ಯವೂ ಕಾಗಿನೆಲೆಯ ಆದಿಕೇಶವನ ದೇವಸ್ಥಾನದ ಮುಂದೆ ಕುಳಿತು ಪದಗಳನ್ನು ಕಟ್ಟಿ ಹಾಡಿ, 'ಜಾತಿ', 'ಮತ', 'ಕುಲ' ಯಾವುದೂ ಇಲ್ಲ ಎಂದು ಕೀರ್ತನೆಯ ಮೂಲಕ ಹಾಡಿ ಸಾರುವುದು ಪಂಡಿತರಿಗೆ ಇಷ್ಟವಾಗಿರುವುದಿಲ್ಲ. ಇದು ಅಧಿಕ ಪ್ರಸಂಗಿತನವೆಂದು, ಕನಕನು ಜನರ ತಲೆ ಕೆಡಿಸುವ ಯೋಜನೆ ಮಾಡಿ ಇದರಿಂದ ಮಠದ ಹುಡುಗರೂ ಕೆಟ್ಟು ಹಾಳಾಗುತ್ತಿದ್ದಾರೆ ಎಂದು ಆರೋಪಿಸುತ್ತಾರೆ. ಕನಕನಲ್ಲಿ ನಿಜವಾದ ಪಾಂಡಿತ್ಯವಿದ್ದರೆ ನಮ್ಮ ಪಾಠಶಾಲೆಯ ಆವರಣದಲ್ಲಿ ಪರೀಕ್ಷೆ ನಡೆಯಬೇಕು ಎಂದಾಗ ಕನಕ ಕೂಡ ಒಪ್ಪಿಕೊಳ್ಳುತ್ತಾನೆ. ಕನಕನ ಪಾಂಡಿತ್ಯವನ್ನು ಅರಿಯದ, ಕನಕನ ಮರ್ಮವನ್ನು ತಿಳಿಯದ ಸಂಸ್ಕೃತ ಪಾಠ ಶಾಲೆಯ ಪಂಡಿತರು ಜಾತಿ ಮತ್ತು ಕುಲಗಳ ಆಧಾರದ ಮೇಲೆ ಪಾಂಡಿತ್ಯವನ್ನು ಅಳೆಯುವ ಪ್ರಯತ್ನ ಮಾಡುತ್ತಾರೆ. ಸಮಾಜದ ವ್ಯವಸ್ಥೆಯನ್ನು ಕಾಣುವ ಕನಕದಾಸರು ಸಮಾಜಕ್ಕೆ ಅಂಟಿಕೊಂಡಿರುವ 'ಜಾತಿ', 'ಮೇಲು–ಕೀಳು', 'ಉಚ್ಚ–ನಿಕೃಷ್ಟ' ಎನ್ನುವಂತ ಪಿಡುಗನ್ನು ಕಿತ್ತುಹಾಕಿ ಸಾಮಾಜಿಕ ಮೌಲ್ಯವನ್ನು ಎತ್ತಿ ಹಿಡಿಯುವಂತ ಕೆಲಸಗಳನ್ನು ಮಾಡುತ್ತಾರೆ.

ರಾಮಧಾನ್ಯ ಚರಿತ್ರೆಯ ಕಥೆಯನ್ನು ಹೇಳುವ ಸಂದರ್ಭದಲ್ಲಿ ಅಕ್ಕಿಯೂ ಶ್ರೀಮಂತರ ಸಂಕೇತವಾಗಿದ್ದು, ರಾಗಿಯೂ ಬಡವರ ಸಂಕೇತವಾಗಿದೆ. ಈ ವಾದ ವಿವಾದದಲ್ಲಿ ಪಂಡಿತರು ರಾಮಧಾನ್ಯದಲ್ಲಿ ಅಕ್ಕಿಯೇ ಶ್ರೇಷ್ಠ ಎನ್ನುತ್ತಾರೆ, ರಾಗಿಯೂ ಕನಿಷ್ಠ ಎಂದು ಹೇಳಿ ಸಮಾಜದಲ್ಲಿ ಮೇಲು ಕೀಳೆಂಬ ಪರಿಕಲ್ಪನೆಯನ್ನು ತರುತ್ತಾರೆ. ಕಾಲಜ್ಞಾನಿ ಕನಕ ನಾಟಕಕ್ಕೆ ಅಂಬೇಡ್ಕರ್ ಅವರ ವಿಚಾರಧಾರೆಗಳು ಇವೆ ಎಂಬುದನ್ನು ನೆನಪಿಸಬಹುದು, ಏಕೆಂದರೆ ಅಸ್ಪೃಶ್ಯತೆಯ ಕಾರಣದಿಂದ ದೇವಸ್ಥಾನಗಳ ಪ್ರವೇಶಗಳನ್ನು ನಿಷೇಧಿಸಿರುವುದು ಅಂಬೇಡ್ಕರ್ ಕಾಲದಲ್ಲಿಯೂ ಕಂಡಿದ್ದೇವೆ. ಈ ನಾಟಕದಲ್ಲಿ

ಕನಕದಾಸರನ್ನು ಕೆಳವರ್ಗದವರು ಎಂಬ ಕಾರಣಕ್ಕೆ ಅವರನ್ನು ದೇವಸ್ಥಾನದ ಒಳಗಡೆ ಬಿಡದೆ ಜಾತಿ ಮತ ಧರ್ಮಗಳ ಅಡಿಯಲ್ಲಿ ಅವರನ್ನು ದೂರತಳ್ಳುವ ಪ್ರಸಂಗಗಳನ್ನು ಸೃಷ್ಟಿಸಿದ್ದಾರೆ. ಹಾಗಾಗಿ ಕನಕದಾಸರು ಕೀರ್ತನೆಗಳನ್ನು ಹಾಡುತ್ತಾ ಸಮಾಜದಲ್ಲಿರುವ ಜಾತಿತಾರತಮ್ಯವನ್ನು ಹೋಗಲಾಡಿಸುವ ಸಲುವಾಗಿ ಕೀರ್ತನೆಗಳನ್ನು ರಚಿಸಿ ಅವುಗಳನ್ನು ಹಾಡುವುದರ ಮೂಲಕ ಸಾಮಾಜಿಕ ಮೌಲ್ಯ, ಅಸಮಾನತೆ, ಬಹಿಷ್ಕಾರಗಳಂತಹ ವ್ಯಕ್ತಿತ್ವಗಳನ್ನು ತಳ್ಳುವ ಕೆಲಸವನ್ನು ಮಾಡಿದ್ದಾರೆ.

ಈ ನಾಟಕದಲ್ಲಿ ದೇವರು ನಿಜವಾಗ ಭಕ್ತರಿಗೆ ಮಾತ್ರ ಒಲಿಯುತ್ತಾನೆ. ಆಂತರಂಗದಲ್ಲಿ ದೇವರ ಧ್ಯಾನವನ್ನು ಮಾಡಿ, ಸಮಾಜದ ಓಳಿತಿಗಾಗಿ ಯಾರು ಶ್ರಮಿಸುತ್ತಾರೋ ಅವರಿಗೆ ಮಾತ್ರ ಓಲಿಯುವನೆಂದು ಹೇಳಿದ್ದಾರೆ. ಸಾಮಾನ್ಯ ಜನರಿಗೆ ಇವತ್ತಿನ ದಿನಗಳಲ್ಲಿ ಹೆಚ್ಚು ದೇವಸ್ಥಾನಕ್ಕೆ ನೇರವಾದ ಪ್ರವೇಶವಿಲ್ಲದೆ! ದೇವರುಗಳನ್ನು ಮುಟ್ಟಿ ನಮಸ್ಕಾರ ಮಾಡುವ ಸ್ವತಂತ್ರವಿಲ್ಲದೆ! ಕೆಟ್ಟ ಪರಿಸ್ಥಿತಿಯನ್ನು ಸಹಾ ತಿಳಿಸಿದ್ದಾರೆ. ಇಂದಿಗೂ ಸಮಾಜದಲ್ಲಿ ಬೇರೆಯವರ ಆಡಳಿತದ ಅಡಿಯಲ್ಲಿ ದೇವರುಗಳು ಇದ್ದಾರೆ. ಇವತ್ತಿಗೂ ಕೆಲವು ದೇವಸ್ಥಾನಗಳಿಗೆ ಹೋಗುವಂತ ಅವಕಾಶ ನಿರ್ಬಂಧಿಸಿದ್ದಾರೆ, ಕಾರಣ 'ಮೇಲ್ಜಾತಿಯಾಗಿರಬಹುದು'? ಅಥವಾ 'ವರ್ಣ ವರ್ಗದ ಮೇಲಾಗಿರಬಹುದು'? ಅಥವಾ 'ಮೇಲು ಕೀಳರಿಮೆ' ಆಗಿರಬಹುದು! ಅದು ಕೂಡ ಸತ್ಯ, ಅಂದ್ರೆ ಕೆಲವು ದೇವತೆಗಳು ಕೇಲವರಿಗೆ ಮಾತ್ರ ಸೀಮಿತವಾಗಿದೆ, ಆದರೆ ಸಾಮಾನ್ಯ ಜನರಿಗೆ ಮುಟ್ಟಿ ನಮಸ್ಕಾರಿಸುವಂತ ದೇವತೆಗಳಂದ್ರೆ ಗ್ರಾಮ ದೇವತೆಗಳು, ಅಂದರೆ ಹಳ್ಳಿ ಭಾಗದಲ್ಲಿ ಬರುವಂತಹ 'ಕೆಂಚಮ್ಮ', 'ದುರ್ಗಮ್ಮ', 'ಸಂಕಲಮ್ಮ', 'ಗಾಳಮ್ಮ', 'ಮಾರಮ್ಮ' ಈ ರೀತಿಯ ದೇವತೆಗಳನ್ನು ಸಾಮಾನ್ಯವಾಗಿ ಮುಟ್ಟಿ ಆರಾಧಿಸಿ ನಮಸ್ಕರಿಸುವಂತ ಭಾಗ್ಯ ಇರುತ್ತದೆ, ಏಕೆಂದರೆ ಈ ದೇವತೆಗಳು ಕೆಳವರ್ಗದ ಜನರಿಗೆ ಮೀಸಲು ಎನ್ನುವಂತ ನಂಬಿಕೆಯನ್ನು ತಂದಿದ್ದಾರೆ. ಎಲ್ಲಾ ದೇವರು ಮತ್ತು ದೇವಸ್ಥಾನ ಎಲ್ಲರಿಗೂ ಸೇರತಕ್ಕದ್ದು ಎಂದು ನಾಟಕದ ಮೂಲಕ ಹೇಳಿದ್ದಾರೆ. ಇನ್ನು ಬಹುತೇಕ 'ವೈದಿಕ ಧರ್ಮಗಳಲ್ಲಿ ಕೆಲವು ದೇವರುಗಳು ಅವರ ವಶದಲ್ಲೇ ಇದ್ದಾವೆ', ಅವರ 'ಕೈಗೊಂಬೆಗಳಾಗಿದ್ದಾರೆ', 'ಕೆಲವರ ಆಸ್ತಿಗಳಾಗಿವೆ', 'ಕೆಲವರ ಹಕ್ಕುಗಳಾಗಿವೆ', 'ಮಡಿಮೈಲಿಗೆ ಯನ್ನುವಂತದ್ದಾಗಿರಬಹುದು', 'ಆಚಾರ ವಿಚಾರ ಅನ್ನುವಂಥದ್ದು ಆಗಿರಬಹುದು', 'ಜಾತಿ ಮೇಲು ಕೀಳು ಅನ್ನುವಂತ ಕಾರಣ'ದಿಂದ ಎಲ್ಲರಿಗೂ ಎಲ್ಲಾ ದೇವರು ದಕ್ಕುವುದಿಲ್ಲದಂತೆ ಮಾಡಿದ್ದಾರೆ. ಇಂತಹ ಪದ್ಧತಿಗಳಿಂದ ದೇವರುಗಳನ್ನು ಬಿಡುಗಡೆ ಮಾಡುವಂತಹ ದೃಶ್ಯವನ್ನು ಕಿ.ರಂ ನಾಗರಾಜ್ ಅವರು

ಬಹಳ ಸುಂದರವಾಗಿ ಕಟ್ಟಿಕೊಟ್ಟಿದ್ದಾರೆ. ನಂತರ ಕನಕದಾಸರು ಮತ್ತು ಸಂಗಡಿಗರು ದೇವಸ್ಥಾನದ ಪ್ರವೇಶ ಮಾಡಬೇಕೆಂದು ಬಂದಾಗ ಅಲ್ಲಿರುವ ಪಂಡಿತರು ಇವರನ್ನು ಒಳಗಡೆ ಬಿಡುವುದಿಲ್ಲ, ಆಗ ಅವರಿಬ್ಬರ ನಡುವೆ ಘರ್ಷಣೆಯಾಗುತ್ತದೆ. ಕೋಪಗೊಂಡ ಪಂಡಿತರು ಕೋಲಿನಿಂದ ಕನಕನ ತಲೆಗೆ ಹೊಡೆದು ಹೋಗುತ್ತಾರೆ. ಈ ಮೂಲಕ ನಾಟಕಕಾರರು ಮೇಲ್ವರ್ಗದವರು ಕೆಳ ವರ್ಗದವರಿಗೆ ಶೋಷಣೆ ಮಾಡುವ ಪರಿಯನ್ನು ತೋರಿಸಿದ್ದಾರೆ. ಕೃಷ್ಣನೇ ಪ್ರತ್ಯಕ್ಷವಾಗಿ ಕನಕನನ್ನು ಎಚ್ಚರಿಸುವುದರ ಮೂಲಕ ನಿಜವಾದ ಭಕ್ತಿಗೆ ದೇವರು ಒಲಿದು ಅವನಿಗೆ ಬೇಕಾದ ಪ್ರೀತಿ ಮತ್ತು ಭಕ್ತಿಯನ್ನು ನೀಡುತ್ತಾನೆ ಎಂಬ ಸಂದೇಶವನ್ನು ಕೊಟ್ಟಿದ್ದಾರೆ.

ಕನಕದಾಸರು ವ್ಯಾಸರಾಯರನ್ನು ಮತ್ತು ಪುರಂದರದಾಸರನ್ನು ಭೇಟಿ ಮಾಡುವ ಸಂದರ್ಭವನ್ನು ತುಂಬಾ ಚೆನ್ನಾಗಿ ಕಟ್ಟಿಕೊಟ್ಟಿದ್ದಾರೆ. ಜ್ಞಾನವಂತರಲ್ಲಿ ಯಾವುದೇ ಜಾತಿ ತಾರತಮ್ಯ ಇರುವುದಿಲ್ಲ, ಅವರು ಎಲ್ಲರನ್ನು ಒಂದೇ ಎನ್ನುಂತಹ ಕಲ್ಪನೆಯನ್ನು ತಿಳಿಸಿದ್ದಾರೆ. ಉಡುಪಿಯ ಮಠದಲ್ಲಿ ವ್ಯಾಸರಾಯರ ಮೂಲಕ ಅವರ ಶಿಷ್ಯರಿಗೂ ಮತ್ತು ಕನಕದಾಸರಿಗೆ ಬಾಳೆಹಣ್ಣನ್ನು ಯಾರು ಇಲ್ಲದ ಪ್ರದೇಶದಲ್ಲಿ ತಿನ್ನಬೇಕೆನ್ನುವ ಜಿಜ್ಞಾಸೆಯನ್ನು ನೀಡಿದಾಗ ಪ್ರತಿಯೊಬ್ಬ ಶಿಷ್ಯರು ಒಂದೊಂದು ಕಡೆ ಹೋಗಿ ಬಾಳೆಹಣ್ಣನ್ನು ತಿನ್ನುತ್ತಾರೆ. ಒಬ್ಬರು 'ಮೋಟು ಗೋಡೆಯ ಹಿಂದೆ ಅವಿತು'ಕೊಂಡು ತಿನ್ನುತ್ತಾರೆ, ಊರಾಚೆ ಇರುವ ಗುಡ್ಡದ ಮೇಲಿನ ಬಂಡೆಯ ಕೆಳಗೆ' ಮರೆಯಾಗಿ ತಿಂದನು, 'ಉಗ್ರಾಣದ ಕೋಣೆಯ ಕಿಟಕಿ ಬಾಗಿಲು ಹಾಕಿಕೊಂಡು' ತಿಂದೆ ಎನ್ನುತ್ತಾನೆ, ಹೀಗೆ ಒಬ್ಬೊಬ್ಬರು ಒಂದೊಂದು ಕಡೆ ತಿನ್ನುತ್ತಾರೆ, ಆದರೆ ಕನಕದಾಸರು ಬಾಳೆಹಣ್ಣನ್ನು ಹಾಗೆ ತರುತ್ತಾರೆ, ವ್ಯಾಸರಾಯರು ಕನಕನನ್ನು ಕೇಳಿದಾಗ ದೇವರು ಎಲ್ಲ ಕಡೆ ಇದ್ದಾರೆ, ಎಲ್ಲ ಕಡೆ ಕೇಶವ ನನಗೆ ಕಾಣಿಸುತ್ತೀರುವಾಗ ನಾನು ಬಾಳೆಹಣ್ಣನ್ನು ತಿನ್ನಲು ಸಾಧ್ಯವಾಗಿಲ್ಲ ಎನ್ನುವ ಜಿಜ್ಞಾಸೆಯನ್ನು ತೋರಿಸುವುದರ ಮೂಲಕ ನಿಜವಾದ ಭಕ್ತಿಗೂ, ಸಮಾಜದ ಮುಂದೆ ತೋರ್ಪಡಿಸುವ ಭಕ್ತಿಗೂ ಇರುವ ಬದಲಾವಣೆಯನ್ನು ಚಿತ್ರಿಸಿದ್ದಾರೆ.

ಸಮಾಜದಲ್ಲಿರುವ ಜಾತಿ ತಾರತಮ್ಯ ಮೇಲು ಕೀಳೆಂಬ ಭಾವನೆಯು ಹೋಗಿ ಅಂತಿಮವಾಗಿ ದೇವಸ್ಥಾನದಿಂದ ಕೇಶವ ಹೊರ ಬಂದು ಕನಕ, ಪುರಂದರರ ಜೊತೆಗೆ ಜನಸಮೂಹದಲ್ಲಿ ಸೇರಿ ಹೋಗುವುದನ್ನು ರಚನೆಕಾರರು ಸೊಗಸಾಗಿ ಕಟ್ಟಿಕೊಟ್ಟಿದ್ದಾರೆ. ಒಟ್ಟಾರೆಯಾಗಿ ಕಾಲಜ್ಞಾನಿ ಕನಕ ನಾಟಕವು ವೈಚಾರಿಕ ಪ್ರಜ್ಞೆಯನ್ನು

ಮೂಡಿಸುವುದರ ಜೊತೆಗೆ ಜಾತಿ, ಮತ, ಪಂಥಗಳನ್ನು ಮೀರಿ ಮಾನವೀಯತೆ, ಮನುಷ್ಯತ್ವ, ಮನುಷ್ಯನ ಪ್ರೇಮ ಈ ಅಂಶಗಳನ್ನು ನಾಟಕಕಾರರು ಚಿತ್ರಿಸಿದ್ದಾರೆ.

ಪರಾಮರ್ಶನ ಗ್ರಂಥಸೂಚಿ :

1. ಕಾಡದೇವರಮಠ ಎಲ್.ಎಸ್., 2011, 'ಕನಕದಾಸರ ಬದುಕು–ಬರಹ', ವಿದ್ಯಾನಿಧಿ ಪ್ರಕಾಶನ, ಗದಗ.
2. ಮಂಜುನಾಥ ಜಿ ಜಿ, (ಸಂ), 1999, ಕನಕಸಾಹಿತ್ಯ ದರ್ಶನ, ಕನ್ನಡ ಸಂಸ್ಕೃತಿ ನಿರ್ದೇಶನಾಯಯ, ಸಂಪುಟ 3, ಬೆಂಗಳೂರು.
3. ನಾಗರಾಜ ಕಿ.ರಂ., 'ಕಾಲಜ್ಞಾನಿ ಕನಕ', 1988, ಮಾರನಹಳ್ಳಿ, ವಿಜಯನಗರ, ಬೆಂಗಳೂರು.
4. ವೇದವ್ಯಾಸಾಚಾರ ಎಚ್. ಕೆ., 'ಕರ್ಣಾಟಕದ ಹರಿದಾಸರು', ಪ್ರಕಾಶಕರು: ಶ್ರೀಪರಿಮಳ ಸಂಶೋಧನ ಮತ್ತು ಪ್ರಕಾಶನ ಮಂದಿರ, ನಂಜನಗೂಡು.
5. ಶ್ರೀನಿವಾಸ, 2012, 'ಹರಿದಾಸದೀಕ್ಷೆ', ಮಾಸ್ತಿ ಸಾಹಿತ್ಯ ಸಂಪದ ಸರಣಿ–53: ನಾಟಕ ಸಮಗ್ರ ಸಂಪುಟ–5, ಬೆಂಗಳೂರು.

ಗ್ರಾಮಸೇವಕಿ ಕಾದಂಬರಿಯಲ್ಲಿ ಸ್ತ್ರೀ ಶೋಷಣೆ

1
ಶ್ರೀಮತಿ ರಾಜೇಶ್ವರಿ ವೈ.ಎಂ.
ಸಂಯೋಜಕರು
ಕನ್ನಡ ವಿಭಾಗ
ಜೈನ್(ಡೀಮ್ಡ್ ಟು ಬಿ ಯೂನಿವರ್ಸಿಟಿ),
ಜಯನಗರ., ಬೆಂಗಳೂರು

1
ಡಾ. ರಾಜಕುಮಾರ ಬಡಿಗೇರ
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ
ಜೈನ್(ಡೀಮ್ಡ್ ಟು ಬಿ ಯೂನಿವರ್ಸಿಟಿ),
ಜಯನಗರ., ಬೆಂಗಳೂರು

ಬಸವರಾಜ ಕಟ್ಟೀಮನಿಯವರು ಕನ್ನಡದ ಪ್ರಗತಿಶೀಲ ಸಾಹಿತ್ಯದಲ್ಲಿ ಓರ್ವ ಶ್ರೇಷ್ಠ ಲೇಖಕರಾಗಿ ಗುರುತಿಸಿಕೊಂಡಿದ್ದಾರೆ. 1919 ಅಕ್ಟೋಬರ್ 5ರಂದು ಬೆಳಗಾವಿ ಜಿಲ್ಲೆಯ ಗೋಕಾಕ್ ತಾಲೂಕಿನ ಮಳಾಮರಡಿಯಲ್ಲಿ ಜನಿಸಿದ ಇವರು ಹುಟ್ಟಿನಿಂದಲೇ ದೇಸಿ ಸಂಸ್ಕೃತಿಯನ್ನು ಮೈಗೂಡಿಸಿಕೊಂಡವರು. ತಮ್ಮ ಸಾಹಿತ್ಯದಲ್ಲಿ ಸಮಾಜದ ಎಲ್ಲ ವಲಯಗಳಿಗೆ ಸಂಬಂಧಿಸಿದ ಆಗು-ಹೋಗುಗಳನ್ನು ಜನರು ಅನುಭವಿಸಿದ ನೋವು-ನಲಿವುಗಳನ್ನು ದರ್ಪ-ದೌರ್ಜನ್ಯಗಳನ್ನು ಕಷ್ಟ-ಅನಿಷ್ಠಗಳನ್ನು ಸುಖ-ದುಃಖಗಳನ್ನು ಪ್ರತಿಯೊಂದನ್ನೂ ಸ್ಪಷ್ಟವಾಗಿ ಮೂಡಿಸಿದ್ದಾರೆ. ನೇರ ನಡೆ-ನುಡಿ ಪ್ರಾಮಾಣಿಕತೆ ಸರಳತೆ ಔದಾರ್ಯತೆಯ ಸಂಕೇತದಂತಿರುವ ಕಟ್ಟೀಮನಿಯವರು ಬಸವರಾಜ ಎಂದು ಕನ್ನಡ ಸಾಹಿತ್ಯದಲ್ಲಿ ಮನೆಮಾತಾದವರು. ತಂದೆ ಸರಕಾರಿ ಹುದ್ದೆಯಲ್ಲಿದ್ದರೂ ಈ

ಕುಟುಂಬದ ಬದುಕಿಗೆ ಕಷ್ಟ ತಪ್ಪಿರಲಿಲ್ಲ. ಮನೆಯ ಒಟ್ಟು ಸದಸ್ಯರಿಗೆ ತಂದೆ ದುಡಿದ ಹಣ ಸಾಕಾಗುತ್ತಿರಲಿಲ್ಲ. ವಿಧಿ ಇಲ್ಲದೇ ಬಾಲ್ಯದಲ್ಲಿಯೇ ಕಟ್ಟೀಮನಿಯವರು ಕೆಲಸಕ್ಕೆ ಸೇರಬೇಕಾಯಿತು. ಜನರ ಪ್ರೀತಿ ವಿಶ್ವಾಸ ಗಳಿಸಿಕೊಂಡು ಬಹಳಷ್ಟು ಕ್ರಿಯಾಶೀಲರೆಂದು ಗುರುತಿಸಿಕೊಂಡರು. ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಬೆಳೆದ ರೀತಿ ಎಲ್ಲರಿಗೂ ಅಚ್ಚರಿ ಮೂಡಿಸುತ್ತದೆ.

ಪತ್ರಿಕಾರಂಗದಲ್ಲಿ ವಿಶೇಷವಾದ ಆಸಕ್ತಿಯನ್ನು ಹೊಂದಿದ ಕಟ್ಟೀಮನಿಯವರು ಸಂಯುಕ್ತ ಕರ್ನಾಟಕ, ತರುಣ ಕರ್ನಾಟಕ, ಸ್ವತಂತ್ರ ಕರ್ನಾಟಕ, ಲೋಕಬಂಧು, ಕರ್ನಾಟಕ ಬಂಧು, ಸಮಾಜ ಮೊದಲಾದ ಪತ್ರಿಕೆಗಳಲ್ಲಿ ಕಾರ್ಯ ನಿರ್ವಹಿಸಿದರು. ಈ ಪತ್ರಿಕಾ ಕೆಲಸ ಬಸವರಾಜ ಕಟ್ಟೀಮನಿಯವರಿಗೆ ಸಮಾಜವನ್ನು ವಿಭಿನ್ನವಾಗಿ ನೋಡುವುದನ್ನು ಕಲಿಸಿಕೊಟ್ಟಿತು. ಹಾಗಾಗಿ ಅವರ ಇಡೀ ಸಾಹಿತ್ಯವನ್ನು ಅವಲೋಕಿಸಿದಾಗ ಒಂದು ವಾಸ್ತವ ಪ್ರಪಂಚದಲ್ಲಿ ನಡೆದು ಬಂದ ಅನುಭವ ಗೋಚರಿಸುತ್ತದೆ. ಸ್ವಾತಂತ್ರ್ಯ ಹೋರಾಟದ ಪ್ರಭಾವ ಕಟ್ಟೀಮನಿಯವರಿಗೆ ಸ್ಪಷ್ಟವಾಗಿಯೇ ಆಯಿತು. 1942 ರ ಚಲೇಜಾವ್ ಚಳುವಳಿ ಅವರನ್ನು ರಾಜಕೀಯಕ್ಕೂ ಸಳೆಯಿತು. ಸಕ್ರಿಯ ಕಾರ್ಯಕರ್ತರಾಗಿ ಹಲವಾರು ಹೋರಾಟಗಳಲ್ಲಿ ಸಭೆ–ಸಮಾರಂಭಗಳಲ್ಲಿ ಪಾಲ್ಗೊಂಡು ಜನರನ್ನು ತಮ್ಮ ಭಾಷಣಗಳ ಮೂಲಕ ಪ್ರೇರೇಪಿಸುತ್ತಿದ್ದರು. ಕಾಂಗ್ರೆಸ್ ಪಕ್ಷದ ಆಶೋತ್ತರಗಳು ಆನಂತರದಲ್ಲಿ ಅವರಿಗೆ ಅಷ್ಟಾಗಿ ಹಿಡಿಸಲಿಲ್ಲ. ಕಮ್ಯುನಿಸ್ಟ್ ಪಕ್ಷದ ಕುರಿತು ಒಲವು ಹೊಂದಿದ್ದ ಕಟ್ಟೀಮನಿಯವರು ರಾಜಕೀಯ ಪಕ್ಷಗಳ ದ್ವಂದ್ವ ಸ್ಥಿತಿಗಳನ್ನು ತಮ್ಮ ಸಾಹಿತ್ಯದಲ್ಲಿ ಪಡಿಮೂಡಿಸಿದರು. ಸ್ವತಂತ್ರ ಭಾರತದಲ್ಲಿ 1968 ರಿಂದ 74ರವರೆಗೆ ಕರ್ನಾಟಕದ ವಿಧಾನಪರಿಷತ್ತಿನ ನಾಮನಿರ್ದೇಶಿತ ಸದಸ್ಯರೂ ಆಗಿ ಗುರುತರ ಕೆಲಸವನ್ನು ಮಾಡಿದರು. ದೇಶ ವಿದೇಶಗಳನ್ನು ಸುತ್ತಿ ಬರುವ ಅವಕಾಶ ಈ ಸಂದರ್ಭದಲ್ಲಿ ಅವರಿಗೆ ಒದಗಿ ಬಂತು. ಈ ಎಲ್ಲಾ ಅನುಭವವನ್ನು ತಮ್ಮ ಸಾಹಿತ್ಯದಲ್ಲಿ ಚಿತ್ರಿಸಿದ್ದಾರೆ.

ಸ್ತ್ರೀ ಶೋಷಣೆಯ ಚಿತ್ರಣ :

ಬಸವರಾಜ ಕಟ್ಟಿಮನಿಯವರ ಕಾದಂಬರಿಗಳಲ್ಲಿ ಸಂಭಾಷಣೆಗಳು ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ. ಗ್ರಾಮೀಣ ಭಾಷೆಯ ಧ್ವನಿಯುಳ್ಳ ಮಾತುಗಳನ್ನು ಯಥಾವತ್ತಾಗಿ ಕಾದಂಬರಿಯಲ್ಲಿ ತರುವ ಪ್ರಯತ್ನ ಮಾಡುತ್ತಾರೆ. ಆಡುಮಾತಿನ ಭಾಷೆ, ಶೈಲಿಯ ಶಕ್ತಿಯನ್ನು ಅರಿತುಕೊಂಡು ಒಳ್ಳೆಯ ಬಿಗುವಿನಿಂದ ಕಾದಂಬರಿಯಲ್ಲಿ ಜೋಡಿಸುವುದರಲ್ಲಿ ಸಿದ್ಧಹಸ್ತ. ಸಾಮಾನ್ಯ ಜನರ ಎದೆಯಿಂದ ಹೊರ ಬರುವ

ಭಾಷಿಕ ಸೊಗಡನ್ನು ಗ್ರಾಮ ಸೇವಕಿ ಕಾದಂಬರಿಯಲ್ಲಿ ನಾವು ನೋಡಬಹುದಾಗಿದೆ. ಗ್ರಾಮೀಣ ಶೈಲಿಯ ಗಾದೆಮಾತುಗಳು ವಿಶಿಷ್ಟ ಅರ್ಥವನ್ನು ಹೊಂದಿರುವ ಪದಗಳ ಗುಚ್ಛ, ಗ್ರಾಮೀಣ ಜನ ಬಳಸುವ ಬೈಗುಳದ ಪದಗಳು ಕಾದಂಬರಿಯ ಒಟ್ಟು ಸೊಗಸನ್ನು ಹೆಚ್ಚಿಸುತ್ತದೆ. ಇದು ಗ್ರಾಮೀಣ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಪ್ರಮುಖ ಅಂಶವೆಂಬಂತೆ ಬಳಕೆಗೊಂಡಿದೆ. ಅಧಿಕಾರಿ ವರ್ಗದಲ್ಲಿ ಆವರಿಸಿ ಕೊಂಡ ಲಂಚದ ಹಪಹಪಿತನ, ಸ್ತ್ರೀಯರನ್ನು ಅತ್ಯಂತ ಕೀಳಾಗಿ ಮತ್ತು ಅವಳ ಅಸ್ತಿತ್ವವನ್ನು ಹಾಳು ಮಾಡುವ ಪ್ರಯತ್ನಗಳನ್ನು ತಮ್ಮ ಸಾಹಿತ್ಯದಲ್ಲಿ ಯಥಾವತ್ತಾಗಿ ತರುವ ಕೆಲಸ ಮಾಡಿದರು. ಇಂತಹ ವಿಷಯ ವಸ್ತು ಹೊಂದಿರುವ ಕಾದಂಬರಿ ಗ್ರಾಮಸೇವಕಿ ಎನ್ನುವ ಕಾದಂಬರಿ. ಈ ಕಾಂದಂಬರಿ ಗಾತ್ರದಲ್ಲಿ ಚಿಕ್ಕದಾದರೂ ವಿಷಯ ಮತ್ತು ವಿವರಣೆಯ ದೃಷ್ಟಿಯಿಂದ ಗಾತ್ರದ ಕೊರತೆ ನೀಗಿಸುತ್ತದೆ. ಇದೊಂದು ನೀಳ್ಗತೆಯ ಸ್ವರೂಪದಲ್ಲಿ ಓದುಗನ ಮುಂದೆ ಅನಾವರಣಗೊಂಡ ಕೃತಿ.

ಓರ್ವ ಸ್ತ್ರೀ ತಾನು ಪಡೆದ ಶಿಕ್ಷಣ ಮತ್ತು ಜ್ಞಾನವನ್ನು ಬಳಸಿ ಸರಕಾರಿ ಹುದ್ದೆ ಗಿಟ್ಟಿಸಿಕೊಂಡು ತನ್ನ ಅಭಿವೃದ್ಧಿಯತ್ತ ಮುಖ ಮಾಡಿದರೆ ಅಧಿಕಾರಿ ವರ್ಗ ಆ ಸ್ತ್ರೀಯನ್ನು ಸುಮ್ಮನೆ ಬಿಡುವುದಾಗಲಿ, ಸಹಕಾರಿಯಾಗಿತವಾಗಿ ನಡೆದುಕೊಳ್ಳುವುದಾಗಲೀ, ಮಾಡದೇ ಅವಳನ್ನು ಅನುಭೋಗಿಸಿ ಹಾಳು ಮಾಡಿ ತಮ್ಮ ಪಾರುಪತ್ಯ ಮೆರೆದಿರುವುದನ್ನು ಕಟ್ಟೀಮನಿಯವರು ಈ ಕಾದಂಬರಿಯಲ್ಲಿ ನೈಜವಾಗಿ ಚಿತ್ರಿಸಿದ್ದಾರೆ. ಗ್ರಾಮಸೇವಕಿ ಕಾದಂಬರಿಯಲ್ಲಿ ಅಲ್ಲಲ್ಲಿ ಸಂಭಾಷಣೆಗಳು ಇವೆಯಾದರೂ ಮುಖ್ಯವಾಗಿ ನೇರ ನಿರೂಪಣೆಯಲ್ಲಿ ಸೇರಿಕೊಂಡಿವೆ. ವಿಶೇಷ ಮೆರುಗನ್ನು ನೀಡಿವೆ. “ಅನಾಥೆಯಾದ ನಿರ್ಮಲಾ ಮದುವೆಯ ವಯಸ್ಸಿಗೆ ಬಂದರೂ, ಸಮಾಜದಲ್ಲಿ ತಾಂಡವವಾಡುತ್ತಿರುವ ವರದಕ್ಷಿಣೆ ಪಿಡುಗಿಗೆ ಭಯಭೀತಳಾಗಿ ವರದಕ್ಷಿಣೆ ಕೊಡಲಾಗದೆ ಮದುವೆಯೂ ಆಗದೆ ಹಾಗೆ ಉಳಿದು ಬಿಡುತ್ತಾಳೆ. ತಾನು ಸ್ವಾವಲಂಬಿಯಾಗಿಯಾದರೂ ಬಾಳು ಕಟ್ಟಿಕೊಳ್ಳಬೇಕೆನ್ನುವ ಸನ್ನಾಹದಲ್ಲಿದ್ದಾಗ ಈ ಸಮಾಜದ ಕಾಮಪಿಪಾಸುಗಳ ಕೈಯಲ್ಲಿ ಹಂಚಿ ಹೋಗುತ್ತಾಳೆ. ಅವಿವಾಹಿತಳಾದ ನಿರ್ಮಲಾ ಗ್ರಾಮ ಸೇವಕಿ ಹುದ್ದೆಗೆ ಅರ್ಜಿ ಸಲ್ಲಿಸಿ ಆಯ್ಕೆಯಾಗಿ ತರಬೇತಿ ಪಡೆದುಕೊಂಡು ತಾರವಾಡದ ಗ್ರಾಮಸೇವಕಿಯಾಗಿ ವೃತ್ತಿಯಲ್ಲಿ ಮುಂದಾಗಬೇಕು ಎಂಬ ಸಿದ್ಧತೆಯಲ್ಲಿದ್ದಾಗ ಬಿಡಿಓ ಸಾಹೇಬರ ಬಳಿ ಸಹಿಗಾಗಿ ತಾಲೂಕು ಕೇಂದ್ರ ಕಚೇರಿ ಉಗರೂರಿಗೆ ಹೋದಾಗ ಅಲ್ಲಿನ ಮುಖ್ಯ ಗ್ರಾಮ ಸೇವಕಿ ಪ್ರಭಾವತಿ ಕುತಂತ್ರಕ್ಕೆ ಬಲಿಯಾಗ ಬೇಕಾಗುತ್ತದೆ.”[1]

ಸಮಾಜದಲ್ಲಿ ಹೆಣ್ಣಿನ ಅವನತಿಗೆ ತಂತ್ರ ರೂಪಿಸುವವಳು ಹೆಣ್ಣೇ ಆಗಿರುತ್ತಾಳೆ ಎನ್ನುವುದಕ್ಕೆ ಜೀವಂತ ಸಾಕ್ಷಿ ಎಂಬಂತೆ ಈ ಕಾದಂಬರಿಯಲ್ಲಿ ಚಿತ್ರಿತಗೊಂಡಿದೆ.

ಇದು ಇಂದಿನ ದಿನಗಳಲ್ಲಿ ಹೊಯ್ದಾಡುವ ಸ್ಥಿತಿಯೇ. ಪಂಚಾಯತಿಗಳಲ್ಲಿ ಕನಿಷ್ಠ ಮನುಷ್ಯ ಸಂಸ್ಕೃತಿ ಇಲ್ಲದವರು ಪದಾಧಿಕಾರಗಳನ್ನು ಹೊಂದಿ ರಾರಾಜಿಸುತ್ತಿರುವುದು ಹಿಂದೆಯೂ ಇತ್ತು ಇಂದು ಇದೆ ಮುಂದೆಯೂ ಹೀಗೆ ಇರುತ್ತದೆ. ನಿರ್ಮಲ ತಾನು ಗ್ರಾಮ ಸೇವಕಿಯಾಗಿ ಕಾರ್ಯ ನಿರ್ವಹಿಸಬೇಕು ಎಂಬ ಆಶಾವಾದದಲ್ಲಿ ತಾರವಾಡಕ್ಕೆ ಬಂದಾಗ ಅಲ್ಲಿನ ಪಂಚಾಯತಿ ಅಧ್ಯಕ್ಷ ಕರೀಗೌಡನ ದುಷ್ಟತನಕ್ಕೆ ಬಲಿಯಾಗಬೇಕಾಗುತ್ತದೆ. ಈ ಕರೀಗೌಡ ತನ್ನ ಊರಿಗೆ ಯಾವುದೇ ಮಹಿಳೆ ಗ್ರಾಮ ಸೇವಕಿಯಾಗಿ ಕಾರ್ಯ ನಿರ್ವಹಿಸಲು ಬಂದರೇ ಅವರನ್ನು ಸುಮ್ಮನೆ ಬಿಟ್ಟವನಲ್ಲ ಅವರನ್ನು ಹಾಳು ಮಾಡಿ ಅವರನ್ನು ಭೋಗಿಸಿ ಮನೆಯ ಸೇವಕಿಯರನ್ನಾಗಿಸಿ ಕೊಂದವನು. ಈ ನಡತೆಗೆ ನಿರ್ಮಲಾ ತುತ್ತಾಗುತ್ತಾಳೆ.

ಕರೀಗೌಡನ ರೋಗಿಷ್ಟ ಹೆಂಡತಿ ನಾಗುಬಾಯಿ ತಾನು ತನ್ನ ಗಂಡನ ಹೀನ ನಡತೆಗಳಿಗೆ ರೋಸಿ ಹೋಗದೆ ಆ ನಡತೆಗಳನ್ನು ಪ್ರಚೋದಿಸುವ ಮಟ್ಟಕ್ಕೆ ವರ್ತಿಸುತ್ತಾಳೆ. ಅಚ್ಚರಿಯೆಂದರೆ ನಿರ್ಮಲಾಳನ್ನು ಹಾಳು ಮಾಡಲು ತಾನೇ ವೇದಿಕೆಯಾಗಿ ಕೆಲಸ ಮಾಡುತ್ತಾಳೆ. ಇದು ಎಂಥವರಿಗಾದರೂ ಮರುಕವನ್ನುಂಟುಮಾಡುತ್ತದೆ. ಆದರೆ ತಾನೂ ಎಷ್ಟೇ ಪ್ರತಿಭಟಿಸಿದರೂ ಕರೀಗೌಡನ ಕಾಮದ ಕಪಿಮುಷ್ಠಿಯಿಂದ ಬಿಡುಗಡೆಯಾಗುವುದಿಲ್ಲ ಎಂಬುದನ್ನು ಮನದಟ್ಟಾದಾಗ ವಿಧಿಯಿಲ್ಲದೆ ತನ್ನನ್ನೂ ಅವನಿಗೊಪ್ಪಿಸಬೇಕಾಗುತ್ತದೆ ಅವನ ಮನೆಯಲ್ಲಿಯೇ ಸಂಸಾರ ಹೂಡಬೇಕಾಗುತ್ತದೆ. ನಾಗುವಾಯಿಗೆ ಬರೀ ದೇಹಕ್ಕೆ ರೋಗ ಅಂಟಿಕೊಂಡಿರದೇ ಮನಸ್ಸಿಗೂ ಹೇಸಿಗೆಯಾಗುವಷ್ಟು ರೋಗ ಅಂಟಿ ಕೊಂಡಿರುತ್ತದೆ. ಇದು ಈ ಕಾದಂಬರಿಯ ಪುಟ ಪುಟಗಳಲ್ಲಿ ಧ್ವನಿಸುತ್ತದೆ.

ಸಮಾಜದ ಕಣ್ಣಿಗೆ ನಿರ್ಮಲ ನೈತಿಕವಾಗಿ ಅಧಃಪತನ ಹೊಂದಿರುವದು ಮನದಟ್ಟಾಗುತ್ತದೆ. ಅವಳಿಗೆ ಕರೀಗೌಡನ ಜೊತೆಗಿನ ಬದುಕು ಅನಿವಾರ್ಯವಾಯಿತು. ಜೀವನದಲ್ಲಿ ದಾಂಪತ್ಯ ಸುಖ ಅನುಭವಿಸುವ ಆಕಾಂಕ್ಷೆಗಳನ್ನು, ಆಕಾಂಕ್ಷೆಗಳೆಲ್ಲವೂ ಕರೀಗೌಡನೊಡನೆ ಅನುಭವಿಸುವುದು ಅನಿವಾರ್ಯವಾದಾಗ ಆ ಸ್ಥಿತಿಗೆ ತಂದವರು ಕಣ್ಣೆದುರಿಗೆ ಇದ್ದರೂ ಅವರ ವಿರುದ್ಧ ನಿಲ್ಲದೆ ರಾಜಿಯಾಗುವುದು ಅವಳ ಅನಾಥತೆಯನ್ನು ಅಣಕಿಸುವಂತಿದೆ. ಈ "ಕಾದಂಬರಿಯಲ್ಲಿ ವಾಸ್ತವವನ್ನೆಲ್ಲಾ ದಾಖಲಿಸುವಾಗ ಸಾಮಾಜಿಕ ಕ್ರೌರ್ಯವನ್ನು ಎತ್ತಿತೋರಿಸುವ ಕಟ್ಟೀಮನಿಯವರ

ಪ್ರತಿಭಟನೆಯ ಧೋರಣೆ ಇರಬಹುದಾದರೂ ಕಾದಂಬರಿಯ ವಸ್ತುವಿನ ನಿರ್ವಹಣೆಯಲ್ಲಿ ಅವರು ಜನಪ್ರಿಯ ತಂತ್ರಗಳನ್ನೇ ಬೆನ್ನು ಹತ್ತಿರುವುದು ಅತ್ಯಂತ ಸ್ಪಷ್ಟವಾಗಿ ಎದ್ದು ಕಾಣುತ್ತದೆ."[2]

ವಯೋಸಹಜ ಬಯಕೆಗಳ ಮಧ್ಯೆ ನಿರ್ಮಲಳಿಗೆ ತನ್ನ ನಡೆ ನೈತಿಕತೆಯಿಂದ ಕೂಡಿದ್ದೋ ಅನೈತಿಕತೆಯಿಂದ ಕೂಡಿದ್ದೋ ನಿರ್ಣಯಿಸಲಾಗದೇ ವಿಫಲವಾಗುತ್ತಾಳೆ. ಹಿತೈಷಿಯಂತೆ ಇರುವ ಮಲ್ಲಪ್ಪ ಗಿರಿಯಪ್ಪ ಅವರು ಅವಳಿಗೆ ಮನವರಿಕೆ ಮಾಡಿಕೊಟ್ಟರೂ ಕೇಳದ ಸ್ಥಿತಿಗೆ ತನ್ನನ್ನು ಎಳೆದು ಕಟ್ಟಿಕೊಂಡಿರುತ್ತಾಳೆ. ಆದರೆ ಕಾಲವೇ ಅವಳನ್ನು ಎಚ್ಚರಿಸಿತು ಎಂಬಂತೆ ಡಂಗುರದ ಸಂಪಾದಕ ಬರೆದ ತಾರವಾಡದ ಗ್ರಾಮಸೇವಕಿ ಏನು ನಡೆಸಿದ್ದಾರೆ ಎಂಬ ಸ್ಪಷ್ಟವಾದ ದಪ್ಪಕ್ಷರಗಳಲ್ಲಿ ಬರೆದ ಬರಹ ...ಆದರೆ ಇದು ಅವಳಿಗೆ ಎಚ್ಚರಿಕೆಯ ಮಾತೆನಿಸದೆ ತನ್ನ ಖಾಸಗಿ ಬದುಕಿನ ವಿಷಯ ಮತ್ತು ವಿಚಾರ ಇವನೇಕೆ ಪ್ರಶ್ನಿಸುತ್ತಿದ್ದಾನೆ ಎಂದು ಅವನ ಮೇಲೆ ಹರಿಹಾಯುವ ಕೆಲಸ ಮಾಡುತ್ತಾಳೆ.

ಮಾನಸಿಕವಾಗಿ ಕುಗ್ಗುವ ಸ್ಥಿತಿಗೆ ಒಂದು ಮಾತು ಕಾರಣವಾಗುತ್ತದೆ. ಕಂಡಕಂಡಲ್ಲಿ ಊರವರು ಅವಳಿಗೆ ಕೇಳುವುದು ಸರ್ವೇಸಾಮಾನ್ಯವಾಗುತ್ತದೆ. ಆಗ ಅವಳು ಇನ್ನಷ್ಟು ರೋಸಿ ಹೋಗುತ್ತಾಳೆ. ಪತ್ರಿಕೆಯಲ್ಲಿ ಪ್ರಕಟವಾಗಿ ಅವಳ ಮಾನಸಿಕ ನೆಮ್ಮದಿ ಹಾಳು ಮಾಡುತ್ತದೆ. ಇದನ್ನೆಲ್ಲ ಮರೆಯಲು ಗೆಳತಿ ಲೀಲಾಳ ಜೊತೆ ಸಿನೆಮಾಗೆ ಹೋದ ಸಂದರ್ಭದಲ್ಲಿ ಅಲ್ಲಿ ಮನೋಹರ ಎಂಬ ವ್ಯಕ್ತಿಯ ಅನೀತಿಯ ನಡೆ–ನುಡಿಗೆ ಬಲೆ ಬೀಳದೆ ಅಲ್ಲಿಂದ ಪಾರಾಗಿ ಮತ್ತೆ ತಾರವಾಡಕ್ಕೆ ಮರಳಿ ಬರುತ್ತಾಳೆ. ಅಲ್ಲಿ ಮತ್ತೆ ತನ್ನ ಸೇವೆಯಲ್ಲಿ ಮುಂದಾದಾಗ ಬಿಡಿಓ ಅಧಿಕಾರಿ ಪತ್ರಿಕೆಯಲ್ಲಿ ಬಂದ ಸುದ್ಧಿಯನ್ನು ಪ್ರಶ್ನಿಸುತ್ತಾನೆ. ಬಿಡಿಓನ ಎಲ್ಲಾ ಪ್ರಶ್ನೆಗಳಿಗೆ ಸ್ಪಷ್ಟವಾಗಿ ಉತ್ತರಿಸಿದ ನಿರ್ಮಲ ಕರಿಗೌಡನ ಕೆಂಗಣ್ಣಿಗೆ ಗುರಿಯಾಗುತ್ತಾಳೆ. ಅವನಿಂದ ಮನೆಯಿಂದ ಹೊರದಬ್ಬಲ್ಪಟ್ಟ ನಿರ್ಮಲಾ ನಿರ್ಗತಿಕಳಂತೆ ಗೋಚರಿಸುತ್ತಾಳೆ. ಕರಿಗೌಡ... ಬಿಡಿಓ ಸಾಹೇಬನೊಂದಿಗೆ ನಿರ್ಮಲ ಸಕ್ಯಾ ಸಹವಾಸ ಬೆಳೆಸಿದರೆ ತನ್ನೆಲ್ಲ ತಪ್ಪುಗಳು ಮನ್ನಾ ಆಗಬಹುದು ಎಂದು ಭಾವಿಸಿ ಸಾಹೇಬನೊಂದಿಗೆ ಇರಲು ಪ್ರಚೋದಿಸುತ್ತಾನೆ. ಕರೀಗೌಡನ ಈ ನಡತೆಗೆ ರೊಚ್ಚಿಗೆದ್ದ ನಿರ್ಮಲ ರಾತ್ರಿಯೇ ತಾರವಾಡ ತೊರೆದು ದಿಕ್ಕುದೆಸೆಯಿಲ್ಲದ ಊರುಕೇರಿ ಇಲ್ಲದ ಕೇರಿಯನ್ನು ಹಿಡಿದು ಸಾಗುತ್ತಾಳೆ. ಕಾದಂಬರಿ ಈ ವಿಚಾರಗಳೊಂದಿಗೆ ಮುಕ್ತಾಯಗೊಳ್ಳುತ್ತದೆ.

ಕೊನೆಯ ಮಾತು

"ಕಟ್ಟೀಮನಿಯವರು ಕಾದಂಬರಿ ಪ್ರಕಾರವನ್ನು ತಾವು ಕಂಡ ಸಮಾಜವನ್ನು ಕಂಡರಿಸುವುದಕ್ಕಾಗಿಯೇ ಬಳಸಿಕೊಳ್ಳುವ ಹಟ ತೊಟ್ಟವರು. ಅವರಿಗೆ ಅದು ಕೇವಲ

ಕಲಾಕೃತಿಯಾಗಿ ವಿಜೃಂಭಿಸುವುದು ಬೇಕಿಲ್ಲ. ಸಮಾಜದ ದಿನನಿತ್ಯದ ವ್ಯವಹಾರಗಳನ್ನು ಚಿತ್ರಿಸುವುದರ ಮೂಲಕ ಪ್ರತ್ಯಕ್ಷೀಕರಿಸುವುದು ಅದರ ಗುರಿ. ಆದ್ದರಿಂದಲೇ ಅವರು ಕಾದಂಬರಿಗಳಲ್ಲಿ ಬಹಳಷ್ಟು ವೇಳೆ ಜಾಣತನದ ಕುಸುರಿ ಕೆಲಸಗಳಿಗೆ ಮನಸ್ಸು ಕೊಡುವುದಿಲ್ಲ. ಬದಲಿಗೆ ನೇರ ನಿರೂಪಣಾ ತಂತ್ರವನ್ನು ಬಳಸುತ್ತಾರೆ. ಇದು ಒಂದು ಕೃತಿಯ ಆಳಕ್ಕಿಂತ ಹರಹಿಗೆ ಹೆಚ್ಚು ಮಹತ್ವವನ್ನು ನೀಡುವ ಸಂಭಾವ್ಯತೆ ಕಂಡುಬರುತ್ತದೆ."[3] ನಾಗರೀಕತೆಯಲ್ಲಿ ಬಹಳಷ್ಟು ಸಾಧಿಸಿದ ಭಾರತೀಯ ಸಮಾಜದಲ್ಲಿ ರೋಗಿಷ್ಠ ಮನಸ್ಸುಗಳು ತಮ್ಮ ಸ್ವಾರ್ಥ ಸ್ವೇಚ್ಛಾಚಾರದ ಬಯಕೆ ಭಾವನೆಗಳ ಮಧ್ಯೆ ಕಂಡವರ ಬದುಕನ್ನು ಬಲಿಯಾಗಿಸುತ್ತಾ ಬಾಳುವುದು ಶೋಭಿಸುವುದಿಲ್ಲ. ಅಕ್ಷರ ಸಂಸ್ಕೃತಿಯ ಪರಿಣಾಮದಿಂದ ದಿನೇದಿನೇ ಸಂಸ್ಕೃತಿಯಲ್ಲಿ ಉಚ್ಚ ಸ್ಥಿತಿಯನ್ನು ತಲುಪಬೇಕೆ ವಿನಹ ಹೀನಸ್ಥಿತಿಗೆ ತೆಗೆದುಕೊಂಡು ಹೋಗಬಾರದು. ಈ ಎಲ್ಲಾ ಆಶೋತ್ತರಗಳನ್ನು ಹಿನ್ನೆಲೆಯಾಗಿರಿಸಿಕೊಂಡು ಕಟ್ಟೀಮನಿಯವರು ಕನ್ನಡ ಸಾರಸ್ವತ ಲೋಕಕ್ಕೆ ಮಹತ್ವದ ಕೃತಿಯೊಂದನ್ನು ನೀಡಿದ್ದಾರೆ ಸಮಾಜಕ್ಕೆ ಇದೊಂದು ಮಹತ್ವದ ಕೃತಿಯಾಗಿದೆ.

ಅಡಿಟಿಪ್ಪಣಿಗಳು

1. (ಲೇ.) ಬಸವರಾಜ ಸಾದರ : ಬಸವರಾಜ ಕಟ್ಟೀಮನಿಯವರ ಕಾದಂಬರಿಗಳು; ಪುಟ ಪುಟ 234.
2. (ಲೇ.) ಬಸವರಾಜ ಸಾದರ : ಬಸವರಾಜ ಕಟ್ಟೀಮನಿಯವರ ಕಾದಂಬರಿಗಳು; ಪುಟ 233
3. (ಸಂ.) ಪ್ರೊ. ಜಿ.ಎಸ್. ಸಿದ್ದಲಿಂಗಯ್ಯ, ಪ್ರೊ. ಎಂ.ಹೆಚ್. ಕೃಷ್ಣಯ್ಯ : ಸಾಲುದೀಪಗಳು; ಪುಟ 452

ಪರಾಮರ್ಶನ ಗ್ರಂಥಗಳು

1. ಬಸವರಾಜ ಕಟ್ಟಿಮನಿ : ಗ್ರಾಮ ಸೇವಿಕಾ ; ಕರುಣಾಕರನ್ ಪ್ರಕಾಶನ, ಮೈಸೂರು.
2. ಜಿ.ಎಸ್. ಸಿದ್ಧಲಿಂಗಯ್ಯ (ಸಂ) : ಸಾಲುದೀಪಗಳು ; ಕನ್ನಡ ಸಾಹಿತ್ಯ ಅಕಾಡೆಮಿ.
3. ಡಾ.ಬಸವರಾಜ ಸಾದರ : ಬಸವರಾಜ ಕಟ್ಟಿಮನಿಯವರ ಕಾದಂಬರಿಗಳು.
4. ಎಲ್.ಎಸ್. ಶೇಷಗಿರಿರಾವ್ : ಹೊಸಗನ್ನಡ ಸಾಹಿತ್ಯ ಚರಿತ್ರೆ ; ಅಂಕಿತ ಪ್ರಕಾಶನ, ಬೆಂಗಳೂರು.

ಕುಮಾರವ್ಯಾಸ ಭಾರತ ಕಾವ್ಯದಲ್ಲಿ 'ದೈವ-ಮಾನವ'ರ ನಡುವಿನ ಸಂಘರ್ಷ

1
ರವಿ .ಎನ್
ಸಹ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಬಾಪೂಜಿನಗರ, ಶಿವಮೊಗ್ಗ-577201
ravickn@gmail.com

ಕನ್ನಡದ ಮಹೋನ್ನತ ಕವಿಗಳಲ್ಲಿ ಒಬ್ಬನಾದ ಕುಮಾರವ್ಯಾಸ ತನ್ನ ಭಾರತವನ್ನು "ಮಾನುಷ ಅತಿಮಾನುಷ ಘರ್ಷಣೆಗಳ" ಕಥೆಯನ್ನಾಗಿ, ಅದರಿಂದ ಮಾನುಷದ ಸತ್ವಾಭಿವರ್ಧನೆ ನಡೆದಿರುವ ಕಥೆಯನ್ನಾಗಿ ನಿರ್ಮಿಸಿದ್ದಾನೆ. ಮಾನವ ಸ್ವಭಾವದ ಪ್ರಾಕೃತಿಕ ಚಿತ್ರಣದಲ್ಲಿ ತೀವ್ರ ಸಮೃದ್ಧಭಾವಗಳ ಶಕ್ತಿವತ್ತಾದ ವಿವರಪೂರ್ಣ ವರ್ಣನದಲ್ಲಿ, ಕಲ್ಪನಾಸಮೃದ್ಧಿಯಲ್ಲಿ, ಭಾಷೆಯನ್ನು ಕಾವ್ಯವಾಗಿಸುವ "ಅದ್ವಿತೀಯ ರೂಪಕ ಕಲೆಯಲ್ಲಿ ಮಹೋನ್ನತ ಕವಿಯಾಗಿದ್ದಾನೆ. ಇವನು ವಚನಸಾಹಿತ್ಯದ ಶ್ರೀಮಂತ ಸಮೃದ್ಧಿಯ ಆನಂತರದ ಕಾಲದಲ್ಲಿ ಪಕ್ವವಾಗಿ ಹದಗೊಂಡಿದ್ದ ಕನ್ನಡ ಭಾಷೆಯ ಸಂಪನ್ನವಕ್ತಾರನಾದ. ಈತನ ಕಾಲ ಕ್ರಿ.ಶ. ಸು. 1300.

ಈ ಕಾವ್ಯ ಭಾಗವನ್ನು 'ಕರ್ಣಾಟ ಭಾರತ ಕಥಾಮಂಜರಿ'ಯ ಅರಣ್ಯ

ಪರ್ವದಿಂದ ಆಯ್ದುಕೊಳ್ಳಲಾಗಿದೆ. ಈ ಕಾವ್ಯವನ್ನು ರಚಿಸಿದವನು ನಾರಣಪ್ಪ ಕುಮಾರವ್ಯಾಸ ಎಂಬುದಾಗಿ ಪ್ರಸಿದ್ಧನಾಗಿದ್ದಾನೆ. ಈತನ ಸ್ಥಳ ಗದುಗಿಗೆ ಹತ್ತಿರದಲ್ಲಿರುವ ಕೋಳಿವಾಡ ಎಂಬ ಗ್ರಾಮ. ಗದುಗಿನ ವೀರನಾರಾಯಣ ಸ್ವಾಮಿಯು ಈ ಕವಿಯ ಇಷ್ಟದೈವ ಕವಿಯ ಮತದ ವಿಚಾರದಲ್ಲಿ ಭಿನ್ನಾಭಿಪ್ರಾಯವಿದೆ, ಅದ್ವೈತಿಯಾದ ಸ್ಮಾರ್ತ ಬ್ರಾಹ್ಮಣನೆಂದೂ ಹರಿಭಕ್ತಿನಿರತನಾದರೂ ಹರಿಹರರಲ್ಲಿ ಭೇದವನ್ನೆಣಿಸದ ಭಾಗವತ ಸಂಪ್ರದಾಯಿ ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಕರ್ಣಾಟ ಭಾರತ ಕಥಾ ಮಂಜರಿಗೆ ಕನ್ನಡ ಭಾರತ, ಗದುಗಿನ ಭಾರತ, ಕುಮಾರ ವ್ಯಾಸ ಭಾರತ ಎಂಬ ಹೆಸರುಗಳು ರೂಢಿಯಲ್ಲಿವೆ. ಈ ಕಾವ್ಯ ಕನ್ನಡದ ಸಾಹಿತ್ಯ ಗೋಪುರಕ್ಕೆ ಇಟ್ಟಿರುವ ಬಂಗಾರದ ಕಳಶಗಳಲ್ಲಿ ಒಂದು. ಕುಮಾರವ್ಯಾಸ ಬರೆದದ್ದು ಹತ್ತು ಪರ್ವಗಳನ್ನು, ಗದಾಪರ್ವದಲ್ಲಿಗೆ ಕಥೆ ಇಲ್ಲಿ ಮುಗಿಯುತ್ತದೆ. ಉಳಿದ ಎಂಟು ಪರ್ವದ ಕಥೆಯನ್ನು ವಿಜಯನಗರದ ಕೃಷ್ಣದೇವರಾಯನ ಕಾಲದ ತಿಮ್ಮಣ್ಣ ಕವಿ ಬರೆದು ಮುಗಿಸಿದನು.

ಪಾಂಡವರು ಕಾಡು ಸೇರಿದ ಮೇಲೆ ಅವರಿಗೆ ಕೌರವನ ರಾಜ್ಯಭಾರ ವಿಧಾನದ ವೈಭವದ ಸಮಾಚಾರ ಗೂಢಾಚಾರರಿಂದ ತಿಳಿದುಬರುತ್ತದೆ. ಹಗೆಯ ವಿಭವವನ್ನು ಕೇಳಿ, ದ್ರೌಪದಿ–ಭೀಮರು ಕಳವಳಿಸಿ ಕೆರಳುತ್ತಾರೆ. ಆ ವೇಳೆಗೆ ಮಹರ್ಷಿ ವ್ಯಾಸರು ಬಂದು ಅವರನ್ನು ಸಮಾಧಾನಗೊಳಿಸಿ, ತಪಸ್ಸು ಮಾಡಿ ಶಿವನಿಂದ ಪಾಶುಪತಾಸ್ತ್ರವನ್ನು ಪಡೆಯುವಂತೆ ಅರ್ಜುನನಿಗೆ ತಿಳಿಸಿ ಮಂತ್ರೋಪದೇಶ ನೀಡುತ್ತಾರೆ. ಸಹೋದರ–ಸತಿಯರ ಹರಕೆ ಹೊತ್ತು ಹೊರಟ ಅರ್ಜುನ ಇಂದ್ರಕೀಲಪರ್ವತದಲ್ಲಿ ಮಾಡಿದ ಘೋರತಪಸ್ಸು ಅಲ್ಲಿದ್ದ ಇತರ ತಪಸ್ವಿಗಳಿಗೆ ಮೂಗುಬ್ಬಸವಾಗುತ್ತದೆ. ಅವರ ಮೊರೆ ಕೇಳಿದ ಶಿವನು ಪಾರ್ವತಿಯೊಡನೆ ತನ್ನ ಪರಿವಾರವನ್ನೂ ಕರೆದುಕೊಂಡು ಬೇಡನ ವೇಷದಲ್ಲಿ ಬರುತ್ತಾನೆ, ತನ್ನ ಭಕ್ತನನ್ನು ಒರೆಹಚ್ಚಿ ನೋಡಿ ಬೆಳಸಲಿಕ್ಕೆ, ಅವನ ಬೇಡಪಡೆಯ ಕೋಲಾಹಲ ರವಕ್ಕೆ ಕೆರಳಿದ, ಕಾಡಿನ ಇರುಬಿನಲ್ಲಿದ್ದ ಮೂಕದಾನವನು ಹಂದಿಯಾಗಿ ಅವರನ್ನು ಅಡ್ಡಗಟ್ಟುತ್ತಾನೆ. ಅದರ ಪೀಡೆಯನ್ನು ತಡೆಯಲಾಗದೆ ಶಿವಗಣ ಧೃತಿಗೆಟ್ಟಿರುವಾಗ ಅದೇ ಸಮಯವೆಂದು ಪಿನಾಕಿ ಅದರ ಮೈಗೆ ಬಾಣವೊಂದನ್ನು ಎಚ್ಚುತ್ತಾನೆ. ಗರಿತೋರುವಂತೆ ನಾಟಿದ ಬಾಣದ ಘಾತಕ್ಕೆ ಗೋಳಿಡುತ್ತ ಆ ಹಂದಿ ಧಾವಿಸುತ್ತ ತಪೋನಿರತನಾಗಿದ್ದ ಅರ್ಜುನನತ್ತ ಹೋದಾಗ, ಅವನು ಎಚ್ಚೆತ್ತು ತನ್ನ ಗಾಂಡೀವಕ್ಕೆ ಬಾಣವೊಂದನ್ನು ಹೂಡಿ ಎಚ್ಚುತ್ತಾನೆ. ಹಂದಿ ಕಾಲೊದರುತ್ತ ದಿಂಡುರುಳುತ್ತದೆ. ಅದು ತನ್ನಿಂದ ಬಿದ್ದದ್ದೆಂದು ಈಶ್ವರ ಅದರತ್ತ

ನಡೆದಾಗ "ಅತ್ತ ನಡೆ ಅದು ನನ್ನ ಬಾಣದ ಬಲಿ' ಎಂದು ನರ ಎಚ್ಚರಿಸುತ್ತಾನೆ. ಆ ತಪೋನಿರತನ ಚಿತ್ರದಲ್ಲಿ "ಕಾಮಿಪ ವಿರೋಧದ ಕುಂದು" ಬಂದಿತಲ್ಲ!

ಇಲ್ಲಿಂದ ಪ್ರಾರಂಭವಾಗುತ್ತದೆ ಪ್ರಸ್ತುತ ಪಠ್ಯವಾದ "ತನ್ನ ಭಕ್ತನ ಬೆಳವಿಗೆಯ ಮಾಡಿದನು" ಎಂಬ ಕಾವ್ಯಭಾಗದ ಕಥೆ, 'ಕುಮಾರವ್ಯಾಸ ಭಾರತ'ದ ಅರಣ್ಯಪರ್ವದ ಆರನೆಯ ಸಂಧಿಯಿಂದ ಆಯ್ಕೆಯಾಗಿರುವ ಇಲ್ಲಿನ ಭಾಮಿನೀ ಪಟ್ಪದಿಗಳಲ್ಲಿ ಮಹಾಭಾರತದ ಶ್ರೇಷ್ಠ ಘಟನೆಯೊಂದು ಶಕ್ತಿವತ್ತಾಗಿ ಚಿತ್ರಿತವಾಗಿದೆ. ಕುಮಾರವ್ಯಾಸನಿಗಿಂತ ಹಿಂದೆ ಈ ಪ್ರಸಂಗ ವ್ಯಾಸ, ಪಂಪರ ಭಾರತದಲ್ಲಿ, ಸಂಸ್ಕೃತದ ಭಾರವಿಯ 'ಕಿರಾತಾರ್ಜುನೀಯ'ದಲ್ಲಿ ಆಗಲೇ ನಿರೂಪಿತವಾಗಿತ್ತು. ಇವೆಲ್ಲವನ್ನೂ ತಿಳಿದಿರುವ ಕವಿ ಈ ಪ್ರಸಂಗ ಚಿತ್ರಣದಲ್ಲಿ ಕೊಂಚ ಮಾರ್ಗಾಂತರ ಮಾಡಿದ್ದಾನೆ. ಅವನ ಅರ್ಜುನ ಶಿವನನ್ನು ಮೆಟ್ಟಿ ರಕ್ತವುಕ್ಕಿಸಿ ಪರಾಕ್ರಮ ಮೆರೆಯುತ್ತಾನೆ. ಅದು ವ್ಯಾಸರು ಕಂಡಿಲ್ಲದ ದಾರಿ, ಕುಮಾರವ್ಯಾಸರು ಚಿತ್ರಿಸಿರುವಂತೆ ಶಿವಾರ್ಜುನರ ಸಾಮರ್ಥ್ಯವನ್ನು ವರ್ಣಿಸುತ್ತಾನೆ. ಪರ್ವತೋನ್ನತಿಯನ್ನು ಹೊಗಳಲು ಆಕಾಶವನ್ನು ಹಿಡಿದೆಳೆಯುವುದಿಲ್ಲ. ಅವನ ಶಿವ ಬೇಡನವೇಷ ತಳೆಯುವುದು 'ನಿಜಭಕ್ತನ ಸಂದರ್ಶನಾರ್ಥ'ವಾಗಿ, "ತನ್ನ ಭಕ್ತನ ಬೆಳವಿಗೆಯ ಮಾಡಲಾಗಿ," ಎಂಬುದಾಗಿದೆ.

ಮೂರುಲೋಕದ ಗಂಡನೆಂದು ಪ್ರಖ್ಯಾತನಾದ ಅರ್ಜುನನ ಈ ಕೀರ್ತಿಯನ್ನು ಲೋಕಕ್ಕೆ ಸಾರಬೇಕೆಂದು ನಿರ್ಧರಿಸಿದ ಶಿವ, ಬೇಡನ ವೇಷಧಾರಿಯಾಗಿ ತಾನು ಗುರಿಯಿಟ್ಟು ಬಾಣಹೊಡೆದು ಕೊಂದ ಹಂದಿಗಾಗಿ ಅರ್ಜುನನೊಡನೆ ಘರ್ಷಣೆಗಿಳಿದ ಸನ್ನಿವೇಶದಿಂದ ಈ ಕಾವ್ಯಭಾಗ ಪ್ರಾರಂಭವಾಗುತ್ತದೆ. ಅರ್ಜುನ ಮತ್ತು ಬೇಡನ ವೇಷದಾರಿಯಾದ ಶಿವನ ನಡುವಿನ ಸಂಭಾಷಣೆಯ ಸ್ವರೂಪವನ್ನು ಈ ಕೆಳಕಂಡಂತೆ ಗಮನಿಸಬಹುದು.

"ಎಲೆ ಕಿರಾತ ಮದೀಯ ಬಾಣದ ಬಲೆಗೆ ನೀ ಮೃಗವಾಗದಿರು" – ಎಲೈ ಕಿರಾತನೇ ನನ್ನ ಮದಿಸಿದ ಬಾಣಕ್ಕೆ ನೀನು ಬೇಟೆಯಾಗದಿರು, ಕಾಡಿನಲ್ಲಿರುವ ಮೃಗಗಳನ್ನು ಕೊಲ್ಲುವ ನಿನಗೆ ನನ್ನೊಂದಿಗೆ ಹೋರಾಡುವ ಸಾಮರ್ಥ್ಯವಿಲ್ಲ. ನಿನಗಿಂತಲೂ ಶೂರ–ಧೀರನಾದ ನಿನ್ನ ಸಮುದಾಯದ ನಾಯಕನನ್ನು ಕರೆದು ತಾ ಎಂದು ಬೇಡನ ಅಲ್ಪಸಾಮರ್ಥ್ಯವನ್ನು ಹೀಗಳೆಯುತ್ತಾನೆ.

ಅರ್ಜುನನ ಧೈರ್ಯದ, ಪರಾಕ್ರಮದ ಶಕ್ತಿಯನ್ನು ಶಿವ ಅಭಿಮಾನದಿಂದ ಅದನ್ನು ಪಾರ್ವತಿಗೆ ತೋರಿಸುತ್ತಾ, ಅರ್ಜುನನನ್ನು ವ್ಯಂಗ್ಯದ ಮಾತುಗಳಿಂದ ಇರಿಯುತ್ತಾನೆ. ತಾಪಸ ವೇಷಧಾರಿಯಾದ ನಿನಗೆ ಈ ಖಡ್ಗಬೇಕೆ? ಬಿಲ್ಲು– ಬಾಣಗಳ

ಸಮೂಹವೇಕೆ? ನಿನ್ನದೆಂಥಾ ಬಲ? ಎಂದು ಅಣಕವಾಡಿ ಅವನನ್ನು ಕೆರಳಿಸುತ್ತಾನೆ.

ಬೇಡನ ವ್ಯಂಗ್ಯದ ಮಾತುಗಳಿಗೆ ಪ್ರತಿಯಾಗಿ ಅರ್ಜುನ, ನಿನಗ ನನ್ನ ತಪದ ಚಿಂತೆ? ಇದು ವಿವೇಕಿಗಳಿಗೆ ಮಾತ್ರ ಮೀಸಲಾದದ್ದು, ಕೊಲ್ಲುವ ವಿದ್ಯೆ ನಿನ್ನದು, ವನಚರನಾದ ನಿನಗೆ ನನ್ನನ್ನು ಗೆಲ್ಲುವ ಶಕ್ತಿಯಿಲ್ಲ. ನಿಮ್ಮಲ್ಲಿರುವ ಬಲಾಢ್ಯ ನಾಯಕನ ಕರೆದುತಾ ಎಂದು ಕಪಟ ಕಿರಾತನನ್ನು ಜರಿಯುತ್ತಾನೆ. ಒಬ್ಬೊಬ್ಬರಿಗೊಂದೊಂದು ವಿದ್ಯೆಯಲ್ಲಿ ಬಲೆಯಿರುವಂತೆ, ಶಾಸ್ತ್ರದಲ್ಲಿ ನೀವು ಜಾಣನಾದರೆ, ಶಸ್ತ್ರಾವಳಿಯ ಬೇಟೆಯವಿದ್ಯೆಯಲ್ಲಿ ನಾನು, ನಿಮ್ಮಂಥ ತಾಪಸಿಗಳೊಂದಿಗೆ ನಾವು ಸಣಸೆವು, ಯಾರು ನಿಮ್ಮಂತೆ ಋಷಿಯಾಗಿದ್ದು ಶಸ್ತ್ರಜ್ಞನಾಗಿರುವನೋ ಅವನನ್ನು ತೋರಿಸಿರಿ ಎಂದು ಬೇಡ ಅಣಕವಾಡುತ್ತಾನೆ.

ವ್ಯರ್ಥವ್ಯಂಗವೇಕೆ? ನಾವು ನಿಜಕ್ಕೂ ಸಾಹಸದ ತಾಪಸಿಗಳು, ಜಟಾಧಾರಿಯಾದ, ಭಸ್ಮಧಾರಿಯಾದ, ಶಿವನು ಶಸ್ತ್ರಧಾರಿಯಲ್ಲವೇ?ಅಂತೆಯೇ ನಾನು ಧೂರ್ಜಟಿಯ ಶಿಷ್ಯನೆಂದು ಉತ್ತರಿಸುತ್ತಾನೆ.

ಲೋಕಜ್ಞಾನಿಗಳಲ್ಲ ನಾವು, ನಮಗೇಕೆ ನಿಮ್ಮ ತಪಸ್ಸಿನ ಚಿಂತೆ? ಸಾಕ್ಷಾತ್ ಪಿನಾಕಿಯೇ ಅಡ್ಡಿಮಾಡಿದರೂ ನಮ್ಮ ನಿರ್ಧಾರ ಬದಲಾಗದು. ಈ ಯುದ್ಧ ನನ್ನದು, ಅದನ್ನು ಮಾಡಿಯೇ ತೀರುತ್ತೇನೆಂದು, ಕಾಡಿನ ಮರದನೆರಳಲ್ಲಿ ನಿಂತು ಅರ್ಜುನನನ್ನು ಹೀಗೆ ಕೆರಳಿಸುತ್ತಾನೆ.

ಯುದ್ಧವೇ ಖಚಿತವೆಂದಾದ ಮೇಲೆ ನಾನೇಕೆ ಹಿಂಜರಿಯಲಿ? ಎಂದು ಅರ್ಜುನ ಒಂದರ ಮೇಲೊಂದರಂತೆ ಬಾಣಗಳನ್ನು ಹೂಡುತ್ತಾ, ಬೇಡನ ಮೇಲೆ ಬಾಣಗಳ ಸುರಿಮಳೆಗೈಯುತ್ತಾನೆ.

ದೈವಶಕ್ತಿಯು ಮುಂದೆ ಮಾನುಷಬಲವೆಂಥದ್ದು? ದೈವಬಲಕ್ಕೆ ಸರಿಸಾಟಿಯುಂಟೇ? ದುರದೃಷ್ಟವಶಾತ್ ಅರ್ಜುನನಿಗೆ ಈ ಬೇಡನೇ ಸಾಕ್ಷಾತ್ ಶಿವನೆಂಬ ಸತ್ಯ ಗೊತ್ತಾಗುವುದಾದರೂ ಹೇಗೆ? ಆದರೆ ತಾಯಿ ಅಂಬಿಕೆ ಬಲ್ಲಳು, ಅರ್ಜುನನಾದರೂ ಸಾಮಾನ್ಯನೇ? ಇಬ್ಬರು ಬಲಶಾಲಿಗಳ ನಡುವಿನ ಹೋರಾಟ ಕತ್ತಲು–ಬೆಳಕಿನಂತೆ, ಗರುಡ–ಹಾವಿನಂತೆ ಭಯಂಕರವಾದುದು. ಶಿವಮಹಾತೇಜಸ್ಸತ್ವವನ್ನು ಅರ್ಜುನನ ಬಾಣ ಹೇಗೂ ಬಾಧಿಸಲಾರೆಂಬುದನ್ನು ವರ್ಣಿಸುವಾಗ, ವಿಷಕಂಠ, ಫಾಲಾಕ್ಷ, ಗಜಚರ್ಮಾಂಬರ, ಗಂಗಾಧರರ ಚಿತ್ರವನ್ನು ನೀಡುವಂಥ ಉಪಮೆಗಳನ್ನೇ ಕವಿ ಬಳಸಿದ್ದಾನೆ. ಕಡೆಯ ರೂಪಕದಲ್ಲಂತೂ ಅತಿಶಯತೆಯನ್ನೇ ತಂದಿದ್ದಾನೆ. ಸಮಸ್ತಗಂಗೆಯನ್ನು ತಲೆಯಲ್ಲಿ ಹೊತ್ತ ಫಾಲಾಕ್ಷ,

ಅರ್ಜುನನ ಬಾಣದ ಜಿನುಗು ತೊರೆಯಲ್ಲಿ ಜಾರುತ್ತಾನೆಯೇ? ಅಲ್ಲದೆ, ಇಲ್ಲಿ ಶಿವ ಬಂದಿರುವುದು ತನ್ನ ಶಕ್ತಿಯ ಮೇಲ್ಮೆಯನ್ನು ತೋರಲಿಲ್ಲ; ತನ್ನ ನಿಜಭಕ್ತನ ಏಳಿಗೆಗೆ ಆತನ ಪರಾಕ್ರಮದ ಅನಾವರಣಕ್ಕೆ ಸಾಕ್ಷಾತ್ ಪರಶಿವನೊಂದಿಗೆ ಸೆಣಸಲು ನಿಂತ ಅರ್ಜುನನ ಅಹಂಕಾರಕ್ಕೆ ಕೋಪಗೊಂಡ ಗಣಪತಿ, ಷಣ್ಮುಖ, ಶಿವಗಣ, ಭೂತಗಣಗಳನ್ನು ಶಿವ ಸಮಾಧಾನಿಸಿ, ಅರ್ಜುನ ನಮಗೆ ಪ್ರಿಯಶಿಷ್ಯ ನೂರುಪಟ್ಟು ಹೆಚ್ಚಿನ ಪ್ರೀತಿಪಾತ್ರನು. ಹಾಗಾಗಿ ನೀವೇನೂ ಚಿಂತಿಸಬೇಡಿ' ಎಂದನು.

ಪಾರ್ಥನು ಪ್ರಯೋಗಿಸುತ್ತಿರುವ ಎಲ್ಲಾ ಬಾಣಗಳನ್ನೂ ಪರಶಿವ ನಾಶಮಾಡಲು, ಕೆರಳಿದ ಅರ್ಜುನ ಮತ್ತೆ–ಮತ್ತೆ ಬಾಣಗಳ ಸುರಿಮಳೆಗೈಯುತ್ತಾನೆ. ತನ್ನೆಲ್ಲಾ ಬಾಣಗಳನ್ನು ತುಂಡರಿಸುವ, ಬೇಡವೇಷದ ಶಿವನ ಸಾಹಸವನ್ನು ಕಂಡು ಅರ್ಜುನ ಬೆರಗಾಗುತ್ತಾನೆ. ಪರಸ್ಪರರ ನಡುವೆ ಭಯಂಕರ ಹೋರಾಟವೇ ನಡೆಯುತ್ತದೆ. ಈ ಬೇಡ: ಸಾಮಾನ್ಯದವನಲ್ಲ. ಯುದ್ಧದ ಪರಿಚಯವಿದ್ದವನು ನಿಪುಣ ಬಿಲ್ಗಾರನಿವನು, ಅತ್ಯಂತ ಶಕ್ತಿಶಾಲಿ ಅಸ್ತ್ರಗಳನ್ನು ಬಳಸಿಯೇ ಅವನನ್ನು ಸೋಲಿಸಬೇಕೆಂದು, ಹೊಸದಾದ, ಹರಿತವಾದ, ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಲು ಪ್ರಾರಂಭಿಸಿದನು, ಮೋಡ ಆಗಸವನ್ನು ಕವಿದಂತೆ, ಬಾಣಗಳಿಂದ ಕತ್ತಲೆಯನ್ನೇ ಕವಿಸಿದನು ಕಲಿಪಾರ್ಥ.

ಶಕ್ತಿಶಾಲಿ ಮಂತ್ರಾಸ್ತ್ರಗಳನ್ನೂ ತುಂಡರಿಸುವ, ಬೇಡನ ಅತಿಶಯದ ಸಾಮರ್ಥ್ಯವನ್ನು ಕಂಡಾಗಲೇ ಕ್ಷತ್ರಿಯನಾದ ಅರ್ಜುನ ಕ್ಷಣಕಾಲವಾದರೂ ಯೋಚಿಸದೆ, ಕ್ಷತ್ರಿಯರು ತಾಮಸಗುಣದವರೆಂದು

ವ್ಯಂಗ್ಯವಾಡಿ ಇಡೀ ಕ್ಷಾತ್ರಕುಲವನ್ನೇ ವಿಡಂಬಿಸುತ್ತಾನೆ ವೈಶಂಪಾಯನಮುನಿ. ವಾಸ್ತವವಾಗಿ ಕ್ಷತ್ರಿಯರು ರಜೋಗುಣದವರು. ಆದರೆ ಇಲ್ಲಿ ಕುಮಾರವ್ಯಾಸ ಕವಿಯ ದೃಷ್ಟಿಯಲ್ಲಿ ದೈವ ಸಾಕ್ಷಾತ್ಕಾರದ ಹಂಬಲವಿಲ್ಲದಿರುವುದೇ ನಿಜವಾದ ತಾಮಸಗುಣ. ಅಂದು ಶ್ರೀಕೃಷ್ಣನ ವರದಿಂದ ಉಡುಗೊರೆಯಾಗಿ ಪಡೆದ ಅಕ್ಷಯಬಾಣಗಳ ತೊರೆಯು, ಜಲನಿಧಿ ಬತ್ತುವಂತೆ ಬತ್ತಿಹೋಯ್ತು, ತಪಸ್ಸಿನಲ್ಲಿ ತನ್ನ ಪಾಡಿಗೆ, ಮಗ್ನನಾಗಿದ್ದ ತನಗೆ ಈ ಬೇಡ ಭಂಗತಂದನೆಂಬ ಸಿಟ್ಟಿನಿಂದ ಅರ್ಜುನ ಬಿಲ್ಲಿನಿಂದ ಅವನನ್ನು ಹೊಡೆಯಲು ಮುಂದಾದ.

"ಅಂದು ಖಾಂಡವ ವನದ ದಹನದೆ ಬಂದುದಕ್ಷಯ ಬಾಣವಿದು" – ಖಾಂಡವ ವನ ದಹನ : ಅರ್ಜುನ ಸುಭದ್ರೆಯನ್ನು ಮದುವೆಯಾದ ಹೊಸತರಲ್ಲಿ ಶ್ರೀಕೃಷ್ಣ ನೊಡನೆ ವಿಹಾರಕ್ಕೆ ಹೊರಟಿದ್ದಾಗ, ಬಾಹಣ ವೇಷದಲ್ಲಿ ಬಂದಳಗ್ನಿ, ಅವನಿಂದ

ವರಪಡೆದು ಇಂದ್ರವನವಾದ ಖಾಂಡವವನ್ನು ತನ್ನ ಅಜೀರ್ಣದ ರೋಗವನ್ನು ಗುಣಪಡಿಸಲೆಂದು ಸ್ವಲ್ಪವೂ ಬಿಡದಂತೆ ಸುಟ್ಟು ಆಪೋಷನ ತೆಗೆದುಕೊಳ್ಳುತ್ತಾನೆ. ಬಿರುಮಳೆಯಾಗಿ ಸುರಿದ ಇಂದ್ರನ ಕೋಪವನ್ನೆದುರಿಸಿ ತನಗೆ ಖಾಂಡವಾರಣ್ಯವನ್ನು ಉಣಬಡಿಸಿದ ಅರ್ಜುನನಿಗೆ ಅಗ್ನಿ ಪ್ರಸನ್ನನಾಗಿ, ಗಾಂಡೀವ ಧನುಸ್ಸನ್ನೂ, ಅಕ್ಷಯವಾದ ಬತ್ತಳಿಕೆಯನ್ನೂ, ಬಿಳಿಯ ಕುದುರೆಗಳನ್ನು ಹೂಡಿದ ಮಹಾರಥವನ್ನೂ ಉಡುಗೊರೆಯಾಗಿ ನೀಡುತ್ತಾನೆ.

ತನ್ನ ಹೊಡೆತದಿಂದ ಬೇಡ ತತ್ತರಿಸಿ ಹೋದನೆಂದು ಬಗೆದು ಮತ್ತೆ ಮತ್ತೆ ಅವನನ್ನು ಘಾಸಿಗೊಳಿಸಲು ಮುಂದಾದಾಗ, ಬೇಡವೇಷದ ಶಿವಮೆಲು ನಗುತ್ತ ಹೊಡೆಯುವ ಚಾಪವನ್ನು ಕಿತ್ತುಕೊಂಡು ಅವನನ್ನು ಬರಿಗೈಗೊಳಿಸುತ್ತಾನೆ. (ಜರೆಯುತ್ತ, ಜೊಂಪಿಸುತ್ತ, ಮತ್ತೆಮತ್ತೆ ಅಪ್ಪಳಿಸುವಾಗ ಅರ್ಜುನ ತನ್ನ ಶಕ್ತಿಯ ಅಂಚಿಗೆ ಬಂದಿದ್ದಾನೆ. ಇದನ್ನು ಗಮನಿಸಿದ ಶಿವ ಅವನ ಕೈಬಿಲ್ಲನ್ನು ಕಿತ್ತುಕೊಳ್ಳುತ್ತಾನೆ. ತನ್ನ ಶಕ್ತಿಯ ಪ್ರದರ್ಶನಕ್ಕಲ್ಲ, ಬದಲಾಗಿ ತನ್ನ ಭಕ್ತನ ಒಳ ಸಾಮರ್ಥ್ಯವನ್ನು ಮೆರೆಸಲು) ಕೋಪದಲ್ಲಿ ವಿವೇಕ ಮರೆಯಾಗಿ, ಅವಿವೇಕಿಯ ಹಾಗೆ ಅರ್ಜುನ ಬಾಗಿದ, ಹರಿತವಾದ ಖಡ್ಗದಿಂದ ಹೊಡೆದು ಉರುಳಿಸುವ ಪ್ರಯತ್ನಕ್ಕೆ ಮುಂದಾಗುತ್ತಾನೆ. ಅಜ್ಞಾನದ ಮಾಯೆಯಲ್ಲಿ ತಮೋಗುಣಿಯಾದ ಅರ್ಜುನನ ನೀಚ ನಡವಳಿಕೆಯನ್ನು ಕವಿ ಅಣಕಿಸುತ್ತಿದ್ದಾನೆ. ಅರ್ಜುನನ ಕೈಯ ಖಡ್ಗವನ್ನು ಶಿವ ಕಿತ್ತುಕೊಂಡನು. ತ್ರಿಪುರಾರಿಶಿವನ ಸಾಮರ್ಥ್ಯ ಊಹಿಸಲು ಅಸಾಧ್ಯ. ಇದನರಿಯದ ಪಾರ್ಥ ತಾನೇ ಪರಾಕ್ರಮಿಯೆಂದು ಮೆರೆಯುತ್ತಿದ್ದವನಿಗೆ ಬೇಡನ ಈ ಪರಾಕ್ರಮ ಬೆರಗುಗೊಳಿಸುತ್ತದೆ. ಸೋತ ಹತಾಶಭಾವದಿಂದ ಮತ್ತೆ ಮತ್ತೆ ಕೆರಳಿ ಬೇಡನನ್ನು ಹೊಡೆಯಲು ಮುಂದಾಗುತ್ತಾನೆ.

ಗೆಲ್ಲಲಾಗದ ಅಸಹಾಯಕತೆಯಿಂದ, ಸೋಲಿನ ಭಯದಲ್ಲಿ ಅರ್ಜುನ ಮರದ ಕೊಂಬೆಗಳಿಂದ, ಕಲ್ಲುಗುಂಡುಗಳಿಂದ, ಬೇಡನನ್ನು ಥಳಿಸಲು ಮುಂದಾಗುತ್ತಾನೆ. ಅವನ ಎಲ್ಲ ಹೊಡೆತಗಳಿಂದ ಪಾರಾಗಿ ನಿಂತ ಬೇಡನು, ತವಸಿ ಪೂಜಾರಿಯೇ ಬೇರೆ ಯಾವುದೇ ಅಸ್ತ್ರ–ಶಸ್ತ್ರಗಳಿದ್ದರೆ ಅವುಗಳನ್ನು ತೆಗೆದುಕೊಂಡು ಬರುವಂತೆ ವ್ಯಂಗ್ಯವಾಡುತ್ತಾನೆ.

ಬೇಡನಿಗೆ ಮಲ್ಲಯುದ್ಧದ ಪರಿಚಯವಿಲ್ಲವೆಂದು ತಿಳಿದ ಅರ್ಜುನ ಅವನನ್ನು ಮಲ್ಲಯುದ್ಧಕ್ಕೆ ಆಹ್ವಾನಿಸುತ್ತಾನೆ. ಆಯುಧವಿಲ್ಲದಿದ್ದರೇನು ಮುಷ್ಠಿಯೇ ಬಲವಾದ ಆಯುಧ. ಇದರಿಂದ ನೀನು ಹೇಗೆ ಪಾರಾಗುವೆಯೋ ನೋಡೋಣ ಎಂದು ಸಕಲ ದೇವತೆಗಳೂ ಬೆರಗಾಗುವಂತೆ ಮುಷ್ಠಿಯುದ್ಧಕ್ಕೆ ಅವನನ್ನು ಆಹ್ವಾನಿಸುತ್ತಾನೆ.

ಘೋರ ಸಂಘರ್ಷವೇರ್ಪಟ್ಟು ಅರ್ಜುನನ ಶಕ್ತಿ-ಭಕ್ತಿಯ ಸಾರಕ್ಕೆ ಮೆಚ್ಚಿ ಶಿವ ಅರ್ಜುನನಿಗೆ ಪಾಶುಪತಾಸ್ತ್ರವನ್ನು ದಯ ಪಾಲಿಸುತ್ತಾನೆ. ಅಲ್ಲದೆ ಶಿವ ಭಕ್ತನ ಬೆಳವಿಗೆಯ ಮಾಡುವ ತನ್ನ ಉದ್ದೇಶವನ್ನು ಈಡೇರಿಸಿಕೊಳ್ಳುತ್ತಾನೆ.

ಸಮಾರೋಪ:

ಸಾಹಿತ್ಯದ ಮೂಲಕ ಸಂಸ್ಕೃತಿಯನ್ನು ಸೃಷ್ಟಿಮಾಡುವ ಪ್ರಯತ್ನಗಳಲ್ಲಿ ಮಹಾಭಾರತವು ಮಾನವನ ಇತಿಹಾಸದಲ್ಲಿಯೇ ಅತ್ಯಂತ ಮಹತ್ವಪೂರ್ಣವಾದುದಾಗಿದೆ. ವ್ಯಾಸ ಮಹರ್ಷಿಗಳಿಂದ ಸಂಸ್ಕೃತ ಭಾಷೆಯಲ್ಲಿ ರಚಿತವಾದ ಈ ಮಹಾಭಾರತದ ಮೊದಲ 10 ಪರ್ವಗಳನ್ನು ನಮ್ಮ ಕನ್ನಡದ ರೂಪಕ ಸಾಮ್ರಾಜ್ಯದ ಕವಿ ಗದುಗಿನ ನಾರಾಣಪ್ಪ ಭಾಮಿನಿ ಷಟ್ಪದಿಯಲ್ಲಿ 'ಕರ್ನಾಟಕ ಭಾರತ ಕಥಾಮಂಜರಿ' ಎಂಬ ಹೆಸರಿನಲ್ಲಿ ಬರೆದು ಪ್ರಸಿದ್ಧಿ ಪಡೆದಿರುವನು. ಕುಮಾರವ್ಯಾಸನು ಹಾಡಿದನೆಂದರೆ ಕಲಿಯುಗ ದ್ವಾಪರವಾಗುವುದು....ಎಂದು ಕುವೆಂಪು ವರ್ಣಿಸಿರುವಂತೆ ಈ ಕೃತಿ ಕನ್ನಡದ ಅತ್ಯಂತ ಜನಪ್ರಿಯ ಕಾವ್ಯ. ರೂಪಕಗಳೊಂದಿಗೆ ಕುಮಾರವ್ಯಾಸನ ಮತ್ತೊಂದು ಪ್ರತಿಭೆ ಮಾನವ ಪ್ರಕೃತಿಯ ವರ್ಣನೆ. ಕುಮಾರವ್ಯಾಸನ ಪಾತ್ರಗಳು ಕಣ್ಣಿಗೆ ಕಟ್ಟುವಷ್ಟು ಸ್ಪಷ್ಟವಾಗಿದೆ. ಮೇಲ್ಕಾಣಿಸಿದ ಕಾವ್ಯದಲ್ಲಿ ಮೂರುಲೋಕದ ಗಂಡನೆಂದು ಪ್ರಖ್ಯಾತನಾದ ಅರ್ಜುನನ ಈ ಕೀರ್ತಿಯನ್ನು ಲೋಕಕ್ಕೆ ಸಾರಬೇಕೆಂದು ನಿರ್ಧರಿಸಿದ ಶಿವ, ಬೇಡನ ವೇಷಧಾರಿಯಾಗಿ ತಾನು ಗುರಿಯಿಟ್ಟು ಬಾಣಹೊಡೆದು ಕೊಂದ ಹಂದಿಗಾಗಿ ಅರ್ಜುನನೊಡನೆ ಘರ್ಷಣೆಗಿಳಿದ ಸನ್ನಿವೇಶದಿಂದ ಈ ಕಾವ್ಯಭಾಗ ಪ್ರಾರಂಭವಾಗಿ ತನ್ನೊಂದಿಗೆ ಅಂಜದೆ ಧೈರ್ಯದಿಂದ ಹೋರಾಡಿ ಗೆದ್ದ ಅರ್ಜುನನಿಗೆ ಶಿವ ಅವನು ಬಯಸಿದ ಪಾಶುಪತಾಸ್ತ್ರವನ್ನು ನೀಡುವುದರೊಂದಿಗೆ ಕೊನೆಗೊಳ್ಳುತ್ತದೆ.

ಪರಾಮರ್ಶನ ಗ್ರಂಥಗಳು :

1. ಕುಮಾರವ್ಯಾಸ ವಿರಚಿತ ಗದುಗಿನ ಭಾರತ, ಸಂಪಾದನೆ, ಡಾ. ಸಿ.ಪಿ. ಕೃಷ್ಣಕುಮಾರ್, ತನುಮನ ಪ್ರಕಾಶನ ಮೈಸೂರು.
2. ಕರ್ಣಾಟ ಭಾರತ ಕಥಾಮಂಜರಿ, ಸಂಪಾದಕರು, ಕುವೆಂಪು ಮತ್ತು ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ಪ್ರಕಾಶನ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು.
3. ಕುಮಾರವ್ಯಾಸ: ಕೀರ್ತಿನಾಥ ಕುರ್ತಕೋಟಿ: ಕೇಂದ್ರಸಾಹಿತ್ಯ ಅಕಾಡೆಮಿ, ನವದೆಹಲಿ.
4. ಕನ್ನಡ ಸಾಹಿತ್ಯ ಸಮೀಕ್ಷೆ: ಡಾ. ಜಿ.ಎಸ್. ಶಿವರುದ್ರಪ್ಪ: ಸಪ್ನ ಬುಕ್ ಹೌಸ್ ಬೆಂಗಳೂರು.
5. ಕುಮಾರವ್ಯಾಸ ಭಾರತ ಕಥೆ ಮತ್ತು ಕಾವ್ಯ ಕುರ್ತಕೋಟಿ ಮೆಮೋರಿಯಲ್ ಟ್ರಸ್ಟ್ ಧಾರವಾಡ.

ಕುವೆಂಪುರವರ ಜಲಗಾರ ನಾಟಕದಲ್ಲಿ ವೈಚಾರಿಕ ದೃಷ್ಟಿಕೋನ

1

ಡಾ. ನರೇಂದ್ರ ಬಾಬು ಸಿ. ಆರ್

ಕನ್ನಡ ಸಹ ಪ್ರಾಧ್ಯಾಪಕರು

ಡಾ.ಎನ್‌ಎಸ್‌ಎಎಂ ಪ್ರ.ದ.ಕಾಲೇಜ್

ನಿಟ್ಟೆ ಪರಿಗಣಿತ ವಿಶ್ವವಿದ್ಯಾಲಯ

ಬೆಂಗಳೂರು–89

ರಾಷ್ಟ್ರಕವಿ ಕುವೆಂಪುರವರು ಕನ್ನಡ ಸಾಹಿತ್ಯ ಕಂಡ ಅಪರೂಪದ ಮಹಾಕವಿ ಅಲ್ಲದೆ ಹೊಸಗನ್ನಡ ಸಾಹಿತ್ಯವನ್ನು ಅದರಲ್ಲೂ ನವೋದಯ ಸಾಹಿತ್ಯವನ್ನು ಬಹಳ ಸಮರ್ಥವಾಗಿ ದುಡಿಸಿಕೊಂಡ ಹೆಮ್ಮೆಯ ಕವಿ. ‘ಪಕೃತಿಕವಿ’ ‘ಕನ್ನಡದ ವರ್ಡ್ಸ್‌ವರ್ತ್’ ಎಂದೇ ಪ್ರಖ್ಯಾತರಾದ ಇವರು ಮಾನವ ಕುಲಕ್ಕೆ ವಿಶ್ವಮಾನವ ಸಂದೇಶವನ್ನು ಕೊಟ್ಟಂತಹ ಮೇರುಕವಿ. ‘ಕೊಲ್ವ ಬಿಲ್ಲು ಬತ್ತಳಿಕೆಯನ್ನು ಬಿಟ್ಟು ಬಾ, ಇದು ಪಕ್ಷಿಕಾಶಿ’ ಎಂದು ಅಹಿಂಸೆಯ ಪರಿಕಲ್ಪನೆಯನ್ನು ಕೊಟ್ಟಿರುವುದಲ್ಲದೆ ‘ಶಿಲೆಯಲ್ಲ ಈ ಗುಡಿಯು ಕಲೆಯ ಬಲೆಯು’ ಎಂದು ಕಲೆಯ ಬೆಲೆಯನ್ನು ನಾಡಿಗೆ ಮುಟ್ಟಿಸಿದವರು. ಕವಿಯಾಗಿ, ವಿಮರ್ಶಕರಾಗಿ, ದಾರ್ಶನಿಕರಾಗಿ, ಕಾದಂಬರಿಕಾರರಾಗಿ, ನಾಟಕಕಾರರಾಗಿ ಕನ್ನಡ ಸಾಹಿತ್ಯ ಲೋಕವನ್ನು ಉತ್ತುಂಗ ಶಿಖರಕ್ಕೆ ಕೊಂಡೊಯ್ದ ಧೀಮಂತ ಕವಿ.

'ರವಿ ಕಾಣದ್ದನ್ನು ಕವಿ ಕಂಡ' ಎಂಬ ಮಾತನ್ನು ಸತ್ಯವಾಗಿಸಿಕೊಂಡು ಕನ್ನಡ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ಕೃಷಿಯನ್ನು ಮಾಡಿ ತನ್ನದೇ ಛಾಪನ್ನು ಮೂಡಿಸಿದ್ದಾರೆ. ಕನ್ನಡ ಸಾಹಿತ್ಯವನ್ನು ವಿಶ್ವಮಟ್ಟಕ್ಕೆ ಕೊಂಡೊಯ್ದು 'ಎಲ್ಲಾದರು ಇರು ಎಂತಾದರೂ ಇರು ಎಂದೆಂದಿಗೂ ನೀ ಕನ್ನಡವಾಗಿರು' ಎಂದು ತನ್ನಲ್ಲಿನ ಕನ್ನಡಾಭಿಮಾನವನ್ನು ಮನಮುಟ್ಟುವಂತೆ ಅಭಿವ್ಯಕ್ತಗೊಳಿಸಿದವರು.

'ಆಡು ಮುಟ್ಟದ ಸೊಪ್ಪಿಲ್ಲ' ಎಂಬ ಮಾತಿನಂತೆ ಕುವೆಂಪುರವರು ಸೃಜಿಸದೇ ಇರುವ ಸಾಹಿತ್ಯವಿಲ್ಲ. ಕನ್ನಡ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ತನ್ನ ಮಾಣಿಕ್ಯದಂತ ಸಾಹಿತ್ಯ ಕೃಷಿಯನ್ನು ಮಾಡಿರುವ ಕುವೆಂಪು ಹಲವು ನಾಟಕಗಳನ್ನು ರಚಿಸಿದ್ದರೂ, ಅವುಗಳಲ್ಲಿ ಹೆಚ್ಚು ಚರ್ಚೆ, ಜಿಜ್ಞಾಸೆಗೆ ಒಳಗಾಗಿ ಓದುಗರಲ್ಲಿ ನಮ್ಮ ಸಾಮಾಜಿಕ ಸ್ಥಿತಿಗತಿಯ ಬಗ್ಗೆ ಅರಿವನ್ನು ಮೂಡಿಸುವ ಹಾಗೂ ಕಾಯಕದ ಮಹತ್ವವನ್ನು ಸಾರುವ ಏಕೈಕ ನಾಟಕ ಜಲಗಾರ. ಈ ನಾಟಕವು ನಮ್ಮ ಸಮಾಜದಲ್ಲಿನ ಪುರೋಹಿತಶಾಹಿಯ ದಬ್ಬಾಳಿಕೆ, ಮೂಢನಂಬಿಕೆ, ಅಜ್ಞಾನ, ಅವೈಚಾರಿಕತೆಯಿಂದ ನಲುಗುತ್ತಿರುವ ಭಾರತದ ಬಹುಸಂಖ್ಯಾತ ಶೂದ್ರ ವರ್ಗಗಳ ದುಸ್ಥಿತಿಯನ್ನು, ಕೀಳರಿಮೆಯನ್ನು ಕಂಡ ಕುವೆಂಪು ಈ ನಾಟಕದ ಮೂಲಕ ಓದುಗರಿಗೆ ಹೊಸ ಹೊಳವುಗಳನ್ನು, ತತ್ವಚಿಂತನೆಗಳನ್ನು ನೀಡಿದ್ದಾರೆ.

ಸಂಶೋಧನೆಯ ಆಶಯ :

ಮಹಾಕವಿಯ ಎಲ್ಲಾ ಅಂಶಗಳನ್ನು ಮೈಗೂಡಿಸಿಕೊಂಡು ಬೆಳೆದ ಕನ್ನಡದ ಮಹಾದ್ವೈತ್ಯಶಕ್ತಿ ಎನಿಸಿದ ಕುವೆಂಪು ಅವರ ವೈಚಾರಿಕ ಚಿಂತನೆಯು ಜಲಗಾರ ನಾಟಕದಲ್ಲಿ ಮೇಳೈಸಿರುವುದು ವಿಶೇಷ. ಶಿಕ್ಷಣದ ಪ್ರಾಮುಖ್ಯತೆ, ಮೌಢ್ಯವನ್ನು ತಿರಸ್ಕರಿಸುವುದು, ಜಾತಿ, ಮತ, ಪಂಥಗಳನ್ನು ತೊಳೆಯುವುದು, ಸ್ತ್ರೀ ಸಮಾನತೆಯನ್ನು ಎತ್ತಿ ಹಿಡಿಯುವುದು, ಕುವೆಂಪುರವರ ವೈಚಾರಿಕತೆಯ ಪ್ರಮುಖ ಅಂಶಗಳಾಗಿದ್ದವು. ಬಂಗಾಳದಲ್ಲಿ ಮೌಢ್ಯವಿರೋಧಿ ಅಲೆಯನ್ನು ಎಬ್ಬಿಸಿದವರು ಸ್ವಾಮಿ ವಿವೇಕಾನಂದರಾದರೆ ಕನ್ನಡದಲ್ಲಿ ಮೌಢ್ಯದ ವಿರುದ್ಧ ಗಟ್ಟಿಯಾಗಿ ಮಾತನಾಡಿ ತರ್ಕಬದ್ಧ ಸಾಮಾಜಿಕತನಕ್ಕೆ ಮುನ್ನುಡಿಯನ್ನು ಬರೆದವರು ಕುವೆಂಪುರವರು ಎಂದರೆ ತಪ್ಪಾಗಲಾರದು.

ಸಾಮಾನ್ಯವಾಗಿ ಇವರು ತಮ್ಮ ನಾಟಕಗಳಿಗೆ ವಸ್ತುಗಳನ್ನು ಪುರಾಣಗಳಿಂದ ಪಡೆದು ಆಧುನೀಕತೆಗೆ ಮುಖಾಮುಖಿಗೊಳಿಸುತ್ತಾರೆ. ಆ ದೃಷ್ಠಿಯಲ್ಲಿ ಜಲಗಾರ ನಾಟಕವನ್ನು ನೋಡಿದರೆ ವಸ್ತುವಿಷಯ ಪುರಾತನವಾದರೂ ಆಶಯ ಮಾತ್ರ

ನೂತನವಾದುದು. ಆದ್ದರಿಂದ ಈ ನಾಟಕದಲ್ಲಿ ಕವಿಯು ಸಮಾಜದಲ್ಲಿನ ಜಾತೀಯತೆಯ ಕ್ರೂರ ಮುಖವನ್ನು ಪರಿಚಯಿಸುವುದರ ಜೊತೆಗೆ ದೇವರು, ಧರ್ಮದ ಬಗೆಗಿನ ಚಿಂತನೆಯನ್ನು ಸಹ ಮನಗಾಣಿಸಿದ್ದಾರೆ. ಕುವೆಂಪುರವರೇ ಒಂದೆಡೆ "ಜಾತಿ–ಮತಗಳ ವಿರೋಧ ಭಾವನೆ ನನ್ನ ಹುಟ್ಟುಗುಣ. ಸಂಸ್ಕಾರ ರೂಪದಲ್ಲಿಯೇ ಅದು ನನ್ನ ಜನ್ಮಕ್ಕಂಟಿಕೊಂಡು ಬಂದೀತೆಂದು ತೋರುತ್ತದೆ. ಅಸ್ಪೃಶ್ಯತೆಯೊಂದು ಮಹಾ ಪಾಪವೆಂದು ಗಾಂಧೀಜಿ ಘೋಷಿಸಿದರು ಆ ಘೋಷಣೆ ನನಗೆ ತುಂಬಾ ಹಿಡಿಸಿತು ಎಂದಿದ್ದಾರೆ.

ಜಲಗಾರ ನಾಟಕವು ನಮ್ಮ ಸಮಾಜದಲ್ಲಿನ ಪುರೋಹಿತಶಾಹಿ ಮತ್ತು ಅಸ್ಪೃಶ್ಯತೆಯನ್ನು ಖಂಡಿಸುವ ಪ್ರಥಮ ನಾಟಕವಾಗಿದ್ದು, ಇಲ್ಲಿ ಕವಿಯು ವೈಧಿಕ ಡಂಭಾಚಾರವನ್ನು ಬೈಯಿಲಿಗೆಳೆಯುವ ಪ್ರಯತ್ನವನ್ನು ಮಾಡಿದ್ದಾರೆ. ಕವಿ ಲಂಕೇಶರವರು ಹೇಳಿರುವಂತೆ "ಅವರಿಗಿಂತ ಚೆನ್ನಾಗಿ ಬರೆದ ಕವಿಗಳು ಇರಬಹುದು. ಕಥೆಗಾರರು ಇರಬಹುದು, ಆದರೆ ಕುವೆಂಪುರವರನ್ನು ಮೀರಿಸುವ ಪ್ರತಿಭೆಯ ವ್ಯಕ್ತಿ ಮತ್ತು ಗುರು ಮತ್ತೊಬ್ಬರಿಲ್ಲ. ಸುತ್ತಣ ಜಗತ್ತು ಸೂಕ್ಷ್ಮವಾಗಿ ಎಚ್ಚರವೇ ಇಲ್ಲದ, ಅನ್ಯಾಯವನ್ನು ಖಂಡಿಸುವ ಶಕ್ತಿಯಿಲ್ಲದ, ಮೌಢ್ಯವನ್ನು ತೊಲಗಿಸುವ ಛಲವಿಲ್ಲದ ಸ್ಥಿತಿಯಲ್ಲಿದ್ದಾಗ ಕುವೆಂಪು ಸಮಾಜವನ್ನು ಸೂಕ್ಷ್ಮವಾಗಿ ನೋಡಿ ವ್ಯಂಗ್ಯ, ಕೋಪ, ಪ್ರೀತಿ, ವೈಚಾರಿಕತೆ ಮತ್ತು ನೋವಿನಿಂದ ಬರೆಯುತ್ತಾರೆ."

ಸಂಶೋಧನೆಯ ಉದ್ದೇಶ:

ಕುವೆಂಪು ವಿರಚಿತ 'ಜಲಗಾರ' ನಾಟಕವು ನಮ್ಮ ಸಮಾಜದಲ್ಲಿನ ಅಸ್ಪೃಶ್ಯತೆ, ಜಾತಿ ತಾರತಮ್ಯ ಹಾಗೂ ಪುರೋಹಿತಶಾಹಿ ದಬ್ಬಾಳಿಕೆಯಂತಹ ಸಾಮಾಜಿಕ ಸಮಸ್ಯೆಗಳನ್ನು ಎತ್ತಿ ತೋರಿಸುತ್ತದಲ್ಲದೆ ಸಾಮಾಜಿಕ ವ್ಯವಸ್ಥೆಯ ವಿರುದ್ಧ ಹಲವು ಪ್ರಶ್ನೆಗಳನ್ನು ಎತ್ತುತ್ತದೆ. ಬಸವಣ್ಣನವರ ಕಾಯಕದ ಮಹತ್ವವನ್ನು ಸಾರುವ ಜಲಗಾರ ನಾಟಕವು ಇದರಲ್ಲಿ ಲೌಖಿಕ ಮತ್ತು ಆಧ್ಯಾತ್ಮಿಕ ಸಂಗತಿಗಳನ್ನು ಹದವಾಗಿ ಬೆಸೆದಿರುವುದು ಮಹತ್ವದ ವಿಚಾರ

ಈ ಸಂಶೋಧನೆಯ ಮೂಲಕ ನಮ್ಮ ದಿನನಿತ್ಯ ಜೀವನದಲ್ಲಿ ಪ್ರಾಮಾಣಿಕತೆಯ ಕಾಯಕದ ಮಹತ್ವವನ್ನು ಎತ್ತಿತೋರಿಸುವುದರ ಮೂಲಕ 'ಕಾಯಕವೇ ಕೈಲಾಸ' ಎಂಬ ಸತ್ಯವನ್ನು ಮನಗಾಣಿಸುವುದು. ಅಲ್ಲದೆ ಈ ನಾಟಕದಲ್ಲಿ ಬರುವ ಜಲಗಾರನ ಮೂಲಕ ಸಮಾಜದಲ್ಲಿನ ಉನ್ನತ ವರ್ಗಗಳ ಕಣ್ತೆರೆಸುವ ಹಾಗೂ ಶ್ರಮಸಂಸ್ಕೃತಿಯ ಮೂಲಕ ಸ್ಥಾವರಗೊಂಡ ದೇವರ ಕಲ್ಪನೆಯನ್ನು ಮುರಿದು

ಜಂಗಮಗೊಳಿಸುವ ವಿಶೇಷತೆಯನ್ನು ಸ್ಪಷ್ಟಪಡಿಸುವ ಉದ್ದೇಶವನ್ನು ಹೊಂದಲಾಗಿದೆ.

ಸಂಶೋಧನೆಯ ವ್ಯಾಪ್ತಿ: 'ಜಲಗಾರ' ನಾಟಕವನ್ನು ಸೀಮಿತಗೊಳಿಸಿಕೊಂಡು ಲೇಖನವನ್ನು ರಚಿಸಲಾಗಿದೆ.

ಪ್ರಮುಖ ಪದಗಳು: *ಕಾಯಕ, ಸಮಾನತೆ, ಮಾನವೀಯತೆ, ವಿಶ್ವ ಮಾನವ ಪ್ರಜ್ಞೆ, ಸರ್ವೋದಯ, ಜಲಗಾರ, ಮುಕ್ಕಣ್ಣ, ಪಂಡಿತ, ಕೈಲಾಸ, ಜಾತಿ, ಮೌಢ್ಯತೆ, ಶೋಷಣೆ, ಶ್ರಮಿಕವರ್ಗ, ವೈಚಾರಿಕತೆ ಇತ್ಯಾದಿ.*

ನಾಟಕದ ವಿಶ್ಲೇಷಣೆ:

ಜಲಗಾರ ನಾಟಕದಲ್ಲಿ ಮುಖ್ಯವಾಗಿ ಇರುವುದು ಬೀದಿಯನ್ನು ಗುಡಿಸುವ ಜಲಗಾರನೊಬ್ಬನ ಮನದಾಳದ ಕಥಾನಕಗಳನ್ನು ಒಳಗೊಂಡ ಎರಡು ದೃಶ್ಯಗಳು. ಮೊದಲನೆಯ ದೃಶ್ಯದಲ್ಲಿ ಬೆಳಿಗ್ಗೆ ಜನರು ದೇವಸ್ಥಾನಕ್ಕೆ ಹೋಗುತ್ತಿರುವುದು ಕಂಡುಬಂದರೆ, ಎರಡನೆಯ ದೃಶ್ಯದಲ್ಲಿ ಸಂಜೆ ದೇವಸ್ಥಾನದಿಂದ ಜನರು ಹಿಂತಿರುಗುತ್ತಿರುವುದು. ಒಂದೇ ದಿನದಲ್ಲಿ ನಡೆಯುವ ನಾಟಕ ಬೆಳಗು–ಸಂಜೆ ನಡೆಯುವ ನಾಟಕವಾಗಿದ್ದು ಭೂದೇವಿ ಬೆಳಗು ಮತ್ತು ಸಂಜೆಯನ್ನು ಸ್ವಾಗತಿಸುತ್ತಾಳೆ. ಇಲ್ಲಿ 'ಜಲಗಾರ' ಎಂದರೆ ಕಸವನ್ನು ಗುಡಿಸುವವನು, ಊರನ್ನು ಸ್ವಚ್ಛಗೊಳಿಸುವವನು. ಈತನು ತನ್ನ ಕಾಯಕದಲ್ಲಿಯೇ ದೇವರನ್ನು ಕಾಣುತ್ತಾ ತೃಪ್ತಿ ಹೊಂದುವವನು.

ಒಂದು ದಿನ ಬೆಳಿಗ್ಗೆ ಜಲಗಾರನು ಕಸವನ್ನು ಗುಡಿಸುತ್ತಾ ತನ್ನ ಕಾಯಕದಲ್ಲಿ ತೊಡಗಿರುವಾಗ ಅಂದು ಆ ಊರಿನಲ್ಲಿ ನಡೆಯುವ ಜಾತ್ರೆಗೆ ಹೋಗಲೆಂದು ರೈತನು ತನ್ನ ಸಹಕರ್ಮಿಗಳನ್ನು ಹೊಗಳುತ್ತಾ ನನ್ನವರ ಬಲದಿಂದಲೇ ದೊರೆಗಳಾಳಿದರು, ಮಣ್ಣಾದ ನೇಗಿಲ ಆಶ್ರಯದಿಂದಲೇ ನಾಗರೀಕತೆ ಉಳಿದಿಹುದು, ರೈತರೇ ಭೂಮಿಗಿಳಿದಿಹ ಕಾಮಧೇನು, ಕಲ್ಪವೃಕ್ಷಗಳು ಎಂದು ತನ್ನನ್ನು ತಾನು ಹೊಗಳಿಕೊಳ್ಳುತ್ತಾ ಬರುತ್ತಿರಬೇಕಾದರೆ ಜಲಗಾರನನ್ನು ಕಂಡು ನೀನು ಇಂದು ನಮ್ಮೂರಿನಲ್ಲಿ ನಡೆಯುವ ಶಿವಗುಡಿಯ ಜಾತ್ರೆಗೆ ಬರುವುದಿಲ್ಲವೇ? ಎಂದು ಕೇಳಿದಾಗ, ಜಲಗಾರನು "ನನಗೇಕೆ ಶಿವಗುಡಿಯ ಜಾತ್ರೆ? ಜೋಯಿಸರು ದೇಗುಲದ ಬಳಿಗೆನ್ನ ಸೇರಿಸರು" ಎನ್ನುತ್ತಾನೆ. ಅದಕ್ಕೆ ರೈತನು "ದೂರದಲ್ಲಿಯೇ ನಿಂತು ಕೈಮುಗಿದು ಬಾ" ಎನ್ನುವನು. ಅದಕ್ಕೆ ಜಲಗಾರನು ನನ್ನ ಕರ್ಮವೇ ಆರಾಧನೆ, ಸೇವೆಯೇ ಪೂಜೆ, ಪೊರಕೆ ಎನ್ನ ಭಾಗದ ಆರತಿ ಎಂಬ ಮಾರ್ಮಿಕ ಉತ್ತರವನ್ನು ಕೊಡುತ್ತಾನೆ.

ಜಲಗಾರನ ದೃಷ್ಠಿಯಲ್ಲಿ ಶಿವನನ್ನು ಕಾಣಲು ಗುಡಿಗೇ ಹೋಗಬೇಕಾಗಿಲ್ಲ, ಹಣ್ಣು–ಕಾಯಿಗಳನ್ನು ತೆಗೆದುಕೊಂಡೇ ಹೋಗಬೇಕಿಲ್ಲ. ಈತನು ಶಿವನ ಗುಡಿಯಲ್ಲಿ

ಸ್ಥಾವರ ದೇವರ ಆರಾಧನೆಗಿಂತ ಕರ್ಮಕ್ಕೆ ಒತ್ತುಕೊಡುವ ಮಹಾಯೋಗಿಯಾಗಿ ಕಂಡು ಬರುತ್ತಾನೆ. ಅದಕ್ಕಾಗಿಯೇ ರೈತನನ್ನು ಕುರಿತು "ನಿನ್ನ ನೇಗಿಲ ಗೆರೆಯ ದಿವ್ಯ ದೇವಾಲಯದಿ ಶಿವನ ಕಾಣೆಯೆ"? ಎಂದು ಪ್ರಶ್ನಿಸುತ್ತಾನೆ. ಇಲ್ಲಿಯ ಜಲಗಾರ ವೃತ್ತಿಯಲ್ಲಿ ಜಲಗಾರನಾದರೂ ಆಚರಣೆಯಲ್ಲಿ ಮಹಾನ್ ತತ್ವಜ್ಞಾನಿಯಾಗಿ ಕಂಡು ಬರುತ್ತಾನೆ.

ಇಲ್ಲಿ ದೇವರು ದಿನನಿತ್ಯ ಕಷ್ಟಪಟ್ಟು ದುಡಿಯುವ ಕಾರ್ಮಿಕರಲ್ಲಿ, ಸಮಾಜದಲ್ಲಿ ಕೈಲಾಗದ ಕುಂಟ, ಕುರುಡ, ಅನಾಥರನ್ನು ಕೈಹಿಡಿದು ನೆಡೆಸುವವರ ಪರವಾಗಿ ನಾನಿರುತ್ತೇನೆ ಎನ್ನುತ್ತಾನೆ. ದೇವರನ್ನು ಪ್ರಕೃತಿಯಲ್ಲಿ ಕಂಡರಿಯುವ ಕವಿಯು ಈ ನಾಟಕದಲ್ಲಿ ಶ್ರಮದಲ್ಲಿ ಕಾಣುತ್ತಾರೆ. ಜಲಗಾರನು ಕೆಳಜಾತಿಗೆ ಸೇರಿದ್ದು, ಸಮಾಜದಲ್ಲಿ ಆತನನ್ನು ದೇವಸ್ಥಾನದ ಒಳಗೆ ಸೇರಿಸದೆ ನಿಷೇಧವನ್ನು ಹೇರಿದ್ದರಿಂದ ಜಲಗಾರನು ನಿಮ್ಮ ಗುಡಿಯು ನಿಮಗಿರಲಿ, ಅಲ್ಲಿರುವ ಶಿವನೂ ನಿಮ್ಮವನಾಗಿರಲಿ ಆದರೆ ಈ ಜಗತ್ತೆ ನನ್ನ ಗುಡಿ, ನನ್ನ ಕೆಲಸವೇ ದೇವರು, ಪೊರಕೆಯೇ ನನ್ನ ಆರತಿ ಎಂದು ಹೇಳುವ ಆತನಲ್ಲಿನ ದೈವತ್ವದ ಬಗೆಗಿನ ತಾತ್ವಿಕ ಚಿಂತನೆಯನ್ನು ಅರಿಯಬಹುದು.

ಗುಡಿಯು ಶಿವನು ಜೋಯಿಸರ ಶಿವನಂತೆ, ನನ್ನ ಶಿವನು ಈ ಮಣ್ಣಿನಲ್ಲಿರುವನು, ಕೊಳೆತ ಕಸದಲ್ಲಿರುವನು ಎಂಬ ನಂಬಿಕೆ ಜಲಗಾರನದು. ಆದ್ದರಿಂದ ದೇವರು ಗುಡಿಯಲ್ಲಷ್ಟೇ ಅಲ್ಲ ಆತನು ಸರ್ವಾಂತರ್ಯಾಮಿಯಾಗಿ ಎಲ್ಲರಲ್ಲೂ ಎಲ್ಲಾ ಕಡೆಯಲ್ಲೂ ನೆಲೆಸಿದ್ದಾನೆ. ಯಾರು ನಿಷ್ಠೆಯಿಂದ ದುಡಿಯುತ್ತಿರುತ್ತಾರೋ ಅವರಿಗೆಲ್ಲಾ ಭಗವಂತ ಒಲಿಯುತ್ತಾನೆ. ಎಂಬ ಆಧ್ಯಾತ್ಮಿಕ ತತ್ವವನ್ನು ಜಗತ್ತಿಗೆ ಸಾರುತ್ತಾನೆ. ಇಲ್ಲಿ ಸಮಾಜದಲ್ಲಿನ ಜಾತಿ ವ್ಯವಸ್ಥೆಯ ಕ್ರೂರತೆಯನ್ನು ದಿಕ್ಕರಿಸುತ್ತಲೇ ನಿಜವಾದ ದೈವೀ ಸ್ವರೂಪವನ್ನು ಎಲ್ಲರಿಗೂ ಸ್ಪಷ್ಟಪಡಿದ್ದಾನೆ.

ಕುವೆಂಪು ಎಂದಿಗೂ ನಾಸ್ತಿಕನಾಗಿರಲಿಲ್ಲ ದೇವರ ಅಸ್ಥಿತ್ವದ ಬಗೆಗೆ ಅವರ ನಿಲುವು ಭಿನ್ನ ಹಾಗೂ ವಿಶಿಷ್ಟವಾದುದು. ಕುವೆಂಪು ಎಂದೂ ದೇವಸ್ಥಾನಕ್ಕೆ ಹೋದವರಲ್ಲ, ಮನೆಗೆ ಪುರೋಹಿತರನ್ನು ಕರೆಸಿ ಪೂಜೆಯನ್ನು ಮಾಡಿಸಿದವರಲ್ಲ ಬದಲಿಗೆ ಮನೆಯಲ್ಲಿ ಅವರೇ ಪೂಜೆಯನ್ನು ಮಾಡುತ್ತಿದ್ದರು. ಏಕೆಂದರೆ ದೇವರು ಎಲ್ಲಾ ಕಡೆ, ಎಲ್ಲರಲ್ಲಿಯೂ ಇರಬೇಕಾದರೆ ನಾವು ದೇವರನ್ನು ಕಾಣಲು ದೇವಸ್ಥಾನಕ್ಕೇ ಹೋಗಬೇಕಿಲ್ಲವೆಂಬ ವೈಚಾರಿಕ ನಿಲುವು ಇವರದಾಗಿತ್ತು.

ಜಲಗಾರ ನಾಟಕದಲ್ಲಿ ಬರುವ ಒಂದೊಂದು ಪಾತ್ರವು ನಮ್ಮಲ್ಲಿರುವ ಅರಿವನ್ನು ವಿಸ್ತರಿಸಲೆಂದೇ ಬಂದಂತಿವೆ. ಅಲ್ಲದೆ ನಮ್ಮೊಳಗಿನ ಮೌಢ್ಯವನ್ನು

ಕಳೆಯಲೆಂದೇ ರೂಪು ತಳೆದಂತಿವೆ. ಇಲ್ಲಿ ಬರುವ ಯುವಕರ ಪಾತ್ರಗಳ ಮೂಲಕ ಇಂದು ಮಾನವರಲ್ಲಿ ಕಳೆದು ಹೋಗುತ್ತಿರುವ ಮಾನವೀಯತೆಯನ್ನು ಮತ್ತು ಅಹಂಕಾರ ಗುಣಗಳನ್ನು ಒಟ್ಟಿಗೆ ಅನಾವರಣಗೊಳಿಸಿವೆ. ಯುವಕರು ಬೇಜಾವಾಬ್ದಾರಿತನದಿಂದ ತಿರುಕನನ್ನು ಕಣ್ಣಿದೆಯೋ ಇಲ್ಲವೋ ಎಂದು ಪರೀಕ್ಷೆ ಮಾಡಲು ಹೋಗಿ ಅವನ ಕಣ್ಣುಗಳಿಗೆ ಚುಚ್ಚಲು ಪ್ರಯತ್ನಿಸುತ್ತಾರೆ. ಅದನ್ನು ತಡೆಯಲು ಬಂದ ಜಲಗಾರನನ್ನು ಒದ್ದು ನೂಕಿ ಬಿಡುತ್ತಾರೆ. ಆಗ ಜಲಗಾರನು ತಿರುಕನನ್ನು ಮೇಲೆತ್ತಿ 'ಬಡವರಿಗೆ ಬಡವರಲ್ಲದೆ ಬೇರೆ ಗತಿಯುಂಟೆ? ಎಂದು ಹೇಳುವ ಮಾತು ಇಂದಿನ ಅಮಾನವೀಯ ಸಮಾಜವನ್ನು ಅನಾವರಣಗೊಳಿಸುತ್ತದೆ.

ನಾಟಕದ ಕೊನೆಯಲ್ಲಿ ಜಲಗಾರನ ಮುಂದೆ ಶಿವನು ಪ್ರತ್ಯಕ್ಷನಾದಾಗ, ಜಲಗಾರನು ಶಿವನನ್ನು ಗುರುತಿಸಲು ಅಸಾಧ್ಯನಾದಾಗ, ನೀನು ಅಂಜಬೇಡ ಸೋದರನೇ ನಾನು ನಿನ್ನ ಬಂಧು ಎಂದಾಗ ಜಲಗಾರನು ಬಹಳ ವಿಸ್ಮಿತನಾಗಿ ಆಶ್ಚರ್ಯದಿಂದ ನೀನೆನ್ನ ಬಂಧುವೇ? ನಾನರಿಯದ ಬಂಧು ಎಂದು ಶಿವನನ್ನು ಸಂದೇಹದಿಂದ ಕೇಳಿದಾಗ

"ಅಂಜದಿರು ಸೋದರನೆ! ಜಗದ ಜಲಗಾರ
ನಾನು! ಶಿವನೆಂದು ಕರೆಯುವರು ಎನ್ನ!
ಚಣಚಣಕು ಜಗದ ಪಾಪವ ನುಂಗುವನು ನಾನು!
ಪೂರ್ವದಲಿ ಕಡಲ ಕಡೆಯಲು ಹುಟ್ಟಿ ಸೃಷ್ಟಿಯಂ
ಸುಡುತಿರ್ದ ಘೋರ ಹಾಲಾಹಲವ ನುಂಗಿದಾ
ನಂಜುಗೊರಲನು ನಾನು! ರುದ್ರನೆಂಬರು ಎನ್ನ; ಶಿವನೆಂಬರೆನ್ನ"[1]

ಹೀಗೆ ಶಿವನು ತನ್ನನ್ನು ಪರಿಚಯಿಸಿಕೊಳ್ಳುತ್ತಾನೆ. ಜಲಗಾರನಿಗೆ ಆರಂಭದಲ್ಲಿ ನಂಬಲು ಸಾಧ್ಯವಾಗಲಿಲ್ಲ ಏಕೆಂದರೆ ಜಲಗಾರನ ದೃಷ್ಟಿಯ ಶಿವನೇ ಬೇರೆ, ಇಲ್ಲಿ ಸಾಮಾನ್ಯನ ರೀತಿಯಲ್ಲಿ ನಿಂತಿರುವ ಶಿವನೇ ಬೇರೆ, ನಾವೆಲ್ಲರು ತಿಳಿದಿರುವಂತೆ ಶಿವನೆಂದರೆ ಹಣೆಯಲ್ಲಿ ವಿಭೂತಿ, ಕೊರಳಲ್ಲಿ ರುದ್ರಾಕ್ಷಿ ಮಾಲೆ, ಒಂದು ಕೈಯಲ್ಲಿ ತ್ರಿಶೂಲ, ಮತ್ತೊಂದು ಕೈಯಲ್ಲಿ ಡಮರುಗ, ಕೊರಳಲ್ಲಿ ಹಾವು ಇತ್ಯಾದಿ ಲಕ್ಷಣಗಳಿರುವುದು. ಆದರೆ ಇಲ್ಲಿ ಇಂತಹ ಯಾವ ಲಕ್ಷಣಗಳೂ ಇಲ್ಲದ ಕಾರಣ ಜಲಗಾರನು ನಂಬುವುದಿಲ್ಲ. ಅದಕ್ಕೆ ಶಿವನನ್ನು ನಿನ್ನ ನಂಬುವದೆಂತು ನಿನ್ನ ರೂಪಮಂ ನಾನೆಂದುಮಾವೆಡೆಯೊಳುಂ ಕಂಡರಿಯೆ, ಕೇಳರಿಯೆ, ತಿಳಿದವರು ಬೇರೊಂದು

ರೀತಿಯಲಿ ನಿನ್ನ ಬಣ್ಣಿಸಿರುವರು ಎಂದನು.

ಜಲಗಾರನ ಮಾತಿಗೆ ಶಿವನು ಉತ್ತರಿಸುತ್ತಾ "ಪಂಡಿತರ ಸುಳ್ಳು ಬಣ್ಣನೆಯನ್ನು ನಂಬದಿರು, ಅದು ಕುರುಡನು ಬಣ್ಣಿಸುವ ತೆರದಲ್ಲಿದೆ. ನನ್ನ ನಿಜರೂಪವನ್ನು ನೋಡಲೂ ಹೇಸುವ ಜನರು ನನಗೆ ಚಂದಿರನನ್ನು ಮುಡಿಸಿ, ಜಡೆಯಲ್ಲಿ ಗಂಗೆಯನಿಟ್ಟು, ಕೊರಳಲ್ಲಿ ಹಾವನ್ನು ಸುತ್ತಿ, ಹಣೆಯಲ್ಲಿ ಉರಿಗಣ್ಣನುಳ್ಳ ಮುಕ್ಕಣ್ಣನಾಗಿ ಮಾಡಿರುವರು. ನನ್ನ ನಿಜರೂಪದಿಂದ ಕರ್ಮದಲ್ಲಿ ಪೂಜಿಸುತ್ತಿರುವವನು ನೀನೊಬ್ಬನೇ, ನಾನು ಪಂಡಿತರು ಸೃಷ್ಟಿಸಿರುವ ಶಿವನಲ್ಲ, ಜಲಗಾರ ಶಿವನು ನಾನು ಎನ್ನುತ್ತಾನೆ. ಇಲ್ಲಿ ಶಿವನೇ ಹೇಳಿರುವಂತೆ ಯಾರು ಸತ್ಯ ಮತ್ತು ನಿಷ್ಠೆಯಿಂದ ಇರುವರೋ ಹಾಗೂ ಯಾರು ಕಾಯಕದಲ್ಲಿ ಪ್ರಾಮಾಣಿಕರಾಗಿರುತ್ತಾರೋ ಅಂತವರ ಬಳಿ ದೇವರು ಇರುತ್ತಾನೆಂಬ ಸತ್ಯವನ್ನು ಶಿವನ ಮೂಲಕವೇ ಕುವೆಂಪು ಹೇಳಿಸಿರುವುದು ಅವರ ಆಧ್ಯಾತ್ಮಿಕ ಚಿಂತನೆಯ ತಾತ್ವಿಕತೆಯನ್ನು ವ್ಯಕ್ತಪಡಿಸುತ್ತದೆ. ಅಲ್ಲದೆ ನಮ್ಮ ಸಮಾಜದಲ್ಲಿ ಪುರೋಹಿತಶಾಹಿವರ್ಗ ಸಾಮಾನ್ಯ ಜನರಿಗೆ ದೇವರ ಬಗ್ಗೆ ಹುಟ್ಟಿ ಹಾಕಿರುವ ಸುಳ್ಳು, ಭ್ರಮೆಗಳನ್ನು ಮನಗಾಣಬಹುದು. ದೇವರು ಢಾಂಬಿಕ ಮತ್ತು ಆಡಂಬರದ ಭಕ್ತಿ, ಪೂಜೆಗೆ ಒಲಿಯದೆ ಪ್ರಾಮಾಣಿಕ ಕೆಲಸಗಳಿಗೆ ಒಲಿಯುತ್ತಾನೆಂಬ ಸತ್ಯವನ್ನು ಕುವೆಂಪು ಈ ನಾಟಕದಲ್ಲಿ ಜಲಗಾರ ಮತ್ತು ಶಿವನ ಪಾತ್ರಗಳ ಮೂಲಕ ಸ್ಪಷ್ಟಪಡಿಸಿದ್ದಾರೆ.

ನಮ್ಮ ಸಮಾಜದಲ್ಲಿ ಅಸ್ಪೃಶ್ಯರಿಗೆ ದೇವಾಲಯದ ಪ್ರವೇಶವನ್ನು ನಿಷೇಧ ಮಾಡಿರುವುದರಿಂದ ದೇವರನ್ನು ಪ್ರಕೃತಿಯಲ್ಲಿ, ಪ್ರಾಮಾಣಿಕ ಕಾಯಕದ ಮೂಲಕ ಹಾಗೂ ನಮ್ಮ ಸುತ್ತಮುತ್ತಲಿನ ಕಡುಬಡವರಿಗೆ, ದೀನರಿಗೆ, ಅಸಹಾಯಕರಿಗೆ ಸಹಾಯ ಮಾಡುವುದರ ಮೂಲಕ ಅವರುಗಳ ಉದ್ಧಾರದಲ್ಲಿ ದೈವವನ್ನು ಕಾಣಬೇಕೆಂಬ ಮಾರ್ಗವನ್ನೂ ಸೂಚಿಸಿದ್ದಾರೆ. ಕುವೆಂಪು ಕಾಯಕದ ಮಹತ್ವವನ್ನು ಎತ್ತಿ ಹಿಡಿಯುವುದರ ಮೂಲಕ ಕಸ ಗುಡಿಸುವುದು ಕೀಳಾದ ಕೆಲಸವಲ್ಲ, ಎಲ್ಲಾ ಕಾಯಕವೂ ಶ್ರೇಷ್ಠ ಆದರೆ ನಾವು ಮಾಡುವ ಕೆಲಸವನ್ನು ನಿಷ್ಠೆಯಿಂದ ಮಾಡಿದರೆ ಅಂತವರಿಗೆ ಶಿವನು ಒಲಿದೇ ಒಲಿಯುತ್ತಾನೆಂಬ ಸತ್ಯವನ್ನು ಈ ನಾಟಕದ ಮೂಲಕ ಅರುಹಿದ್ದಾರೆ.

"ಊರ ತೋಟಿಯು ನೀನು; ಜಗದ ತೋಟಿಯು ನಾನು!
ಬಾ ಎನ್ನ ಸೋದರನೆ, ನೀನೆನ್ನ ನಿಜಭಕ್ತ!
ನಿನ್ನದೇ ಶಿವಭಕ್ತಿ! ನೀನೇ ಶಿವಭಕ್ತ!
ನೀನೆ ನಾನಾಗಿಹೆನು! ನಾನೆ ನೀನಾಗಿರುವೆ!
ಶಿವ ನೀನು! ಶಿವ ನೀನು!"[2]

ಇಲ್ಲಿ ಜಲಗಾರನನ್ನು ಶಿವನು ಅಪ್ಪಿಕೊಳ್ಳುತ್ತಾನೆ. ಜಲಗಾರನು ದೇವಸ್ಥಾನಕ್ಕೆ ಹೋಗಲಿಲ್ಲ, ಪೂಜೆ ಮಾಡಲಿಲ್ಲ, ಆದರೆ ಹಾಗೆ ಮಾಡಿದವರಿಗಿಂತ ಉತ್ತಮ ನೆಲೆಯಲ್ಲಿ ನಿಂತನು. ಕಾರಣ ಅವನಲ್ಲಿದ್ದ ನಿರ್ಮಲವಾದ ಕಾಯಕಶ್ರದ್ಧೆ. ಇಂತಹ ಶ್ರದ್ಧೆಯಿಂದಲೇ ಜಲಗಾರನು ಭಗವಂತನನ್ನು ಅವನಿದ್ದಲ್ಲಿಗೇ ಕರೆಸಿಕೊಂಡನು. ಆದಕಾರಣ ಎಲ್ಲಾ ದೇವರುಗಳಿಗಿಂತ, ದೇವಸ್ಥಾನಗಳಿಗಿಂತ ಕಾಯಕ ದೊಡ್ಡದು ಎಂಬ ತತ್ವವನ್ನೂ ಸಹ ಈ ನಾಟಕವು ಸಾರುತ್ತದೆ.

ಉಪಸಂಹಾರ

ಒಟ್ಟಾರೆಯಾಗಿ ಹೇಳುವುದಾದರೆ ಆಧುನಿಕ ಕನ್ನಡ ನಾಟಕ ಕ್ಷೇತ್ರದಲ್ಲಿ ಕುವೆಂಪುರವರ 'ಜಲಗಾರ' ನಾಟಕವು ಚಿಕ್ಕದಾದರೂ ಅದು ಕೊಡುವ ಸಂದೇಶ ದೊಡ್ಡದು. ಜಾತಿ, ಧರ್ಮ, ದೇವರು, ಮೌಢ್ಯತೆ, ಬಡತನ, ಕಾಯಕ ಈ ಮೊದಲಾದ ವಿಚಾರಗಳ ಬಗೆಗೆ ವೈಚಾರಿಕವಾದ ಅರಿವನ್ನು ಮೂಡಿಸುವ ಕೆಲಸವನ್ನು ಮಾಡುತ್ತದೆ. ಸರ್ವೋದಯ, ಸಮಾನತೆ, ಪೂರ್ಣ ದೃಷ್ಟಿಯ ವಿಶ್ವಮಾನವ ತತ್ವದ ಆಚರಣೆ ಇಂದಿನ ಬದುಕಿಗೆ ಅಗತ್ಯ. ಈ ಅಂಶವನ್ನು ಕುವೆಂಪುರವರು ಜಲಗಾರ ನಾಟಕದಲ್ಲಿ ರೈತ, ಜಲಗಾರ ಮತ್ತು ಶಿವನ ಪಾತ್ರಗಳ ಸಹಾಯದಿಂದ ತಮ್ಮ ಆಲೋಚನೆ ಮತ್ತು ಧೋರಣೆಗಳನ್ನು ಬಹಳ ಸ್ಪಷ್ಟವಾಗಿ ನಿರೂಪಿಸಿದ್ದಾರೆ. ಮತ್ತೊಂದು ವಿಶೇಷವೆಂದರೆ ಇಲ್ಲಿ ಜಲಗಾರನನ್ನೇ ಶಿವನನ್ನಾಗಿಸಿರುವುದು ಅತ್ಯಂತ ದೊಡ್ಡ ಮಾನವೀಯತೆಯ ಸಂಕೇತ. ಹಾಗೆಯೇ ನಿಜವಾದ ಶಿವನಿರುವುದು ಬಡವನ ಎದೆಯಲ್ಲಿ ಎಂಬುದನ್ನು ಈ ನಾಟಕವು ಬಹಳ ಅರ್ಥಪೂರ್ಣವಾಗಿ ಧ್ವನಿಸುತ್ತದೆ.

ನಾಟಕದ ಫಲಿತಗಳು:

1. ಈ ನಾಟಕವು 'ಕಾಯಕವೇ ಕೈಲಾಸ'ವೆಂಬಂತೆ ಎಲ್ಲಾ ಕಾಯಕವೂ ಶ್ರೇಷ್ಠ ಎಂಬುದನ್ನು ತಿಳಿಸುತ್ತದೆ.
2. ದೇವರು ಆಢಂಬರದ ಭಕ್ತಿಯಲ್ಲಿರದೆ ನಿಷ್ಕ್ಮಲ್ಮಶವಾದ ಭಕ್ತಿಗೆ ಮಾತ್ರ ಭಗವಂತ ಒಲಿಯುತ್ತಾನೆ ಎಂಬ ತಿರುಳನ್ನು ಎಂಬ ಸತ್ಯವನ್ನು ಹೊರಸೂಸುತ್ತದೆ.
3. ಈ ನಾಟಕದ ಮೂಲಕ ಭಗವಂತನ ನಿಜವಾದ ಸ್ವರೂಪವನ್ನು ಮನಗಾಣಬಹುದು.
4. ಮನುಷ್ಯನಿಗೆ ಮಾನವೀಯತೆ ಬಹಳ ಮುಖ್ಯವಾದುದು ಎಂಬುದನ್ನು ಈ ನಾಟಕ ಸ್ಪಷ್ಟಪಡಿಸುತ್ತದೆ.
5. ಜಾತಿ, ಧರ್ಮ, ದೇವರು, ಮೌಢ್ಯತೆ, ಬಡತನ, ಕಾಯಕ ಈ ಮೊದಲಾದ

ವಿಚಾರಗಳ ಬಗೆಗೆ ವೈಚಾರಿಕವಾದ ಅರಿವನ್ನು ಮೂಡಿಸುವ ಕೆಲಸವನ್ನು ಮಾಡುತ್ತದೆ.

6. 'ವಿಶ್ವಮಾನವ ತತ್ವದ ಆಚರಣೆ' ಇಂದಿನ ಬದುಕಿಗೆ ಅಗತ್ಯ. ಎಂಬುದನ್ನು ಕುವೆಂಪುರವರು ಜಲಗಾರ ನಾಟಕದ ಮೂಲಕ ಮನಗಾಣಿಸಿದ್ದಾರೆ.

ಅಡಿ ಟಿಪ್ಪಣಿ

1. ಜಲಗಾರ ನಾಟಕ – ಕುವೆಂಪು, ಉದಯರವಿ ಪ್ರಕಾಶನ, ಮೈಸೂರು, ಪುಟ–23
2. ಜಲಗಾರ ನಾಟಕ – ಕುವೆಂಪು, ಉದಯರವಿ ಪ್ರಕಾಶನ, ಮೈಸೂರು, ಪುಟ–26

ಪರಾಮರ್ಶನ ಗ್ರಂಥಗಳು :

1. ಸಹ್ಯಾದ್ರಿಯ ಸೂರ್ಯ – ಚಕ್ಕಳ್ಳಿ ಶಿವಶಂಕರ್, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು – 2004
2. ಕುವೆಂಪು ಸಮಗ್ರ ನಾಟಕ – ಶಿವಾರೆಡ್ಡಿ ಕೆ.ಸಿ, ಪ್ರಸಾರಾಂಗ ಹಂಪಿ ವಿಶ್ವವಿದ್ಯಾಲಯ – 2004
3. ಜಲಗಾರ ನಾಟಕ – ಕುವೆಂಪು, ಉದಯರವಿ ಪ್ರಕಾಶನ, ಮೈಸೂರು – 2012
4. ಶ್ರೀ ಕುವೆಂಪು – ಡಾ.ಜಿ.ಎಸ್ ಶಿವರುದ್ರಪ್ಪ, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ – 2003
5. ವಿಚಾರವಾದಿ ಕುವೆಂಪು – ಸುಜಾತ ಲಕ್ಷ್ಮೀಪುರ, ಸಿವಿಜಿ ಪಬ್ಲಿಕೇಷನ್ ಬೆಂಗಳೂರು – 2021

***

ಮೈದಾನ ಕಾದಂಬರಿ : ಅಂತರಂಗದ ಹುಡುಕಾಟ

1
ದೇವಿಂದ್ರಪ್ಪ
ಸಂಶೋಧನಾ ವಿದ್ಯಾರ್ಥಿ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – 583276
Devuk1477@gmail.com

ಕನ್ನಡ ಸಾಹಿತ್ಯವು ಸದಾ ಅನುವಾದದ ಹೊಸತನದ ಹಂಬಲಿಕೆಯಿಂದ ಕೂಡಿರುವಂತಹದ್ದು. ಕಾಲಕಾಲಕ್ಕೆ ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಅನುವಾದಗೊಳ್ಳುವ ಕೃತಿಗಳು ಆಯಾ ಕಾಲಘಟ್ಟದ ಮನುಷ್ಯ ಬದುಕಿನ ಚರಿತ್ರೆಯನ್ನು ಕಟ್ಟಿಕೊಡುತ್ತವೆ. ಅವುಗಳು ಒಂದಲ್ಲ ಒಮದು ಕಾರಣಕ್ಕೆ ಜನ ಸಮುದಾಯದ ವಿರೋಧವನ್ನು ಲೆಕ್ಕಿಸದೆ ಮನುಷ್ಯನ ಅಂತರಂಗದ ಸಹಜ ವಿಷಯಗಳಿಗೆ ಒತ್ತು ನೀಡುತ್ತಿರುತ್ತವೆ. ಅಂತಹದೇ ಒಂದು ಕಾದಂಬರಿ ಮೈದಾನ. ತೆಲುಗಿನಲ್ಲಿ ಚಲಂ ಹೆಸರಿನಿಂದಲೇ ಗುರುತಿಸಲ್ಪಟ್ಟ ಗುಡಿಪಾಟಿ ವೆಂಕಟಾಚಲಂ ಓದುಗರಲ್ಲಿ ರೋಮಾಂಚನದ ಜೊತೆಗೆ ಪ್ರಶ್ನೆಗಳನ್ನು ಹುಟ್ಟು ಹಾಕಿದ ಲೇಖಕ. ಆನರ ನಂಬಿಕೆಗಳನ್ನು ಪ್ರಚೋದಿಸಿ ತನ್ನ ಸಮುದಾಯದಿಂದಲೇ ಧಿಕ್ಕರಿಸಿ ವಿರೋಧಿಸಲ್ಪಟ್ಟವನು. 'ಹೆಣ್ಣು ಮಕ್ಕಳನ್ನು

ತಪ್ಪು ದಾರಿಗೆ ಎಳೆಯುತ್ತಿದ್ದಾನೆ' ಎಂದು ಆರೋಪಿಸಿಕೊಂಡ ವಿಚಾರವಾದಿ ಬರಹಗಾರ. ಮೈದಾನ ಕಾದಂಬರಿಯು ತೆಲುಗಿನಲ್ಲಿ ರಚನೆಗೊಂಡಿದ್ದು1925 ರಲ್ಲಿ. ಇಂದಿಗೆ ನೂರು ವರ್ಷ. ಅಂದಿನ ಜನರ ನಂಬಿಕೆ, ಆಚರಣೆ, ಬದುಕಿನ ಕ್ರಮ, ಧರ್ಮ ಮತ್ತು ಜಾತಿಯ ಬಗೆಗಿರುವ ನಿಲುವು ಎಲ್ಲವನ್ನೂ ಈ ಕಾದಂಬರಿ ಪ್ರಶ್ನಿಸುತ್ತಲೇ ಹೋಗುತ್ತದೆ. ಹಿಂದು ಮತ್ತು ಮುಸ್ಲಿಂ ಎಂಬ ಎರಡು ಧರ್ಮದೊಳಗಿನ ಪ್ರೀತಿಗೆ ಇದು ಮೊದಲ ಆದ್ಯತೆಯಾಗಿ ನಿಲ್ಲುತದೆ. ಈ ಕಾದಂಬರಿಯನ್ನು ರಮೇಶ ಅರೋಲಿಯರು ಕನ್ನಡಕ್ಕೆ 2018 ರಲ್ಲಿ ಅನುವಾದಿಸಿದ್ದಾರೆ. ಈ ಕಾದಂಬರಿ 1925 ರಲ್ಲಿಯೇ ರಚನೆಯಾದರೂ ಇದು ಕಾಲಾತೀತವಾದದ್ದು. ಅಂದಿನ ಸಮಾಜದ ದೃಷ್ಟಿಯಲ್ಲಿ ಒಪ್ಪಿತವಲ್ಲದ ವಿಚಾರವನ್ನು ಈ ಕಾದಂಬರಿ ನಿರೂಪಿಸುತ್ತದೆ.

ಅನುವಾದಕರು ಈ ಕಾದಂಬರಿಯ ಅನುವಾದದ ಉದ್ದೇಶವನ್ನು ಈ ರೀತಿಯಾಗಿ ಸ್ಪಷ್ಟಪಡಿಸಿದ್ದಾರೆ. “ಮುಖ್ಯವಾಗಿ ‘ಕಿಸ್ ಆಫ್ ಲವ್' ಇಲ್ಲ, ‘ಲವ್ ಜಿಹಾದ್' ಇಂತಹ ಗಂಡು ಹೆಣ್ಣಿನ ‘ಸಹಜ' ಸಂಬಂಧಗಳು ಕೋಮು ಸ್ವರೂಪ ಪಡೆಯುತ್ತಿರುವ ಇಂದಿನ ಈ ವಿಷಮ ಸ್ಥಿತಿಯಲ್ಲಿ, ದೈಹಿಕ ಮಿಲನದ ವಿವರಗಳ ಆಚೆಗೆ, ಈ ಕೃತಿ ಎತ್ತುವ ಹಲವು ಪ್ರಶ್ನೆಗಳು ನಮ್ಮನ್ನು ಆಲೋಚನೆಗೆ ಹಚ್ಚುತ್ತದೆ”.1 ಎಂಬ ಲೇಖಕರ ಮಾತಿನ ಆಶಯವನ್ನು ಈ ಕಾದಂಬರಿಯುದ್ದಕ್ಕೂ ಕಾಣಬಹುದು. ಆನರ ಸಹಜ ಆಡುನುಡಿಯಾದ ‘ಓಡಿ ಹೋದವಳು' ಎಂಬಲ್ಲಿಂದ ಈ ಕಾದಂಬರಿ ಆರಂಭವಾಗುತ್ತದೆ. ಮೈದಾನ ಹೆಸರಿಗೆ ತಕ್ಕ ಹಾಗೆ ಇದು ದೇಹಕ್ಕೆ ಸಂಬಂಧಿಸಿದ, ಲೋಕದ ಹಂಗನ್ನು ಮೀರಿ ನಿಂತ ರಾಜೇಶ್ವರಿಯ ಅಂತರಾಳದ ಕಥೆ. ಇದು ಕೇವಲ ಹೆಣ್ಣಿನ ಅಂತರಂಗದ ಕಾದಂಬರಿ ಆದರೂ ಸಹ ಸಂಪ್ರದಾಯಸ್ಥ ಬ್ರಾಹಣ ಕುಟುಂಬದ ಹೆಣ್ಣು ಹೊಸಿಲನ್ನು ದಾಟಿ ಮುಸ್ಲಿಂ (ತುರುಕರ) ಯುವಕನ ನಿಷ್ಕಲ್ಮಶ ಪ್ರೇಮವನ್ನು ಅರಸಿ ಹೋಗುವ ನವಿರು ಪ್ರೇಮ ಕಥನವಾಗಿದೆ. ಪುರುಷರ ನಿರಂಕುಷದ ಕುರಿತಾಗಿ ಭಾರತದ ಅನೇಕ ಭಾಷೆಗಳಲ್ಲಿ ಸಾಹಿತ್ಯ ರಚನೆಗೊಳ್ಳುತ್ತಲೇ ಇದೆ. ಸಂಪ್ರದಾಯವನ್ನು ಒಪ್ಪಿಕೊಳ್ಳುವ, ಮೀರುವ ಅನೇಕ ಜನರ ಕಥನಗಳನ್ನು ಲೇಖಕರು ಚಿತ್ರಿಸುತ್ತಲೇ ಬಂದಿದ್ದಾರೆ. ಅವರೆಲ್ಲರ ನಡುವರ ಚಲಂ ಅತ್ಯಂತ ವಿಶಿಷ್ಟ ಲೇಖಕನಾಗಿ ನಿಲ್ಲುತ್ತಾರೆ. ಅವರ ಎಲ್ಲ ಕಾದಂಬರಿಗಳು ಮುಖ್ಯವಾಗಿ ಹೆಣ್ಣನ್ನೇ ಕೇಂದ್ರಿಕರಿಸಿ ರಚನೆಗೊಂಡರುವಂತಹವು. ಮೈದಾನ ಕಾದಂಬರಿಯ ರಾಜೇಶ್ವರಿಗೆ ಮುಕ್ತ ಸ್ವಾತಂತ್ರ್ಯ ನೀಡುತ್ತಲೇ ಕೊನೆಗೆ ಅವಳನ್ನು ಮತ್ತೆ ಏಕಾಂಗಿಯಾಗಿ ಮಾಡಿದ್ದರೇನೋ ಎಂದೆನಿಸುತ್ತದೆ.

ರಾಜೇಶ್ವರಿ – ಅಮೀರ್ – ಮೀರಾ

ಮೈದಾನ ಕಾದಂಬರಿಯ ಪ್ರಮುಖ ಪಾತ್ರಗಳು. ರಾಜೇಶ್ವರಿ ಮೇಲ್ವರ್ಗದ ಬ್ರಾಹ್ಮಣ ಸ್ತ್ರೀ. ಅಮೀರ್ ಮುಸ್ಲಿಂ ಯುವಕ (ತುರುಕರವನು). ಮೀರಾ ಅಮೀರನ ಗೆಳೆಯ. 16 ವರ್ಷದ ಬಾಲಕ. ಈಗಾಗಲೇ ರಾಜೇಶ್ವರಿಗೆ ಮದುವೆ ಆಗಿದೆ. ಆದರೆ ಆಕೆಯ ಗಂಡನ ವರ್ತನೆಯಿಂದ ಅವಳಿಗೆ ಯಾವುದೇ ದೈಹಿಕ, ಮಾನಸಿಕ ನೆಮ್ಮದಿ ಇಲ್ಲ. ಗಂಡ ಪ್ರಸಿದ್ಧ ವಕೀಲ. ವಕೀಲಿತನದಲ್ಲಿ ಆತನನ್ನು ಮೀರಿಸಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಹೆಂಡತಿಯ ಪ್ರೀತಿಯಲ್ಲಿ ಆತನದು ನಿರ್ಲಕ್ಷ್ಯತನ. ಒಮ್ಮೆ ರಾಜೇಶ್ವರಿ 'ತಲೆ ಸ್ನಾನ ಮಾಡಿ, ಜಡೆಗೆ ಹೂ ಮುಡಿದು ಹೊಸ ರೇಷಿಮೆ ಸೀರೆ ಉಟ್ಟು ಹತ್ರ ಹೋದರೆ, ಕಾಗದದಲ್ಲಿ ಮುಖ ಅದ್ದಿ 'ಮೊನ್ನೆ ನಿನ್ನ ಕೈಯಿಗೆ ಹತ್ತರ ನೋಟು ಕೊಟ್ಟಿದ್ದೆನಲ್ಲ, ಅದು ಬೇಕು. ತಂದು ಕೊಡು' ಅಂತಿದ್ದ. ಕೊಟ್ಟ ಮೇಲೆ ತಲೆಯೆತ್ತಿ ನೋಡಿ 'ಹೌದು ಮೊನ್ನೆ ತರಿಸಿದ್ದ ಸೀಗೆಕಾಯಿ ಎಲ್ಲ ಬಳಸಿದಿಯಾ? ಅನ್ನೋದು'.2 ಈ ರೀತಿಯ ನಿರ್ಲಕ್ಷ್ಯತನವೇ ರಾಜೇಶ್ವರಿಯನ್ನು ಅಮೀರನೆಡೆಗೆ ಆಕರ್ಷಿಸಿದ್ದು.

ರಾಜೇಶ್ವರಿ ತಾನು ಅರಸಿ ಹೋಗಿದ್ದು ಏನನ್ನು ಪ್ರೇಮವನ್ನೋ, ಕಾಮವನ್ನೋ, ಸ್ನೇಹವನ್ನೋ, ದೈವತ್ವವನ್ನೋ? ಈ ಎಲ್ಲ ಪ್ರಶ್ನೆಗಳ ಆಚೆ ಅವಳದೇ ದೃಷ್ಟಿಯಲ್ಲಿ ನೋಡಿದಾಗ ಅವಳು ಹೇಳುವುದೇ ಹೀಗೆ 'ಅಮೀರ್‌ನೊಂದಿಗೆ ಕಾಮ ತೀರಿಸಿಕೊಳ್ಳುವುದಕ್ಕಲ್ಲ. ಆತನ ಮುಖ ನೋಡುತ್ತಾ ಆತನನ್ನು ಪೂಜಿಸಲು! ಅಮೀರ್ ಕಣ್ಣಲ್ಲಿ ಆರಾಧನೆಯನ್ನು ನೋಡಲು, ಆತನೊಂದಿಗೆ ಮಾತಾಡಿ, ಆತನೆಡೆಗೆ ನೋಡುವ ಅದೃಷ್ಟಕ್ಕಾಗಿ ಹೋದೆ'.3 ಈ ಮಾತಿನಲ್ಲಿಯೇ ತಿಳಿಯುತ್ತದೆ ರಾಜೇಶ್ವರಿ ಹಂಬಲಿಸಿದ್ದು ಯಾತಕ್ಕಾಗಿ ಎಂದು. ಅಮೀರನ ಸಹವಾಸದಿಂದ ಅವಳಿಗೆ ದೈವತ್ವದ ಜೊತೆಗೆ ಮನುಷ್ಯತ್ವವು ಪ್ರಾಪ್ತವಾಗಿದೆ ಎಂದು ಅವಳ ಮಾತಿನಲ್ಲಿ ತಿಳಿಯುತ್ತದೆ. ಸಮಾಜದ ಕಟ್ಟುಪಾಡುಗಳನ್ನು ಮೀರುವ ಸಾಹಸ ಮಾಡಿದ್ದು ರಾಜೇಶ್ವರಿಯ ಗೆಲುವು ಎಂದುಕೊಂಡರೆ ಕೊನೆಗೆ ಅಮೀರನಿಂದ ಅವಳು ಪಡುವ ಯಮ ಯಾತನೆ ಊಹೆಗೂ ನಿಲುಕದು. ಪುರುಷ ಸಮಾಜದಲ್ಲಿ ಎಲ್ಲರೂ ಶೋಷಿತರೇ. ಯಾವುದನ್ನು ಮೀರಬೇಕೆಂದು ರಾಜೇಶ್ವರಿ ಮನೆಯನ್ನು ಧಿಕ್ಕರಿಸಿ ಬಂದಿದ್ದಳೋ ಮತ್ತೆ ಅಂತಹದೇ ಕೂಪಕ್ಕೆ ಬಿದ್ದಳು. ಈ ಕಾದಂಬರಿ ಕೊನೆಗೆ ದುರಂತವಾಗಿ ಅಂತ್ಯಗೊಳ್ಳುತ್ತದೆ. ಮೈದಾನ ಈ ಪದವನ್ನು ಬಿಡಿಸಿದಾಗ ಎರಡು ಅರ್ಥ ಬರುತ್ತವೆ. ಮೈ, ದೇಹಕ್ಕೆ ಸಂಬಂಧಿಸಿದ್ದು, ದಾನ ಎಂದರೆ ನೀಡುವುದು ಅಥವಾ ಪಡೆಯುವುದು ಎಂದರ್ಥ. ರಾಜೇಶ್ವರಿ ತನ್ನನ್ನು ತಾನು ದೈವತ್ವಕ್ಕೆ, ಅಮರನಾದ ಅಮೀರನ ಆತ್ಮಕ್ಕೆ ಅರ್ಪಿಸಿಕೊಳ್ಳುವುದರ

ಜೊತೆಗೆ ಪಡೆದುಕೊಳ್ಳುವುದನ್ನು ಕಾದಂಬರಿ ನಿರೂಪಿಸುತ್ತದೆ. ಪೂಜೆ ಮತ್ತು ಫಲ ಎರಡರಿಂದ ಒಂದು ಹೊಸ ಅನುಭೂತಿ ಸೃಷ್ಟಿ ಆಗುತ್ತದೆ. 'ಆ ಜೀವನವೆಲ್ಲ ಸುಂದರ ಸ್ವಪ್ನದಂತೆ, ಆ ಮರುಭೂಮಿ ಪುಣ್ಯಭೂಮಿಯಂತೆ, ನನ್ನ ಜೀವನದಲ್ಲಿ ಈಶ್ವರನಿಗೆ ನಾನೆತ್ತುವ ಮಂಗಳಾರತಿಯಂತೆ ಅನ್ನಿಸಿತು'. ಎಂಬ ಈ ಮಾತು ಅಮೀರನ ಕುರಿತಾಗಿದೆ. ಮೈದಾನ ಎಂದರೆ ನಶ್ವರ. ಅದು ಖಾಲಿ, ಬಯಲು ಮಾತ್ರ ಅಲ್ಲದೆ ಸಂತೃಪ್ತ ಬದುಕಿನ ಅವಿಭಾಜ್ಯ ಅಂಗವಾಗಿ ಈ ಕಾದಂಬರಿ ನಿರೂಪಿಸುತ್ತದೆ. 'ಹೆಣ್ಣಿಗೂ ಒಂದು ದೇಹ ಇದೆ, ಅದಕ್ಕೆ ವ್ಯಾಯಾಮ ಕೊಡಿ, ಮೆದುಳಿದೆ ಅದಕ್ಕೆ ಜ್ಞಾನ ಕೊಡಿ, ಹೃದಯವಿದೆ ಅದಕ್ಕೆ ಅನುಭವ ಕೊಡಿ' ಎಂಬ ಸಾಲಿನ ಹಿನ್ನೆಲೆಯಾಗಿ ಚಲಂ ತಮ್ಮ ಜೀವನದುದ್ದಕ್ಕೂ ಇಂತಹದೇ ಪ್ರಶ್ನೆಗಳನ್ನು ಮುಖ್ಯ ನೆಲೆಯನ್ನಾಗಿ ಮಾಡಿಕೊಂಡು ಅನೇಕ ಕಾದಂಬರಿಗಳನ್ನು ರಚಿಸಿದರು.

ಮುನ್ನುಡಿಯಲ್ಲಿ ಜಯಪ್ರಭ ಅವರು ಹೇಳುವ ಹಾಗೆ 'ಕೇವಲ ಸನಾತನ ಧರ್ಮವನ್ನು... ಅದರೊಳಗಿನ ಸ್ತ್ರೀಯರ ಅತಂತ್ರ ಬದುಕನ್ನ ವಿವರಿಸಲೆಂದು ಚಲಂ ಮೈದಾನಂ ಬರೆಯಲಿಲ್ಲ. ಚಲಂಗೆ ಮೈದಾನಂ ಒಂದು ಆದರ್ಶ ಇಕ್ಕಟ್ಟಿನ ಕೋಣೆಯ ಅಧಮ ಶೃಂಗಾರದಲ್ಲಿ... ಅಸಮ–ಸಂಬಂಧಗಳ ಮಧ್ಯೆ ಸ್ತ್ರೀ ಪುರುಷರೊಳಗೆ ಕೊಳೆತು ಹೋಗುತ್ತಿರುವ ಪ್ರೇಮ ಬಂಧನವನ್ನ ಬಲಪಡಿಸಲು ಚಲಂ ಮೈದಾನಂ ಬರೆದರು. ಮನುಷ್ಯನಿಗೆ ಪ್ರಕೃತಿಯೊಂದಿಗೆ ಇರಬೇಕಾದ ಸಾಮೀಪ್ಯವನ್ನು ಸೂಚಿಸಿದರು'.4

ರಾಜೇಶ್ವರಿ, ಅಮೀರ, ಮೀರಾ ಇವು ಮೂರು ಪ್ರಧಾನ ಪಾತ್ರಗಳು. ಈ ತ್ರಿಕೋನ ಪ್ರೇಮ ಕಾದಂಬರಿ ಸಮಾಜ ಒಪ್ಪಿತ ಮೌಲ್ಯಗಳನ್ನು ಪ್ರಶ್ನಿಸುವ, ತಿರಸ್ಕರಿಸುವ ಮೂಲಕ ಸಮಾಜಕ್ಕೊಂದು ಸ್ತ್ರೀ ಸ್ವೇಚ್ಛೆ ಸ್ವಾತಂತ್ರ್ಯವನ್ನು ನೀಡುತ್ತದೆ. ರಾಜೇಶ್ವರಿಗೆ ಐಷಾರಾಮಿ ಜೀವನಕ್ಕಿಂತ ತನ್ನನ್ನು ಪ್ರೀತಿಸುವ ಜೀವದ ಅವಶ್ಯಕತೆ ತುಂಬಾ ಇತ್ತು. ಆಕಸ್ಮಿಕವಾಗಿ ಭೇಟಿಯಾಗುವ ಅಮೀರನ ಸಾಂಗತ್ಯಕ್ಕೆ ಒಳಗಾಗಿ ಕೊನೆಗೆ ಗಂಡ ಮತ್ತು ಮನೆ ತೊರೆದು ಮೈದಾನದಲ್ಲಿ ಅಮೀರನ ಪ್ರೇಮಕ್ಕೆ ಬೀಳುತ್ತಾಳೆ. ಅಮೀರನ ಬಲವಾದ ಮೋಹ ಅವಳಿಗೆ ದೈವತ್ವ, ಪ್ರೇಮತ್ವ, ಅಮರತ್ವ ನೀಡುತ್ತದೆ. ಆರಂಭದಲ್ಲಿ ಕೇವಲ ಅಮೀರನ ದೂರದ ಸ್ಪರ್ಶ ಅವಳನ್ನು ಹೊಸ ಮನುಷ್ಯಳನ್ನಾಗಿ ಮಾಡುತ್ತದೆ. ಅವನ ಬಲವಾದ ಮೋಹದಲ್ಲಿ ಮುಳುಗಿದ ರಾಜೇಶ್ವರಿಯು ಅವನ ಕುರಿತಾಗಿ 'ಮನೆಯ ಪ್ರತಿ ಮೂಲೆಯನ್ನು ಬೆಳಗಿದೆ ನನ್ನ ಹೃದಯದ ಆನಂದದ ಜ್ಯೋತಿಯಿಂದ'.5 ಎಂದು ಹೇಳುವ ಮೂಲಕ ಹೊಸ ಮನುಷ್ಯಳಾಗುವ ಕಡೆಗೆ ಮೊದಲ ಹೆಜ್ಜೆ ಇಡುತ್ತಾಳೆ. ಸನಾತನ ಪರಂಪರೆಯಲ್ಲಿ ಸಮಾಜ ಹೆಣ್ಣಿನ ಮೇಲೆ ಹೇರಲಾದ ಅಧಾರ್ಮಿಕ

ನೀತಿಯನ್ನು ರಾಜೇಶ್ವರಿ ಪ್ರಶ್ನಿಸುತ್ತಲೇ ಹೋಗುತ್ತಾಳೆ. ಮನೆ ತೊರೆದು ಅಮೀರ್‌ನೊಂದಿಗೆ ಹೋದ ರಾಜೇಶ್ವರಿ ಅನುಭವಿಸಿದ ಪ್ರೀತಿ, ಶೃಂಗಾರ ರಸಘಳಿಗೆಗಳು ತನಗೆ ತಾನೇ ಹೇಳಿಕೊಳ್ಳುವ ಆತ್ಮಸಂಗಾತಿ ರೀತಿಯಲ್ಲಿವೆ. ಹೆಣ್ಣು ಲೈಂಗಿಕತೆ ಕುರಿತಾಗಿ ಮುಕ್ತತೆಯಿಂದ ಮಾತನಾಡುವುದು ಪುರುಷ ಪ್ರಧಾನ ಸಮಾಜದಲ್ಲಿ ನಿಷಿದ್ಧ. ಹೆಣ್ಣು ಗಂಡಿನ ವಿಷಯ ಕೇವಲ ನಾಲ್ಕು ಗೋಡೆಗೆ ಸೀಮಿತ ಮಾಡಿದ ಜಿಡ್ಡುಗಟ್ಟಿದ ಸಂಪ್ರದಾಯದ ವಿರುದ್ಧ ರಾಜೇಶ್ವರಿ ಪ್ರತಿಭಟಿಸುವುದು ಹೊಸ ಲೋಕದ ಬೆಳವಣಿಗೆಯ ದ್ಯೋತಕ ಎನ್ನಬಹುದು. ತಾನು ಅರಸಿ ಹೋಗಿದ್ದ ಅಮೀರನು ನಂತರದಲ್ಲಿ ಆ ಊರಿನ ತೋಳು ಸಾಬನ ಮಗಳ ಮೇಲೆ ಅನುರಕ್ತಿ ಬಯಸಿ ಹೋದಾಗ ಏನನ್ನೂ ಯೋಚಿಸದೆ ಅವಳೊಂದಿಗೆ ಮಾತನಾಡಿ ಅಮೀರನನ್ನು ಆನಂದದಲ್ಲಿ ಇರುವ ಹಾಗೆ ನೋಡಿಕೊಳ್ಳುತ್ತಾಳೆ. ಹೆಣ್ಣು ಎಂದರೆ ತ್ಯಾಗ, ಗಂಡು ಎಂದರೆ ಅಧಿಕಾರ, ದರ್ಪ ಎಂಬುದು ಅಮೀರನ ಮೂಲಕ ಮತ್ತೊಮ್ಮೆ ನಿರೂಪಣೆಗೊಳ್ಳುತ್ತದೆ.

ಒಮ್ಮೆ ರಾಜೇಶ್ವರಿಯನ್ನು ಕಾಣಲು ಅವಳ ಮಾವ ಬಂದಾಗ ಆಗ ರಾಜೇಶ್ವರಿ ದಿಟ್ಟತನದಿಂದ ಅವರನ್ನು ಪ್ರಶ್ನಿಸುತ್ತಾಳೆ. ಮೇಲ್ವರ್ಗದ ಸಮಾಜದ ಒಳಗಿನ ಕರ್ಮಠಗಳನ್ನು ಒಂದೊಂದಾಗಿ ಬಯಲಿಗೆಳೆಯುತ್ತಾಳೆ. ಒಂದು ಕಡೆ ಅವಳು ಹೇಳುವ ಮಾತು ‘ಏನೂ ಇಲ್ಲ ಇದುವರೆಗು ಪಶುವಿಗಿಂತ ಕೀಳಾದ ಬದುಕನ್ನೆ ಬದುಕಿದ್ದೆ. ಈಗ ಪಶುವಾಗಿ ಸುಖ ಪಡುತ್ತಿದ್ದೀನಿ’6 ಎಂದು ಹೇಳಿದಾಗ ಅವಳ ಮಾವ ದಿಗ್ಭ್ರಾಂತರಾಗುತ್ತಾರೆ. ನಾನು ಆಡಿ ಬೆಳೆಸಿದ ರಾಜೀ ಇವಳೇನಾ ಎಂದು, ಆಗ ಅವಳೇ ಯೋಚಿಸುವುದು, ಮಾವ ನಮ್ಮ ಪ್ರೇಮದ ಸಮಯವನ್ನು ಕಾಲಹರಣ ಮಾಡುತ್ತಿದ್ದಾನೆ ಎಂದು ಹೇಳುತ್ತಾ, ಒಂದು ನಿಮಿಷ ಬಿಟ್ಟಿರದ ಪ್ರೇಮ ಅನುಭವಿಸುವುದಕ್ಕಿಂತ ಅದೃಷ್ಟ ಬೇರೇನಿದೆ ಹೆಣ್ಣಿಗೆ, ನಿನಗರ್ಥವಾಗಲ್ಲ ಬಿಡು’ ಎಂದು ನುಡಿಯುತ್ತಾಳೆ.

ಹೆಣ್ಣಿಗೆ ಉಣ್ಣಲು, ಉಡಲು ಕೊಟ್ಟರೆ ಸಾಲದು ಅವಳನ್ನು ಪ್ರೀತಿಯಿಂದ, ಅಪ್ಪುವ, ಮುದ್ದಿಸುವ, ಲಲ್ಲೆಗರೆಯುವ, ಪ್ರೀತಿಯಿಂದ ಆದರಿಸಿ ಮಾತನಾಡುವ ಮನುಷ್ಯ ಜೀವಿಯ ಸಹಜ ಒಡನಾಟ ಬೇಕು ಎಂಬುದನ್ನು ಕಾದಂಬರಿ ನಿರೂಪಿಸುತ್ತದೆ. ಅರಸಿಕರಿಗೆ ರಸಿಕತನದ ರುಚಿ ಗೊತ್ತಾಗುವುದಿಲ್ಲ. ಹೆಂಡತಿ ಎಂದರೆ ಕೆಲಸದವಳು ಎಂದು ಭಾವಿಸಿದ ಈ ಸಮಾಜಕ್ಕೆ ಒಂದು ಯಕ್ಷಪ್ರಶ್ನೆಯಾಗಿ ರಾಜೇಶ್ವರಿ ನಿಲ್ಲುತ್ತಾಳೆ. ಅವಳು ಎತ್ತುವ ಪ್ರಶ್ನೆ ನಮ್ಮನ್ನು ಚಕಿತರನ್ನಾಗಿ ಮಾಡುವುದರಲ್ಲಿ ಸಂಶಯವಿಲ್ಲ. ರಾಜೇಶ್ವರಿ ಅಮೀರ್ ಪ್ರೇಮ ಎಂತಹದ್ದು ಎಂದು ಹೇಗೆ ಹೇಳೋದು ಉಣ್ಣೋಕೆ,

ಉಡೋಕೆ ಏನು ಇಲ್ಲದ ಬದುಕು. ಬೇಂದ್ರೆ ಅವರು ಹೇಳುವ ಹಾಗೆ 'ನಾನು ಬಡವ ಆತ ಬಡವಿ ಒಲವೇ ನಮ್ಮ ಬದುಕು' ಎನ್ನುವುದಕ್ಕೆ ಹತ್ತಿರವಾದದ್ದು ರಾಜೇಶ್ವರಿ–ಅಮೀರ್ ಪ್ರೇಮ.

ರಾಜೇಶ್ವರಿಯ ಕೆಲವು ನಿರ್ಧಾರಗಳು ಅವಸರವಾದವೋ ಅಥವಾ ಮೋಹಕ್ಕೆ ಒಳಗಾಗಿ ತನ್ನನ್ನೇ ತಾನು ಸಂಕಷ್ಟಕ್ಕೆ ದೂಡಿಕೊಂಡಳೋ ಏನೂ ಅರಿಯದು. ತನ್ನ ಗಂಡನ ತಾತ್ಸಾರದಿಂದ ಈ ನಿಲುವು ತಾಳಿದಳೋ ಗೊತ್ತಾಗದು. ಒಟ್ಟಿನಲ್ಲಿ ಅವಳಿಗೆ ತನ್ನನ್ನು ಸಂತೈಸುವ ಒಂದು ಜೀವದ ಅವಶ್ಯಕತೆ ಅಂತೂ ತುಂಬಾ ಇತ್ತು. ಹೇಗೆಂದರೆ ಸ್ವಲ್ಪ ದಿನ ಅಮೀರ್ ಮುನಿಸಿಕೊಂಡು ಹೋದಾಗ ಅವಳಿಗೆ ಹತ್ತಿರ ಆಗುವವನು ಮೀರಾ ಎಂಬ ಎಳೆ ಪ್ರಾಯದ ಹುಡುಗ. ಅವಳ ಪ್ರತಿಯೊಂದು ಕಷ್ಟಕ್ಕೂ ಕರಗಿ ನೀರಾದವನು. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದದ್ದು ರಾಜೇಶ್ವರಿಯ ಅಂತರಂಗದ ತುಮುಲ. ಅವಳಿಗೆ ಗಂಡಿನ ಅವಶ್ಯಕತೆಯೇ ಮುಖ್ಯ ಆಗಿತ್ತೇ. ಒಂದು ಕಡೆ ಅಮೀರನಿಗೋಸ್ಕರ ತನ್ನ ಜೀವವನ್ನೇ ಮುಡಿಪಾಗಿಟ್ಟಿದ್ದಾಳೆ. ಇನ್ನೊಂದು ಕಡೆ ಮೀರಾನನ್ನು ಕಳೆದುಕೊಳ್ಳಲು ಸಿದ್ಧವಿಲ್ಲ. ಈ ದ್ವಂದ್ವಾತ್ಮಕ ನೀತಿ ಅವಳನ್ನು ಚಿಂತೆಗೀಡು ಮಾಡಿದೆ. ಕೆಲವು ಸಲ ಮೀರಾ ನನ್ನ ಮೀರಾ ಎಂದು ಕನವರಿಸಿದ್ದಾಳೆ. ಇದನ್ನು ಕಂಡ ಅಮೀರ್ ಕೆಂಡಮಂಡಲನಾಗುತ್ತಾನೆ. ಮೀರಾನಿಗೂ ರಾಜೇಶ್ವರಿಯ ಮೇಲೆ ಪ್ರೇಮಾಂಕುರವಾಗಿ ಅವಳನ್ನು ಸೈತಾನನಾದ ಅಮಿರ್‌ನಿಂದ ಕಾಪಾಡಿ ದೂರ ಕರೆದುಕೊಂಡು ಹೋಗಲು ನಿರ್ಧರಿಸುತ್ತಾನೆ. ಅಂತಹದೇ ಸಂದರ್ಭದಲ್ಲಿ ಅಮೀರ್‌ನ ಕೊಲೆ ಆಗುತ್ತದೆ. ತಾನೇ ಮಾಡಿದ್ದು ಎಂದುಕೊಂಡ ಮೀರಾ ಪೊಲೀಸರಿಗೆ ಶರಣಾಗತನಾಗುತ್ತಾನೆ. ಕೊಲೆ ಮೀರಾ ಮಾಡಿದ್ದು ಅಲ್ಲ, ಅಮೀರ್ ತನ್ನನ್ನೇ ತಾನೇ ಹತ್ಯೆಗೈದುಕೊಂಡಿದ್ದು ಕೊನೆಗೆ ಗೊತ್ತಾಗುತ್ತದೆ. ಅಷ್ಟರೊಳಗೆ ಮೀರಾ ಪೊಲೀಸರಿಗೆ ಶರಣಾಗತನಾಗಿದ್ದನು. ಕೊನೆಗೆ ಅಮೀರ್ ಹೇಳುವ ಒಂದು ಮಾತು ಹೀಗಿದೆ. 'ಆ ಮೀರಾನೊಂದಿಗೆ ನಿನ್ನನ್ನ ಹಂಚಿಕೊಳ್ಳುತ್ತಿನಿ ಅಂದುಕೊಂಡಿಯಾ? ತುರುಕ ಮಗ' ಎಂದು ರಾಜೇಶ್ವರಿಗೆ ಹೇಳಿ ಪ್ರಾಣ ಬಿಡುತ್ತಾನೆ. ಇದನ್ನು ಓದುಗರು ನೋಡುವುದಾದರೂ ಹೇಗೆ, ಈಗಾಗಲೇ ರಾಜೇಶ್ವರಿಯು ಕೂಡಾ ಬೇರೆಯವನ ಹೆಂಡತಿ ಆಗಿದ್ದವಳು. ತಾನು ಕೂಡ ರಾಜೇಶ್ವರಿಯ ಸಂಧಾನದೊಂದಿಗೆ ಇನ್ನೊಂದು ಹೆಣ್ಣಿನೊಡನೆ ಸಂಬಂಧ ಬೆಳೆಸಿದವನು. ರಾಜೇಶ್ವರಿ ಮಾತ್ರ ಯಾರನ್ನು ಇಷ್ಟಪಡಬಾರದು ಎಂಬ ಪುರುಷ ಮನೋಧರ್ಮ ಈ ಕಾದಂಬರಿಯ ಕೊನೆಗೆ ತಿಳಿಯುತ್ತದೆ. ರಾಜೇಶ್ವರಿ ಕೊನೆಗೂ ಸ್ವತಂತ್ರಳಾದರೂ ಸಹ ಮತ್ತೆ ಅನ್ಯರ ಅಧೀನಳಾಗಿ ಉಳಿಯಬೇಕಾಗುತ್ತದೆ. ಈ

ಪ್ರೀತಿ ಉದಯಿಸಲು 'ಅಬ್ಧಿಯೊಮ್ಮೊರ್ಮೆ ಕಾಲವಶದಿಂ ಮರ್ಯಾದೆಯಂ ದಾಂಟದೇ' (ಕಾಲದ ಪ್ರೇರಣೆಯಿಂದಾಗಿ ಸಮುದ್ರ ಕೂಡ ತನ್ನ ಮೇರೆಯನ್ನು ಒಮ್ಮೊಮ್ಮೆ ಮೀರುತ್ತದೆ ಎನ್ನುವುದು ಈ ಸಾಲಿನ ಅರ್ಥವಾಗಿದೆ.) ಇದಕ್ಕೆ ಪೂರಕವಾಗಿ ರಾಜೇಶ್ವರಿ, ಅಮೀರ್, ಮೀರಾ ಸಮಾಜದೊಳಗಿನ ಕಳಂಕವನ್ನು ಪ್ರಶ್ನಿಸಿ ಯಶಸ್ವಿ ಆಗುತ್ತಾರೆಯೇ ಎಂಬ ಪ್ರಶ್ನೆ ನಮಗೆ ಕೊನೆಯವರೆಗೂ ಉಳಿಯುತ್ತದೆ. ಮೂಲ ಭಾಷೆಗೆ ಧಕ್ಕೆ ಬಾರದ ಹಾಗೆ ಕನ್ನಡಕ್ಕೆ ರಾಯಚೂರಿನ ಪ್ರಾದೇಶಿಕ ಭಾಷೆಯಲ್ಲಿ ಕಾದಂಬರಿ ಅನುವಾದ ಮಾಡಿದ ಕವಿ ರಮೇಶ ಅರೋಲಿ ಅವರು ಅಭಿನಂದನೀಯ. ಸದ್ಯದ ಕರ್ನಾಟಟಕದ ಕಲುಷಿತ ವಾತಾವರಣದಲ್ಲಿ ಎಲ್ಲರೂ ಓದಲೇಬೇಕಾದ ಕಾದಂಬರಿ. ಓದಿದ ನಂತರ ಮನಸ್ಸನ್ನು ಕಲಕದೇ ಬಿಡುವುದಿಲ್ಲ.

ಅಡಿ ಟಿಪ್ಪಣಿಗಳು :

1. ಪು. ಸಂಖ್ಯೆ, 7
2. ಅದೇ, 44
3. ಅದೇ, 28
4. ಅದೇ, 16
5. ಅದೇ, 24
6. ಅದೇ, 43
7. ಅದೇ, 96

ಪರಾಮರ್ಶನ ಗ್ರಂಥ :

1. ಮೈದಾನ ಕಾದಂಬರಿ, ತೆಲುಗು ಮೂಲ : ಗುಡಿಪಾಟಿ ವೆಂಕಟಾಚಲಂ, ಕನ್ನಡಕ್ಕೆ : ರಮೇಶ ಅರೋಲಿ, ಅಹರ್ನಿಶಿ ಪ್ರಕಾಶನ, ಶಿವಮೊಗ್ಗ, 2018

ಶ್ರೀರಂಗರ 'ಸ್ವಾರ್ಥತ್ಯಾಗ' ನಾಟಕ – ಒಂದು ವಿಮರ್ಶಾತ್ಮಕ ಅಧ್ಯಯನ

1
ಅರ್ಪಿತ ಸಿ.ಎಂ
ಸಂಶೋಧನಾ ವಿದ್ಯಾರ್ಥಿ,
ಡಾ.ಡಿ.ವಿ.ಗುಂಡಪ್ಪ ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ,
ತುಮಕೂರು ವಿಶ್ವವಿದ್ಯಾನಿಲಯ,
ತುಮಕೂರು,
arpithacm4040@gmail.com

1
ಡಾ. ವೆಂಕಟರೆಡ್ಡಿ ರಾಮರೆಡ್ಡಿ
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು
vrreddy.kantumkur@gmail.com

ಕಲೆಯಾಗಿ ಗುರುತಿಸಿಕೊಂಡ ನಾಟಕ ಪ್ರಕಾರ ತನ್ನ ಅಸ್ತಿತ್ವದ ನೆಲೆಯನ್ನು ವೃದ್ಧಿಸುತ್ತಾ ಸೃಜನಶೀಲ ಲಕ್ಷಣವನ್ನು ಮೈಗೂಡಿಸಿಕೊಂಡು ಇಂದು ಪ್ರಮುಖವಾದ ಸಾಹಿತ್ಯ ಪ್ರಕಾರವಾಗಿ ಬೆಳೆದು ನಿಂತಿದೆ.

ಕರ್ನಾಟಕದ ಸಂದರ್ಭದಲ್ಲಿ ಕಳೆದ ಐವತ್ತು ವರ್ಷಗಳಲ್ಲಿ ನಾಟಕದ ವರ್ಚಸ್ಸು ಗಮನಾರ್ಹವಾಗಿದೆಯೆಂದೇ ಹೇಳಬೇಕು. ಸಂಖ್ಯೆಯಲ್ಲಿ ದೊಡ್ಡದಲ್ಲದಿದ್ದರೂ ಅವುಗಳ ವಸ್ತು ವೈವಿಧ್ಯತೆ, ಸೃಜನಶೀಲತೆ ಮತ್ತು ಪ್ರಯೋಗಶೀಲತೆ ತಂತ್ರಗಳಲ್ಲಿ ಇತರ ಭಾಷೆಗಳಿಗೆ ಹೋಲಿಸಿದರೆ ಕನ್ನಡ ನಾಟಕಗಳು ಮಹತ್ವವೆಂದೇ ಹೇಳಬೇಕು. ಬರವಣಿಗೆಯಲ್ಲಿ ಮೂಡುವ ನಾಟಕಕ್ಕೆ ತಕ್ಕಂತೆ ಅದನ್ನು ರಂಗದ ಮೇಲೆ ಪ್ರದರ್ಶಿಸುವ ತಂತ್ರದಲ್ಲೂ ಹಲವು ಹೊಸ ರೀತಿಯಾದಂತಹ ಸಾಧ್ಯತೆಗಳು ಗೋಚರವಾಗುತ್ತಿದ್ದು, ಇದು ನಾಟಕ

ಕ್ಷೇತ್ರವನ್ನು ಇನ್ನೂ ಶ್ರೀಮಂತಗೊಳಿಸಿದೆ. ಇಂತಹ ಹೊಸ ಹೊಸ ವಸ್ತು, ತಂತ್ರ, ಸೃಜನಶೀಲತೆಗಳನ್ನು ಬರವಣಿಗೆ ಮತ್ತು ರಂಗದ ಮೇಲೆ ತಂದ ಪ್ರಮುಖ ಕನ್ನಡ ನಾಟಕಕಾರರಲ್ಲಿ ಶ್ರೀರಂಗರ ಹೆಸರು ಅಗ್ರಸಾಲಿನಲ್ಲಿದೆ.

ಕನ್ನಡ ನಾಟಕ ಸಾಹಿತ್ಯ ಅದರಲ್ಲೂ ಆಧುನಿಕ ಕನ್ನಡ ನಾಟಕ ಸಾಹಿತ್ಯದ ಮೇಲೆ ಶ್ರೀರಂಗರು ಮಾಡಿರುವ ಪ್ರಭಾವ ಅಸಾಧಾರಣವಾದದ್ದು. ಇವರು 1904 ರಲ್ಲಿ ವಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಆಗರಖೇಡದಲ್ಲಿ ಜನಿಸಿದರು. ಗ್ರಂಥಾಲಯ ಅಧಿಕಾರಿಯಾಗಿ ವೃತ್ತಿ ಸೇವೆ ಆರಂಭಿಸಿದ ಇವರು ತದನಂತರ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಸಂಸ್ಕೃತ ಅಧ್ಯಾಪಕರಾಗಿ ಕೆಲಸ ಮಾಡುತ್ತಾ 1930 ರಲ್ಲಿ ರಂಗತಂಡವನ್ನು ಆರಂಭಿಸಿದರು. 1933 ರಲ್ಲಿ ಗಾಂಧಿಯವರೊಡನೆ ಭೇಟಿ – ಮಾತುಕತೆ ನಡೆಸಿದ ಪರಿಣಾಮ ಮತ್ತು ಗಾಂಧೀಜಿಯವರ ಹೋರಾಟದ ಸ್ವರೂಪ ಶ್ರೀರಂಗರ ಸಾಮಾಜಿಕ ಮತ್ತು ರಾಜಕೀಯ ಚಿಂತನೆಗಳ ಮೇಲೆ ಪ್ರಭಾವ ಬೀರಿದವು. ನಂತರದ ದಿನಗಳಲ್ಲಿ ವಾರ್ತಾ ಮತ್ತು ಪ್ರಸಾರ ಇಲಾಖೆಯಲ್ಲಿ, ಬೆಂಗಳೂರಿನ ಆಕಾಶವಾಣಿಯ ನಾಟಕ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದಾರೆ. ನೌಕರಿಗೆ ಸಂಬಂಧಿಸಿದ ಇತರ ಅನೇಕ ಸಾರ್ವಜನಿಕ ಸಂಸ್ಥೆಗಳಲ್ಲಿ ಇವರು ಕೆಲಸ ಮಾಡಿದ್ದಾರೆ. ಈ ವೇಳೆ 1955 ರಲ್ಲಿ ರಾಯಚೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದರು. 1949 ರಲ್ಲಿ ಶ್ರೀರಂಗರು ಕರ್ನಾಟಕ ಕಾಲೇಜಿನ ತಮ್ಮ ನೌಕರಿಗೆ ರಾಜಿನಾಮೆ ನೀಡಿದ ನಂತರ ಉದ್ದೇಶಪೂರ್ಣವಾಗಿ ತಮ್ಮ ಹೆಸರನ್ನು ಆದ್ಯ ರಂಗಚಾರ್ಯ ಎಂದು ಬದಲಿಸಿಕೊಂಡರು.

ಆದ್ಯ ಶ್ರೀರಂಗರೆಂದೇ ಪ್ರಖ್ಯಾತರಾಗಿರುವ ಇವರು ಕೆಲವು ಕಾದಂಬರಿಗಳನ್ನು ಬರೆದಿದ್ದರೂ ನಾಟಕ ಸಾಹಿತ್ಯದಲ್ಲಿ ಮೇರು ಪರ್ವತ. ಸಾಮಾಜಿಕ, ಪೌರಾಣಿಕ, ಐತಿಹಾಸಿಕ ಮುಂತಾದ ಎಲ್ಲಾ ರೀತಿಯಾದಂತಹ ವಸ್ತುವನ್ನಿಟ್ಟುಕೊಂಡು, ಆ ವಸ್ತುವನ್ನು ಸಮಕಾಲೀನ ಸಂದರ್ಭಕ್ಕೆ ಅನ್ವಯವಾಗುವಂತೆ ರಚಿಸುವ ಕಲೆ ಮನೋಜ್ಞವಾಗಿದೆ. ಸಾಮಾಜಿಕ ಸಮಸ್ಯೆ, ರಾಜಕೀಯ ಅಸ್ಥಿರತೆ ಮುಂತಾದವುಗಳನ್ನೆಲ್ಲಾ ತಮ್ಮ ನಾಟಕದ ವಸ್ತುವಿನ ಮೂಲಕವೇ ಹೇಳಿ ಸಮಾಜವನ್ನು ತಿದ್ದುವ, ಎಚ್ಚರಿಸುವ ಕೆಲಸ ಮಾಡಿದ್ದಾರೆ. ಶ್ರೀರಂಗರು ಒಬ್ಬ ಪರಿಪೂರ್ಣ ರಂಗವ್ಯಕ್ತಿಯಾಗಿದ್ದಂತವರು. ಇವರು ನೂರಕ್ಕೂ ಹೆಚ್ಚು ನಾಟಕಗಳನ್ನು ಬರೆದಿದ್ದು, ಅವುಗಳಲ್ಲಿ ನಲ್ವತ್ತಕ್ಕೂ ಹೆಚ್ಚು ನಾಟಕಗಳು ಪೂರ್ಣಾವಧಿ ನಾಟಕಗಳಾಗಿದ್ದು, ಉಳಿದವು ಕಿರುನಾಟಕಗಳಾಗಿವೆ. ಅಂದಿನ ಕಾಲದಲ್ಲಿಯೇ ತಾವು ಬರೆದ ನಾಟಕಗಳನ್ನು ತಾವೇ ನಿರ್ದೇಶಿಸಿ, ತಾವೇ ಅಭಿನಯ

ಮಾಡಿದ ಮಹಾನ್ ಮೇರು ಶಿಖರ ಶ್ರೀರಂಗರು.

ಶ್ರೀರಂಗರ ನಾಟಕಗಳಲ್ಲಿ ಪೌರಾಣಿಕ, ಸಾಂಸಾರಿಕ, ಪ್ರಣಯ ವಿಚಾರಗಳಿದ್ದರೂ ರಾಜಕೀಯ ವಿಚಾರಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಟ್ಟಿದ್ದಾರೆ. ಪಾಶ್ಚಾತ್ಯರ ದುರ್ಮಾರ್ಗದ ಆಡಳಿತದಲ್ಲಿ ತಮ್ಮ ಮತ್ತು ತಮ್ಮ ತಾಯ್ನಾಡಿನ ಬಿಡುಗಡೆಗಾಗಿ ಹಲವಾರು ಕಡೆ ಹೋರಾಟಗಳು ನಡೆಯುತ್ತಿದ್ದು, ಮಹಾತ್ಮ ಗಾಂಧೀಜಿಯವರ ಅಹಿಂಸೆಯ ತತ್ತ್ವವು ಸರ್ವವ್ಯಾಪಿಯಾಗುತ್ತಿದ್ದ ಕಾಲವದು. ಇಂತಹ ಸಂದರ್ಭದಲ್ಲಿ ರಾಷ್ಟ್ರದಲ್ಲಿ ನಡೆಯುತ್ತಿದ್ದ ಘಟನೆಗಳನ್ನು ಶ್ರೀರಂಗರು ತಮ್ಮ ಅನುಭವಕ್ಕೆ ತಂದುಕೊಂಡು ನಾಟಕ ರೂಪದಲ್ಲಿ ಚಿತ್ರಿಸಿದರು.

ಇವರ ಮೊಟ್ಟಮೊದಲ ನಾಟಕ **'ಸ್ವಾರ್ಥತ್ಯಾಗ'** ಇದು ರಚನೆಯಾದದ್ದು 1920ರಲ್ಲಿ. ಈ ನಾಟಕವನ್ನು ಬರೆದಾಗ ಶ್ರೀರಂಗರ ವಯಸ್ಸು ಕೇವಲ ಹದಿನಾರು. ಆ ವಯಸ್ಸಿನಲ್ಲಿಯೇ ಪ್ರಜಾಪ್ರಭುತ್ವದ ಕನಸು ಕಂಡಿದ್ದ ಇವರ ಚಿಂತನಾ ಸಾಮರ್ಥ್ಯ ಅಸಾಮಾನ್ಯ. ಶ್ರೀರಂಗರು ತಮ್ಮ ಈ ನಾಟಕದಲ್ಲಿ ಗಾಂಧೀಜಿಯನ್ನು ಪರೋಕ್ಷವಾಗಿ ನಾಯಕನನ್ನಾಗಿ ತೆಗೆದುಕೊಂಡಿದ್ದಾರೆ. ಕಾರಣ ಮಹಾತ್ಮ ಗಾಂಧೀಜಿಯವರ ಪ್ರಭಾವ ಶ್ರೀರಂಗರ ಮಟ್ಟಿಗೆ ನಿರ್ಣಾಯಕ ಸ್ವರೂಪದ್ದಾಗಿತ್ತು. ಅದರ ಬಲ ಎಂದೂ ಕಡಿಮೆಯಾಗಲೇ ಇಲ್ಲ. ಗಾಂಧೀವಾದಕ್ಕಿಂತ ಗಾಂಧಿಯವರ ವ್ಯಕ್ತಿತ್ವವೇ ಅವರನ್ನು ಹೆಚ್ಚಾಗಿ ಪ್ರಭಾವಿಸಿತು. ನಾಟಕದ ನಾಯಕ ದುರ್ಜಯ ಹೇಳುವ ಪ್ರತೀ ಮಾತುಗಳಲ್ಲೂ ಗಾಂಧೀಜಿಯವರ ತತ್ತ್ವಗಳನ್ನು ನಾವು ನೋಡಬಹುದು. ತಮ್ಮ ದೇಶಬಾಂಧವರು ಉಪವಾಸದಿಂದ ಒದ್ದಾಡುತ್ತಿರುವುದನ್ನು ನೋಡಿ, ನೊಂದು ಆಡುವ ದುರ್ಜಯನ ಮಾತಿನಲ್ಲೇ ಗಾಂಧೀಜಿಯವರ ಅಹಿಂಸೆಯ ತತ್ತ್ವ ಪ್ರಕಟಗೊಳ್ಳುತ್ತದೆ. ಏಕೆಂದರೆ ರಾಷ್ಟ್ರೀಯ ಹೋರಾಟದ ಎಲ್ಲಾ ಹಂತದಲ್ಲೂ ಗಾಂಧೀಜಿಯವರು ಬ್ರಿಟಿಷರ ವಿರುದ್ಧ ಯಾವುದೇ ಕ್ರಾಂತಿಕಾರಕ ಹೋರಾಟಗಳನ್ನು ಮಾಡದೆ, ಪ್ರತಿಯೊಂದು ಮಜಲುಗಳಲ್ಲೂ ತಮ್ಮ ಉಪವಾಸದ ಮೂಲಕ ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ವಿರೋಧಿಸಿದರು. ಹಾಗಾಗಿ ಇಲ್ಲಿನ ದುರ್ಜಯನ ವ್ಯಕ್ತಿತ್ವ, ವಿಜಯಸೇನನ ಮಾತುಗಳಿಗೆಲ್ಲಾ ಸೌಮ್ಯವಾಗಿಯೇ ಉತ್ತರಿಸುವ ಆತನ ಮಾತುಗಳಲ್ಲಿ ನಾವು ಪರೋಕ್ಷವಾಗಿ ಗಾಂಧೀಜಿಯವರ ವ್ಯಕ್ತಿತ್ವ ಮತ್ತು ತತ್ತ್ವಗಳನ್ನೇ ನೋಡಬಹುದು. ಶ್ರೀರಂಗರು ಈ ನಾಟಕದಲ್ಲಿ ಮೊದಲಿಗೆ ಐತಿಹಾಸಿಕ ಚರಿತ್ರೆಯನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡು, ಕಾಲಾನುಕ್ರಮದಲ್ಲಿ ರಾಜಕೀಯ ವಿಷಯವನ್ನು ಪ್ರಸ್ತಾಪ ಮಾಡುತ್ತಾ ಹೋಗುತ್ತಾರೆ.

‘ ಸ್ವಾರ್ಥತ್ಯಾಗ’ ನಾಟಕದ ಸಂದರ್ಭ ಮಹಾತ್ಮಗಾಂಧೀಜಿಯವರ ಅಸಹಕಾರ ಚಳುವಳಿಯ ಸಂದರ್ಭವಾಗಿರುವುದರಿಂದ ಬ್ರಿಟಿಷ್ ಸಾಮ್ರಾಜ್ಯವಾದದ ವಿರೋಧ ಮತ್ತು ಸ್ವಾತಂತ್ರ್ಯ ಚಳುವಳಿಯ ಸಮರ್ಥನೆ ಈ ನಾಟಕದ ಪ್ರಮುಖವಾದ ಉದ್ದೇಶವಾಗಿದೆ. ಈ ನಾಟಕದ ನಾಯಕ ದುರ್ಜಯ ಏಕಸ್ವಾಮ್ಯಾಧಿಪತ್ಯದ ವಿರೋಧಿ ಹಾಗೂ ಪ್ರಜಾಪ್ರಭುತ್ವದ ಪುರಸ್ಕರ್ತನಾಗಿದ್ದಾನೆ. ಇಲ್ಲಿ ದುರ್ಮತಿಯು ಬಿಟಿಷರ ಪ್ರತಿರೂಪವಾದರೆ, ವೀರಶಾಲಿ, ಪ್ರಾಮಾಣಿಕ ಮತ್ತು ನಿಸ್ವಾರ್ಥ ಸೇವೆಯ ದುರ್ಜಯನು ನಮಗೆ ಸಾಹಸ ಮತ್ತು ವೀರಪುತ್ರನಾಗಿ ಭಾರತೀಯರ ಪ್ರತೀಕನಾಗಿದ್ದಾನೆ. ಇಡೀ ನಾಟಕದಲ್ಲಿ ನಮ್ಮನ್ನು ಮಂತ್ರಿ ಶಾಂತಸೇನ ಮತ್ತು ಸರದಾರ ದುರ್ಜಯ ಎಂಬ ಎರಡು ಪಾತ್ರಗಳು ಮನಸೂರೆಗೊಳಿಸುತ್ತವೆ. ಏಕೆಂದರೆ ಸ್ವಾರ್ಥದ ರಾಜನಿಗೋಸ್ಕರ ತಮ್ಮ ನಿಸ್ವಾರ್ಥ ಸೇವೆಯನ್ನು ಸಲ್ಲಿಸಿದ ಇಬ್ಬರೂ ಕೊನೆಯಲ್ಲಿ ರಾಜ ಮುಖ್ಯನೋ? ಅಥವಾ ರಾಜ್ಯದ ಜನತೆ ಮುಖ್ಯವೋ? ಎಂಬ ಸಂದಿಗ್ಧ ಸ್ಥಿತಿ ತಲೆದೋರಿದ ಸಂದರ್ಭದಲ್ಲಿ ಇಬ್ಬರ ಆಯ್ಕೆಯೂ ರಾಜ್ಯದ ಜನತೆಯೇ ಆಗಿರುತ್ತಾರೆ. ಈ ರೀತಿಯಾದ ಮನೋಭಾವವನ್ನು ನಾವು ನಮ್ಮ ರಾಷ್ಟ್ರ ನಾಯಕರುಗಳಲ್ಲಿ, ಸ್ವಾತಂತ್ರ್ಯಕ್ಕಾಗಿ ತಮ್ಮ ಪ್ರಾಣವನ್ನೇ ಪಣವಾಗಿಟ್ಟು ಹೋರಾಟ ಮಾಡಿದ ವೀರಪುತ್ರರಲ್ಲಿ ಕಾಣಬಹುದು.

“ಅರಸನ ಈ ದುರ್ವರ್ತನವು ನಿಮಗೆ ಸರಿದೋರುವುದೇನು? ಅನ್ಯಾಯ ಪರಂಪರೆಯು ಆತನ ಅಧೋಗತಿಯ ಸೋಪಾನ ಪರಂಪರೆಯೇ ಆಗಿದೆ. ಧನವಂತರ ಸಂತೋಷದ ಸಲುವಾಗಿ, ಧನವಂತರ ಧನವನ್ನು ಹೆಚ್ಚಿಸಲಿಕ್ಕೆ ಎಷ್ಟೋ ಬಡಜನರು ನಿಧನವನ್ನು ತಾಳಿದರು. ಶೂರಸಿಂಗ ಈ ಪ್ರಮಾಣದಿಂದ ಧನಮದವು ಉಕ್ಕೇರುವುದೇನು ಸುಚಿಹ್ನವಲ್ಲ?” [೧] ಎಂಬ ಶಾಂತಸೇನನ ಮಾತುಗಳು ಬ್ರಿಟಿಷರು ತಮ್ಮ ಲಾಭಕೋರತನಕ್ಕೆ ಭಾರತೀಯರನ್ನು ಅದರಲ್ಲೂ ಬಡಜನರನ್ನು ತಮಗಿಷ್ಟ ಬಂದಂತೆ ಬಳಸಿಕೊಂಡ ರೀತಿಯನ್ನು ಸೂಚಿಸುತ್ತದೆ. ಪ್ರತ್ಯಕ್ಷವಾಗಿ ಈ ಮಾತುಗಳು ಪದ್ಮಾವತೀಪುರದ ಸಾರ್ವಭೌಮನಾದ ವಿಜಯಸೇನ ರಾಜನ ವಿರುದ್ಧ, ಅವನ ಸಾರ್ವಭೌಮತ್ವದ ವಿರುದ್ಧ, ಅವನ ಸ್ವಾರ್ಥತೆಯ ವಿರುದ್ಧ ಹೇಳುವ ಮಾತುಗಳಂತೆ ಕಂಡುಬಂದರೂ, ಪರೋಕ್ಷವಾಗಿ ಇವು ಬ್ರಿಟಿಷ್ ಸಾಮ್ರಾಜ್ಯವಾದದ ವಿರುದ್ಧವಾಗಿ ಆಡಿದ ಮಾತುಗಳಾಗಿವೆ. ಏಕೆಂದರೆ ಬ್ರಿಟಿಷರು ತಮ್ಮ ರಾಷ್ಟ್ರದ ಸಂಪತ್ತನ್ನು ಹೆಚ್ಚಿಸಿಕೊಂಡು, ತಮ್ಮ ರಾಷ್ಟ್ರವನ್ನು ಸಮೃದ್ಧಿಗೊಳಿಸಲು ಭಾರತ ದೇಶವನ್ನು ಲೂಟಿ ಮಾಡಿದರು. ಸುಮಾರು ಮೂರುವರೆ ಶತಕಗಳ ಕಾಲ ಭಾರತವನ್ನಾಳಿದ ಇವರು ಭಾರತೀಯರನ್ನು ತಮಗಿಷ್ಟ ಬಂದಂತೆ, ತಮ್ಮ ಸ್ವಾರ್ಥದ ಆಸೆಗಳ ಈಡೇರಿಕೆಗೆ ಬಳಸಿಕೊಂಡರು. ಗುಲಾಮರಂತೆ

ಭಾರತೀಯರನ್ನು ನಡೆಸಿಕೊಂಡ ಬ್ರಿಟಿಷರ ನಡೆಯನ್ನು, ಅಮಾಯಕರ ಜೀವವನ್ನು ಬಲಿ ತೆಗೆದುಕೊಂಡ ಅವರ ಕ್ರೂರತೆಯನ್ನು ವಿರೋಧಿಸಿದ ಪರಿ ಈ ಮಾತುಗಳಲ್ಲಿ ಅಡಕವಾಗಿದೆ.

ತುರಂಗದಲ್ಲಿರುವ ದುರ್ಜನನ್ನು ಕಂಡು ವಿಜಯಸೇನನು ಹೇಳುವ "ದುರ್ಜಯಾ, ಇನ್ನಾದರೂ ನಿನ್ನ ಛಲವನ್ನು ಬಿಡು. ನಿಮ್ಮಂಥ ತರುಣರು ತುರಂಗದಲ್ಲಿ ನಿರರ್ಥಕವಾಗಿ ಕೊಳೆಯುವುದೆಂದರೆ ದೇಶದ ದುರ್ದೈವವೇ ಸರಿ. ದುರ್ಜಯಾ, ಅಪರಾಧವನ್ನು ಒಪ್ಪಿದರೆ ನಿನ್ನನ್ನು ಮುಕ್ತಬಂಧ ಮಾಡುವೆನು. ಇಷ್ಟೇ ಅಲ್ಲ, ನನ್ನ ಸಾಮ್ರಾಜ್ಯದಲ್ಲಿ ನಿನಗೆ ಉಚ್ಚ ಅಧಿಕಾರವನ್ನು ಕೊಡುವೆ"[2] ಎಂಬ ಮಾತುಗಳಲ್ಲಿ ಬ್ರಿಟಿಷರ 'ಒಡೆದು ಆಳುವ ನೀತಿ' ವ್ಯಕ್ತವಾಗುತ್ತದೆ. ಸಂಗೊಳ್ಳಿ ರಾಯಣ್ಣನನ್ನು ಹಣದ ಆಮೀಷ ಒಡ್ಡಿ ಆತನ ಸಂಗಡಿಗರಿಂದಲೇ ಅವನನ್ನು ಮೋಸದಿಂದ ಸೆರೆಹಿಡಿದು ಗಲ್ಲಿಗೇರಿಸಿದ್ದು, ಪ್ಲಾಸಿ ಮತ್ತು ಬಕ್ಸಾರ್ ಕದನಗಳಲ್ಲಿ ಮೀರ್‌ಖಾಸಿಂ ಮತ್ತು ಮೀರ್‌ಜಾಫರ್‌ರವರಿಗೆ ಅಧಿಕಾರದ ಆಸೆ ಹುಟ್ಟಿಸಿ ತಮಗೆ ಬೇಕಾದಂತೆ ನಡೆಸಿಕೊಂಡು, ತಮ್ಮ ಅಧಿಕಾರವನ್ನು ಸ್ಥಾಪಿಸಿದ ಸಂದರ್ಭವನ್ನು ಇದು ನೆನಪು ಮಾಡುತ್ತದೆ. ವಿಜಯ ಸೇನನ ಈ ಮಾತುಗಳಿಗೆ ಪ್ರತಿಕ್ರಿಯಿಸಿದ ದುರ್ಜಯನು "ರಾಜಾ ಇದು ತುರಂಗವಾಸವೇನು? ಇದುವರೆಗೆ ನಾನು ಇದನ್ನು ಆನಂದವಾಸವೆಂದು ತಿಳಿದಿದ್ದೆನು. ಶಾರೀರಿಕ ಮತ್ತು ಮಾನಸಿಕ ತಾಪಗಳಿಂದ ಬೆಂದು ವಿಶ್ರಾಂತಿಯ ಸಲುವಾಗಿ ಧನವಂತರು ದೂರ ದೂರ ಪ್ರದೇಶಗಳಿಗೆ ಹೋಗಿ ಧನವನ್ನು ಹಾಳು ಮಾಡುವರು. ಆದರೆ ರಾಜಾ, ನಮ್ಮಂಥ ಬಡಜನತೆಗೆ ಪರಮಾತ್ಮನು ಅನಾಯಾಸವಾಗಿ ಈ ವಿಶ್ರಾಂತಿ ಸ್ಥಾನಕ್ಕೆ ಕಳಿಸಿರುವನು. ರಾಜಾ, ನನ್ನನ್ನು ಒಲಿಸುವ ಗೋಜಿಗೆ ಹೋಗಬೇಡ, ಸಿಂಹನನ್ನು ಕೆದರಿ ಕೆಣಕಬೇಡ"[3] ಎಂಬ ಮಾತುಗಳು ಭಾರತೀಯರ ಅದರಲ್ಲೂ ರಾಷ್ಟ್ರೀಯ ಹೋರಾಟಗಾರರ ಬಲವಾದ ಮನಸ್ಥಿತಿಯನ್ನು ತಿಳಿಸುತ್ತದೆ. ಸ್ವಾತಂತ್ರ್ಯ ಹೋರಾಟಗಾರರು ತಮ್ಮ ತನು – ಮನ ಎರಡನ್ನೂ ರಾಷ್ಟ್ರಕ್ಕೋಸ್ಕರ, ರಾಷ್ಟ್ರದ ಬಿಡುಗಡೆಗೋಸ್ಕರ ಅರ್ಪಿಸಿದವರು. ತಮಗೇನಾದರೂ ಆಗಲಿ, ನಮ್ಮ ರಾಷ್ಟ್ರ ಬ್ರಿಟಿಷರ ಕಪಿಮುಷ್ಠಿಯಿಂದ, ಅವರ ಬಂಧನದಿಂದ ಬಿಡುಗಡೆಯಾಗಬೇಕೆಂದು ತಮ್ಮ ಜೀವವನ್ನೂ ಲೆಕ್ಕಿಸದೆ ಹೋರಾಡಿದವರು. ಇಂತಹ ಹೋರಾಟಗಾರರಿಗೆ ಬ್ರಿಟಿಷರು ಹಲವಾರು ಕಿರುಕುಳವನ್ನು ನೀಡಿ, ಸೆರೆವಾಸ, ಗಲ್ಲುಶಿಕ್ಷೆ ಮುಂತಾದ ಏನೇ ಶಿಕ್ಷೆಗಳನ್ನು ನೀಡಿದರೂ ಅವುಗಳನ್ನೆಲ್ಲಾ ತುಂಬಾ ಧೈರ್ಯದಿಂದ ಸ್ವೀಕರಿಸಿ ಅನುಭವಿಸಿದರು. ಅಂತಹ ರಾಷ್ಟ್ರೀಯ ಹೋರಾಟಗಾರರ ಮನಸ್ಥಿತಿ ದುರ್ಜಯನ ಈ ಮಾತುಗಳಲ್ಲಿ ಬಿಂಬಿತಗೊಂಡಿದೆ.

ಇಲ್ಲಿ ಗಾಂಧೀಜಿಯನ್ನೇ ನಾಯಕನನ್ನಾಗಿ ತೆಗೆದುಕೊಂಡಿದ್ದರೂ ತಿಲಕರ ಚಿಂತನೆಗಳು ಮತ್ತು ತತ್ತ್ವಾದರ್ಶಗಳು ಇಲ್ಲಿ ಬಂದಿವೆ ಎಂದು ಹೇಳಬಹುದು. "ಸ್ವರಾಜ್ಯ ನನ್ನ ಜನ್ಮ ಸಿದ್ಧ ಹಕ್ಕು, ನಾನು ಅದನ್ನು ಪಡೆದೇ ಪಡೆಯುತ್ತೇನೆ" ಎಂಬ ಮಾತಿನಲ್ಲೇ ಲೋಕಮಾನ್ಯ ಬಾಲಗಂಗಾಧರ ತಿಲಕರ ಛಲ ಮತ್ತು ಸಾಹಸದ ಹಿರಿಮೆ ವ್ಯಕ್ತವಾಗುತ್ತದೆ. ಗಾಂಧೀಜಿ ಮತ್ತು ತಿಲಕರು ತಮ್ಮ ತತ್ತ್ವಾದರ್ಶಗಳಲ್ಲಿ ಪರಸ್ಪರ ವಿರುದ್ಧವಾದವರು. ಆದರೆ ಇಬ್ಬರ ಗುರಿ ಮಾತ್ರ ಒಂದೇ. ಅದು ಸ್ವಾತಂತ್ರ್ಯ. ಹಾಗಾಗಿ ಇಲ್ಲಿ ಕಥಾನಾಯಕ ದುರ್ಜಯನನ್ನು ಗಾಂಧೀಜಿ ಎಂಬುದಾಗಿ ಕಲ್ಪಿಸಿಕೊಂಡರೆ, ಮತ್ತೊಂದು ಪ್ರಮುಖ ಪಾತ್ರವಾದ ಶಾಂತ ಸೇನನ್ನು ತಿಲಕರು ಎಂಬುದಾಗಿ ಕಲ್ಪಿಸಿಕೊಳ್ಳಬಹುದು. ಏಕೆಂದರೆ ತಿಲಕರ ಆವೇಶ ಆಕ್ರೋಶಗಳು ಶಾಂತಸೇನನ ಮಾತುಗಳಲ್ಲಿ ಮತ್ತು ಅವನ ವ್ಯಕ್ತಿತ್ವದಲ್ಲಿ ವ್ಯಕ್ತವಾಗುತ್ತದೆ. ದುರ್ಜಯನ ಬಿಡುಗಡೆಯನ್ನು ಕುರಿತು "ಲೋಕಮತ ಬಲದಿಂದ ನೀನು ಬಿಡುಗಡೆಯನ್ನು ಹೊಂದಿದೆ. ಇಂದಿಗೆ ನಮ್ಮ ಭರತಭೂಮಿಯ ತಿಲಕವು ಪುನರುಜ್ಜೀವಿಸಿದಂತಾಯಿತು"[4] ಎಂಬ ಶಾಂತಸೇನನ ಮಾತುಗಳಲ್ಲಿ ಎರಡು ರೀತಿಯಾದ ಅರ್ಥಗಳನ್ನು ಕಾಣಬಹುದು. ಒಂದು ಯಾವುದೇ ತಪ್ಪಿಲ್ಲದೆ ಸೆರೆಮನೆವಾಸ ಕಂಡ ಭಾರತೀಯರ ಬಿಡುಗಡೆಯಿಂದ ಭರತಭೂಮಿಗೆ ಹಿಂತಿರುಗಿ ಮುತ್ತೈದೆತನ ಬಂದಿದೆ ಹೀಗಾಗಿ ಭರತಭೂಮಿ ಪುನಃ ಜೀವಿಸಿದೆ ಎಂಬುದಾದರೆ, ಮತ್ತೊಂದು ಅರ್ಥದಲ್ಲಿ ಭರತ ಭೂಮಿಗೆ ತಿಲಕರೇ ತಿಲಕ ಪ್ರಾಯ ಎಂಬ ಒಳಾರ್ಥವನ್ನು ಕಾಣಬಹುದು. ಶ್ರೀರಂಗರ ಮೇಲೆ ಗಾಂಧೀಜಿಯವರ ಪ್ರಭಾವ ದಟ್ಟವಾಗಿದ್ದರೂ ತಿಲಕರ ಪ್ರಭಾವವೂ ಕೂಡ ಆಗಿತ್ತೆಂದು ಹೇಳಬಹುದು. ಏಕೆಂದರೆ ಇವರು ನಾಟಕ ಬರೆದಂತಹ ಸಂದರ್ಭದಲ್ಲಿ ತಿಲಕರು ರಾಷ್ಟ್ರದ್ರೋಹವೆಂಬ ಆಪಾದನೆಯನ್ನು ಹೊತ್ತು ಮೂರು ಬಾರಿ ವಿಚಾರಣೆ ಮುಗಿದಿತ್ತು. ಇಲ್ಲಿ ಯಾವುದೇ ತಪ್ಪು ಮಾಡದೆ ರಾಷ್ಟ್ರಕ್ಕಾಗಿ ತನ್ನನ್ನೇ ತಾನು ಸಮರ್ಪಿಸಿಕೊಂಡ ದೇಶ ಕಂಡ ಮಹಾನ್ ಚೇತನವಾದ ಬಾಲಗಂಗಾಧರ ತಿಲಕರು ರಾಷ್ಟ್ರದ್ರೋಹವೆಂಬ ಆಪಾದನೆಯನ್ನು ಹೊತ್ತಿದ್ದು ರಾಷ್ಟ್ರದ ದುರ್ದೈವವೇ ಸರಿ. ಆದರೂ "ಮೂರನೆಯ ಹಾಗೂ ಅಂತಿಮವಾದ ವಿಚಾರಣೆ 1916ರಲ್ಲಿ ಜರುಗಿದಾಗ ತಿಲಕರ ಪರವಾಗಿ ನಿಂತ ಮಹಮದ್ ಆಲಿ ಜಿನ್ನಾ ಅವರು ಸಮರ್ಥವಾಗಿ ಪ್ರತಿವಾದ ಮಂಡಿಸಿ ಯಶಸ್ವಿಯಾದರು. ಆದರೂ ಕೂಡ 'ಸನ್ನಡತೆ ತೋರುತ್ತೇನೆ' ಹಾಗೂ 'ಸರ್ಕಾರಿ ವಿರೋಧಿ ಸಂಚು ಬಯಲು ಮಾಡುತ್ತೇನೆ' ಎಂದು ಒಪ್ಪಿ, ಇಪ್ಪತ್ತು ಸಾವಿರ ರೂಪಾಯಿಗಳ ಮುಚ್ಚಳಿಕೆ ಪತ್ರ ಬರೆದು ಕೊಡಬೇಕು ಎಂಬ ಶರತ್ತುಗಳ ಮೇಲೆ ನ್ಯಾಯಾಧೀಶ ಬ್ಯಾಚುಲರ್ ಮತ್ತು

ಷಾ ಅವರಿದ್ದ ದ್ವಿಸದಸ್ಯ ಪೀಠ ತಿಲಕರ ಮೇಲಿನ ಮೊಕದ್ದಮೆಯನ್ನು ವಜಾಗೊಳಿಸಿತು".[5] ಆದರೂ ಕೂಡ ಎಂದಿಗೂ ತಿಲಕರು ಧೈರ್ಯಗುಂದಲಿಲ್ಲ. ದುರ್ಜಯನಿಗೆ ದೇಶತ್ಯಾಗದ ರಾಜಾಜ್ಞೆಯಾದಾಗ ಆತ ತನ್ನ ಸ್ನೇಹಿತನಾದ ಧನಕನಿಗೆ ಹೇಳುವ ಮಾತುಗಳಿವು "ನಾನೊಬ್ಬನು ಹೋದರೇನಾಯಿತು? ನನ್ನ ಕಾರ್ಯವನ್ನು ಕೊನೆಗಾಣಿಸಲು ಪರಮಾತ್ಮನು ಎರಡನೇಯವರನ್ನು ಹುಟ್ಟಿಸುವುದರಲ್ಲಿ ಏನೂ ಸಂಶಯವಿಲ್ಲ. ಧನಕಾ, ನನಗೆ ದೇಶತ್ಯಾಗದ ರಾಜಾಜ್ಞೆಯಾಗಿದೆ. ನಾನು ದೇಶವನ್ನು ಬಿಟ್ಟು, ಈಗಿಂದೀಗ ತೆರಳತಕ್ಕದ್ದಿದೆ. ಇದರಲ್ಲಿ ಚಿಂತಿಸಲಿಕ್ಕೆ ಕಾರಣವೇನು? ಆದರೂ, ಧನಕಾ, ದೇಶತ್ಯಾಗದ ಘೋರ ಶಿಕ್ಷೆಯನ್ನು ಸಹಿಸುವುದು ಮಾತ್ರ ಸುಲಭವಲ್ಲ. ನನಗೆ ದೇಹಾಂತ ಶಿಕ್ಷೆ ವಿಧಿಸಿದ್ದರೆ ಇದಕ್ಕೂ ಹೆಚ್ಚು ಆನಂದವಿತ್ತು. ಧನಕಾ, ದೇಶ ಸೇವೆಯನ್ನು ಮಾಡುವ ಸುಸಂಧಿಯು ಮಾತ್ರ ತಪ್ಪುವುದು"[6] ಎಂಬ ಮಾತುಗಳಲ್ಲಿ ತಿಲಕರ ವ್ಯಕ್ತಿತ್ವ ಮತ್ತು ಆಲೋಚನೆ ತಿಳಿಯುತ್ತದೆ. ಶಾರೀರಿಕವಾಗಿ ದೇಶ ತ್ಯಾಗ ಮಾಡಿದರೂ ನಮ್ಮ ದೇಶ ಎಂಬ ಭಾವನೆ ಎಂದಿಗೂ ಬಿಟ್ಟು ಹೋಗದು, ಹಾಗೆಯೇ ನಮ್ಮ ದೇಶಕ್ಕಾಗಿ ಹೋರಾಡುವ ಕಾರ್ಯವನ್ನು ಕೂಡ ನಾವು ಎಂದಿಗೂ ಬಿಡುವುದಿಲ್ಲ ಎಂಬ ದೃಢಸಂಕಲ್ಪ ಇಲ್ಲಿ ಕಾಣುತ್ತದೆ. ಜೊತೆಗೆ ದೇಶತ್ಯಾಗದ ಶಿಕ್ಷೆಗಿಂತ ಮರಣವೇ ಮೇಲು, ಏಕೆಂದರೆ ದೇಶತ್ಯಾಗದಿಂದ ನಮ್ಮ ದೇಶಕ್ಕೆ ಸೇವೆ ಸಲ್ಲಿಸುವ ಕಾರ್ಯ ಕೈಗೂಡದು ಎಂಬ ವ್ಯಥೆ ಇಲ್ಲಿ ಸ್ಪಷ್ಟವಾಗಿ ಚಿತ್ರಿತಗೊಂಡಿದೆ.

ಇಂತಹ ದೃಢಸಂಕಲ್ಪ ಮತ್ತು ಮನೋಧರ್ಮಗಳನ್ನು ಬಹುತೇಕ ಎಲ್ಲಾ ರಾಷ್ಟ್ರೀಯ ಹೋರಾಟಗಾರರಲ್ಲಿ ಕಾಣಬಹುದಾಗಿದ್ದು, ಜನಸಾಮಾನ್ಯರೆಲ್ಲರೂ ಈ ರೀತಿಯಾದ ಮನೋಭಾವವನ್ನು ಬೆಳೆಸಿಕೊಂಡು ತಾವೂ ಕೂಡ ರಾಷ್ಟ್ರೀಯ ಹೋರಾಟದಲ್ಲಿ ಪಾಲ್ಗೊಂಡು ದೇಶಸೇವೆ ಸಲ್ಲಿಸಬೇಕು ಹಾಗೂ ಈ ಸೇವೆ ಪ್ರತಿಯೊಬ್ಬ ಭಾರತೀಯರ ಕರ್ತವ್ಯ ಕೂಡ ಎಂಬ ಆಶಯದ ಜೊತೆಗೆ ಅಂದಿನ ಯುವ ಪೀಳಿಗೆ ದೇಶದ ಪ್ರಜಾಪ್ರಭುತ್ವದ ಸೇವೆಗೆ ಸಿದ್ಧರಾಗಬೇಕೆನ್ನುವ ಪರಿಣಾಮಕಾರಿಯಾದ ಕರೆ ಇಲ್ಲಿದೆ. ಹೀಗೆ ಈ ನಾಟಕದಲ್ಲಿ ಗಾಂಧೀಜಿಯ ಅಹಿಂಸೆಯ ತತ್ತ್ವಗಳ ಜೊತೆಗೆ ತಿಲಕರಂತಹ ಕ್ರಾಂತಿಕಾರಕ ವಿಚಾರಗಳಿವೆ. ಬೇರೆಯವರಿಗೆ ತೊಂದರೆ ಕೊಡದೆ ಶಾಂತಿ ಮತ್ತು ಅಹಿಂಸೆಯ ಮಾರ್ಗದಲ್ಲಿ ನಮ್ಮ ಗುರಿ ಮುಟ್ಟಬೇಕು ಆದರೆ ಆ ಮಾರ್ಗದಲ್ಲಿ ಉದ್ದೇಶಪೂರ್ವವಾಗಿ ತೊಂದರೆ ನೀಡಲೆಂದೇ ಕೆಲವರು ಬಂದಾಗ ಅವಶ್ಯವಾಗಿ ಬಂಡೇಳುವುದು ಕೂಡ ತಪ್ಪಲ್ಲ. ಕೆಲವೊಮ್ಮೆ ಕ್ರಾಂತಿಯನ್ನು ಬೇರೆಯವರ ವಿರುದ್ಧವಾಗಿ ಅಲ್ಲ, ನಮ್ಮ ಅಸ್ತಿತ್ವಕ್ಕಾಗಿ ಮಾಡಬೇಕಾಗುತ್ತದೆ. ಇದು ನಮ್ಮ ಹಕ್ಕೂ

ಕೂಡ ಎಂದು ಭಾರತೀಯರನ್ನು ಬಡಿದೆಬ್ಬಿಸುವ ಕಾರ್ಯವನ್ನು ಈ ನಾಟಕ ಮಾಡುವಲ್ಲಿ ಯಶಸ್ವಿಯಾಗಿದೆ ಎಂದು ಹೇಳಬಹುದು.

ಆಕರಗಳು :

1. ಶ್ರೀರಂಗ ಸಾರಸ್ವತ ಸಂಪುಟ 3, 2005, ಪು.ಸಂ–24
2. ಶ್ರೀರಂಗ ಸಾರಸ್ವತ ಸಂಪುಟ 3, 2005, ಪು.ಸಂ–24
3. ಶ್ರೀರಂಗ ಸಾರಸ್ವತ ಸಂಪುಟ 3, 2005, ಪು.ಸಂ–24
4. ಶ್ರೀರಂಗ ಸಾರಸ್ವತ ಸಂಪುಟ 3, 2005, ಪು.ಸಂ–35
5. ಮಾ ವರದರಾಜು(ಅನು), ರಾಷ್ಟ್ರೀಯತೆ ಇತಿಹಾಸ, ಕಾನೂನು ಮತ್ತು ಸಂಸ್ಕೃತಿ ಕೇಂದ್ರಿತ ಚಿಂತನೆ, 2017, ಪು.ಸಂ–52
6. ಶ್ರೀರಂಗ ಸಾರಸ್ವತ ಸಂಪುಟ 3, 2005, ಪು.ಸಂ–24

ಪರಾಮರ್ಶನ ಗ್ರಂಥಗಳು

1. ಆರ್.ಎಲ್.ಅನಂತರಾಮಯ್ಯ(ಅನು), ಸ್ವಾತಂತ್ರ್ಯದ ಹೋರಾಟ, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, 2013
2. ಡಾ.ಕೆ.ಮರುಳಸಿದ್ದಪ್ಪ, ಆಧುನಿಕ ಕನ್ನಡ ಸಾಹಿತ್ಯ, ಸಪ್ನ ಬುಕ್ ಹೌಸ್, ಬೆಂಗಳೂರು, 2018
3. ಡಾ.ಹರಿಕೃಷ್ಣ ಭರಣ್ಯ, ಹೊಸಗನ್ನಡ ಸಾಹಿತ್ಯದ ಉಗಮ ಮತ್ತು ವಿಕಾಸ, ಪ್ರಭಸ ಬಿಡುಗಡೆ ಮಧುರೈ, 1990
4. ತ.ಸು.ಶಾಮರಾಯ, ಕನ್ನಡ ನಾಟಕ, ಪ್ರತಿಭಾ ಪ್ರಕಾಶನ, ಮೈಸೂರು, 2020
5. ಮಾ ವರದರಾಜು(ಅನು), ರಾಷ್ಟ್ರೀಯತೆ ಇತಿಹಾಸ, ಕಾನೂನು ಮತ್ತು ಸಂಸ್ಕೃತಿ ಕೇಂದ್ರಿತ ಚಿಂತನೆ, ಅಭಿರುಚಿ ಪ್ರಕಾಶನ, ಮೈಸೂರು, 2017
6. ಶ್ರೀರಂಗ ಸಾರಸ್ವತ ಸಂಪುಟ 3, ಲಕ್ಷ್ಮೀ ಮುದ್ರಣಾಲಯ, ಬೆಂಗಳೂರು, 2005

***

ಶಂಕರ ಮೊಕಾಶಿ ಪುಣೇಕರ ಅವರ ಸಣ್ಣ ಕಥೆಗಳಲ್ಲಿ ಅನ್ವೇಷಣೆಯ ಸ್ವರೂಪ

1
ಮಧುಕುಮಾರ್ ಎಚ್. ಎಸ್
ಸಂಶೋಧನಾ ವಿದ್ಯಾರ್ಥಿ,
ಡಾ.ಡಿ.ವಿ.ಗುಂಡಪ್ಪ ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು,
hs4488268@gmail.com

1
ಡಾ. ವೆಂಕಟರೆಡ್ಡಿ ರಾಮರೆಡ್ಡಿ
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು
ತುಮಕೂರು ವಿಶ್ವವಿದ್ಯಾನಿಲಯ ತುಮಕೂರು
vrreddy.kantumkur@gmail.com

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕವಿಯಾಗಿ, ಸಂಶೋಧಕರಾಗಿ, ವಿಮರ್ಶಕರಾಗಿ, ಕಥೆಗಾರರಾಗಿ ಗುರುತಿಸಿಕೊಂಡಿರುವ ಶಂಕರ ಮೊಕಾಶಿ ಪುಣೇಕರ ಅವರು ಬಹುಮುಖ ಪ್ರತಿಭೆವುಳ್ಳವರು. ಕನ್ನಡ ಸಾಹಿತ್ಯಲೋಕದಲ್ಲಿ ತಮ್ಮದೇ ಆದ ಹೊಸ ಬರವಣಿಗೆಯ ಶೈಲಿಯನ್ನು ರೂಢಿಸಿಕೊಂಡ ಶ್ರೀಯುತರು ಕಾವ್ಯ, ಕಾದಂಬರಿ, ಕಥೆ, ನಾಟಕ ಹಾಗೂ ವಿಮರ್ಶಾ ಕ್ಷೇತ್ರದಲ್ಲಿ ಅಪಾರವಾದ ಸಾಧನೆಯನ್ನು ಮಾಡಿದ್ದಾರೆ. ಹಲವು ಭಾಷೆಗಳ ಪ್ರಭುತ್ವ ಸಾಧಿಸಿದ ಪುಣೇಕರರು ಕನ್ನಡ ಮತ್ತು ಆಂಗ್ಲಭಾಷೆಯಲ್ಲಿ ಸಾಹಿತ್ಯವನ್ನು ರಚನೆ ಮಾಡಿರುವುದು ವಿಶೇಷವಾಗಿದೆ.

ಶಂಕರ ಮೊಕಾಶಿ ಪುಣೇಕರರು ಮೇ 8, 1928 ರಂದು ಧಾರವಾಡದಲ್ಲಿ ಜನಿಸಿದರು. ತಂದೆ ರಾವಜಿ ಮೊಕಾಶಿ, ತಾಯಿ ರಾಮುಭಾವು. ಬಹಳ ಚಿಕ್ಕ ವಯಸ್ಸಿನಲ್ಲಿಯೇ ತಾಯಿಯನ್ನು

ಕಳೆದುಕೊಂಡ ಇವರು ಅಜ್ಜಿಯ ಆಶ್ರಯದಲ್ಲಿ ಬೆಳೆದರು. ತಮ್ಮ ಸಂಪೂರ್ಣ ವಿದ್ಯಾಭ್ಯಾಸವನ್ನು ಧಾರವಾಡದಲ್ಲಿಯೇ ಮುಗಿಸಿದರು. ಮುಂದೆ ಶಿಕ್ಷಕರಾಗಿ, ಪತ್ರಿಕಾ ಸಂಪಾದಕರಾಗಿ, ಅಧ್ಯಾಪಕರಾಗಿ, ಪಿಎಚ್.ಡಿ. ಪದವಿಯನ್ನು ಪಡೆದುಕೊಂಡರು. ತದನಂತರದಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯ, ಮೈಸೂರು ವಿಶ್ವವಿದ್ಯಾನಿಲಯಗಳಲ್ಲಿ ಪ್ರಾಧ್ಯಾಪಕರಾಗಿ, ಕನ್ನಡದ ಒಬ್ಬ ಪ್ರಸಿದ್ಧ ಸಾಹಿತಿಯಾಗಿ ಬೆಳೆದು ನಿಂತರು. ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃಷಿ ಮಾಡಿದ ಶ್ರೀಯುತರು ಸುಮಾರು ಮೂವತ್ತೈದಕ್ಕೂ ಹೆಚ್ಚಿನ ಕೃತಿಗಳನ್ನು ಕನ್ನಡ ಮತ್ತು ಆಂಗ್ಲಭಾಷೆಯಲ್ಲಿ ರಚಿಸಿದ್ದಾರೆ. ಇವರ ಸಾಹಿತ್ಯ ಸೇವೆಗೆ ಹಲವಾರು ಪ್ರಶಸ್ತಿ, ಪುರಸ್ಕಾರಗಳು ಸಂದಿವೆ. ಒಟ್ಟಾರೆ ಕನ್ನಡ ನವ್ಯ ಕಾಲಘಟ್ಟದ ಸಾಹಿತಿಗಳಲ್ಲಿ ಪ್ರಮುಖರಾಗಿದ್ದಾರೆ. ಇವರು ಸೃಜನಶೀಲ ಹಾಗೂ ಸೃಜನೇತರ ಪ್ರಕಾರಗಳಲ್ಲಿ ವೈವಿಧ್ಯಮಯವಾದ ಸಾಹಿತ್ಯ ರಚಿಸಿ ತಮ್ಮ ಸ್ವೋಪಜ್ಞತೆಯನ್ನು ಮೆರೆದ ಶ್ರೀಯುತರು 2004 ಆಗಸ್ಟ್ 11 ರಂದು ಇಹಲೋಕ ತ್ಯಜಿಸಿದರು.

ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಪುಣೇಕರ ಅವರು ಕೃತಿಗಳ ರಚನೆ ಮಾಡಿರುತ್ತಾರೆ. ಡೆರಿಕ್ ಡಿಸೋಝಾ ಮತ್ತು ಇತರ ಕತೆಗಳು, ಗಾನಕೇಳಿ, ಗಂಗವ್ವ ಗಂಗಾಮಾಯಿ, ನಟನಾರಾಯಣಿ, ಅವಧೇಶ್ವರಿ, ಮಾಯಿಯ ಮೂರು ಮುಖಗಳು, ವಿಪರ್ಯಾಸ ವಿನೋದ, ಬೇಂದ್ರೆ–ಕಾವ್ಯ ಮೀಮಾಂಸೆ, ಸಾಹಿತ್ಯ ಮತ್ತು ಅಭಿರುಚಿ ಮುಂತಾದ ಕನ್ನಡ ಕೃತಿಗಳ ಜೊತೆಗೆ ಇಪ್ಪತ್ತೊಂದು ಇಂಗ್ಲಿಷ್ ಕೃತಿಗಳನ್ನು ರಚಿಸಿರುವುದಲ್ಲದೇ ಕುವೆಂಪು ಅವರ ಮೇರು ಕೃತಿಯಾದ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯವನ್ನು ಇಂಗ್ಲಿಷ್ ಭಾಷೆಗೆ ಅನುವಾದಿಸುವ ಮೂಲಕ ತಮ್ಮ ಪ್ರತಿಭೆಯ ಸ್ವರೂಪವನ್ನು ದೃಢಪಡಿಸಿದ್ದಾರೆ. ಇವರಿಗೆ 'ಗಂಧಕೊರಡು' ಹೆಸರಿನ ಅಭಿನಂದನ ಗ್ರಂಥವನ್ನು ಸಹ ಸಮರ್ಪಿಸಲಾಗಿದೆ.

ಕನ್ನಡ ಸಾಹಿತ್ಯ ಲೋಕದಲ್ಲಿ ಕಾದಂಬರಿ ಕ್ಷೇತ್ರದಲ್ಲಿ ಪ್ರಸಿದ್ಧಿಯನ್ನು ಪಡೆದದ್ದಷ್ಟೇ ಅಲ್ಲದೆ ಕಥೆಗಾರರಾಗಿಯೂ ಸಹ ಶಂಕರ ಮೊಕಾಶಿ ಪುಣೇಕರ ಅವರು ಅಷ್ಟೇ ಮಹತ್ವವನ್ನು ಪಡೆದುಕೊಂಡಿದ್ದಾರೆ. 'ಡೆರಿಕ್ ಡಿಸೋಜಾ ಮತ್ತಿತರ ಕಥೆಗಳು' ಅವರ ಏಕೈಕ ಪ್ರಕಟಿತ ಕಥಾಸಂಕಲನವಾಗಿದೆ. ಈ ಸಂಕಲನ 1990ರಲ್ಲಿ ಮೊದಲ ಬಾರಿಗೆ ಪ್ರಕಟಗೊಂಡಿದೆ. ಪ್ರಸ್ತುತ ಈ ಕಥಾಸಂಕಲನದಲ್ಲಿ ಒಟ್ಟು ಎಂಟು ಕಥೆಗಳಿವೆ. ಈ ಕಥೆಗಳು ನವ್ಯ ಚಳುವಳಿಯ ಸಂದರ್ಭದಲ್ಲಿ ಬರೆದ ಕತೆಗಳಾದರೂ ಸಹ ಬೇರೆಯದೇ ರೂಪಿನಲ್ಲಿ ಓದುಗರ ಗಮನ ಸೆಳೆಯುತ್ತವೆ. ಮೊಕಾಶಿಯವರೇ ಹೇಳಿದ ಹಾಗೆ ತಮ್ಮ ಜೀವಮಾನದಲ್ಲೇ ಆಗಾಗ್ಗೆ ಬರೆದ ಕಥೆಗಳು ಇಲ್ಲಿ ಸಂಕಲಿತವಾಗಿವೆ. ಜೀವನ

ಪರವಾದ, ಮಾನವ ಪ್ರೀತಿಯನ್ನು ಎತ್ತಿ ಹಿಡಿಯುವ ಕಥೆಗಳನ್ನು ಪುಣೇಕರರು ಸರಳ ಸುಂದರವಾಗಿ ಹೆಣದಿದ್ದಾರೆ. ಆತ್ಮೀಯ ಶೈಲಿ, ನೇರ ನಿರೂಪಣೆ, ಅಚ್ಚಗನ್ನಡ ಭಾಷೆಯ ಬೆಡಗುಗಳಿಂದ ಅವರ ಕಥೆಗಳು ಓದುಗರ ಗಮನ ಸೆಳೆಯುತ್ತವೆ. ತಾವು ಕಂಡುಂಡ ಜೀವನದ ಪ್ರಸಂಗಗಳನ್ನು ಕಥೆಯೊಳಗೆ ತರುವ ರೀತಿ ಮೆಚ್ಚತಕ್ಕ ಅಂಶ ಎಂದು ಜಿ.ಎನ್. ಉಪಾಧ್ಯ ಅವರು ಅಭಿಪ್ರಾಯಪಟ್ಟಿದ್ದಾರೆ.

ಕ್ರಮವಾಗಿ ಬಿಲಾಸ ಖಾನ, ಘಾಟ್‌ಕೋಪರ, ಗೋಪಿ, ಗೋಪಣ್ಣನ ಮಡದಿ, ಪತ್ತೇದಾರ ಡೆರಿಕ್ ಡಿಸೋಜಾ, ವರ್ಗಮಿತ್ರರು, ಕುಂಟ ರಾಠೋಡ ಕಥೆಗಳು ಪ್ರಸ್ತುತ ಕಥಾಸಂಕಲನದಲ್ಲಿ ಮಿಳಿತಗೊಂಡಿದೆ. ತಮ್ಮ ಜೀವನದ ವಿವಿಧ ಕಾಲಘಟ್ಟಗಳಲ್ಲಿ ಆಗಾಗ ಬರೆದ ಈ ಕಥೆಗಳು ತುಂಬಾ ಆಸಕ್ತಿದಾಯಕದವುಗಳಾಗಿವೆ. “ಇಲ್ಲಿ ಕಥೆಗಾರರ ದೃಷ್ಟಿಯಿರುವುದು ಮನುಷ್ಯರನ್ನು ವಿಶಿಷ್ಟ ಸಂದರ್ಭದಲ್ಲಿ ಸಿಲುಕಿಸಿ, ವಿಶಿಷ್ಟ ಸಂಬಂಧಗಳನ್ನು, ಮಾನವೀಯ ಮೌಲ್ಯಗಳನ್ನು ಪರೀಕ್ಷಿಸುವುದು, ಶೋಧಿಸುವುದರಲ್ಲಿ ಮೊಕಾಶಿಯವರು ನಿಸ್ಸೀಮರು. ಇಲ್ಲಿ ಕಥೆಗಳನ್ನು ಕಟ್ಟುವ ಕ್ರಮವೇ ಒಂದು ಶೋಧನ ಮಾರ್ಗವಾಗಿದೆ. ಹೀಗಾಗಿ ಪ್ರತಿಯೊಂದು ಕಥೆಯೂ ಹೃದ್ಯವಾಗಿ ಶುರುವಾಗುತ್ತಾ ಬೆಳೆದುಕೊಳ್ಳುತ್ತಾ ಕುತೂಹಲವನ್ನು ಕಾಯ್ದುಕೊಳ್ಳುತ್ತಾ ಹೋಗುತ್ತದೆ” ಎಂಬುದಾಗಿ ಹಿರಿಯರಾದ ಪ್ರಹ್ಲಾದ ಅಗಸನಕಟ್ಟೆ ಅವರು ಮೊಕಾಶಿಯವರ ಅಭಿನಂದನಾ ಗ್ರಂಥವಾದ ‘ಗಂಧಕೊರಡು’ವಿನಲ್ಲಿ ವ್ಯಕ್ತಪಡಿಸಿದ್ದಾರೆ. ನವ್ಯ ಕಾಲಘಟ್ಟದಲ್ಲಿದ್ದರೂ ಸಹ ಅದರ ಜಪ್ತಿಗೆ ಸಿಗದೇ ಜೀವಪರವಾದ ಮಾನವ ಸಂಬಂಧಗಳನ್ನು ಗಟ್ಟಿಗೊಳಿಸುವ ಅಂತಃಕರಣದ ಕಥೆಗಳನ್ನು ಚಿತ್ರಿಸಿದ್ದಾರೆ. ಬದುಕಿನ ಒಳಹೊರಗಿನ ಅನ್ವೇಷಣೆ ಇಲ್ಲಿಯ ಕಥೆಗಳಲ್ಲಿ ಸುಂದರವಾಗಿ ಮೂಡಿಬಂದಿವೆ, ಸಂಕಲನದಲ್ಲಿರುವ ಎಂಟು ಕಥೆಗಳಲ್ಲಿಯೂ ಯಾವುದೇ ಒಂದು ಬಗೆಯ ಹುಡುಕಾಟ ಇರುವುದನ್ನು ಸುಲಭವಾಗಿ ಗುರುತಿಸಬಹುದಾಗಿದೆ. ಹಲವಾರು ಬಗೆಯ ಸಂಬಂಧಗಳ ಹಾದಿಯಲ್ಲಿ ಮಾನವೀಯ ಮೌಲ್ಯಗಳನ್ನು ಹುಡುಕುವುದು ಎದ್ದು ಕಾಣುವ ಅಂಶವಾಗಿದೆ. ಒಂದು ಒಳ್ಳೆಯ ಕಥೆ ಯಾವೆಲ್ಲಾ ಅಂಶಗಳಿಂದ ಕೂಡಿರಬೇಕು, ಅಲ್ಲಿಯ ಭಾಷೆ, ಸನ್ನಿವೇಶ ನಿರ್ಮಾಣ, ಕಲಾತ್ಮಕತೆ ಹೇಗಿರಬೇಕೆಂಬುದನ್ನು ತಮ್ಮ ಕಥೆಗಳಲ್ಲಿ ತೋರಿಸಿಕೊಟ್ಟಿದ್ದಾರೆ.

ಆಧುನಿಕ ಕನ್ನಡ ನವ್ಯ ಕಥೆಗಳಲ್ಲಿನ ಹೊಸ ಪ್ರಯೋಗ ಹಾಗೂ ಪ್ರವೃತ್ತಿಗಳನ್ನು ಇವರ ಕಥೆಗಳಲ್ಲಿ ಪ್ರಮುಖವಾಗಿ ಗುರುತಿಸಬಹುದಾಗಿದೆ. ಕನ್ನಡದಲ್ಲಿ ಸಣ್ಣ ಕಥೆಗಳನ್ನು ಮೊದಲು ಬರೆದವರು ಪಂಜೆ ಮಂಗೇಶರಾಯರಾದರೂ ಈ ಪ್ರಕಾರಕ್ಕೆ ಒಂದು ಗಟ್ಟಿಯಾದ ನೆಲಗಟ್ಟನ್ನು ತಂದುಕೊಟ್ಟ ಕೀರ್ತಿ ಮಾಸ್ತಿ ಅವರಿಗೆ ಸಲ್ಲುತ್ತದೆ. ಆದ್ದರಿಂದಲೇ

ಮಾಸ್ತಿಯವರು ಕನ್ನಡದ ಮೊದಲ ಮಹತ್ವದ ಕಥೆಗಾರರಾಗಿದ್ದಾರೆ. ಮಾಸ್ತಿಯವರ ನಂತರ ಎ.ಆರ್. ಕೃಷ್ಣಶಾಸ್ತ್ರೀ, ಆನಂದ, ಭಾರತೀಪ್ರಿಯ, ಅಶ್ವತ್ಥ, ಆನಂದಕಂದ, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಹೀಗೆ ಅನೇಕ ಕಥೆಗಾರರ ಸಾಲು ಬೆಳೆದು ಬಂದಿದೆ. ಈ ಸಾಲಿನಲ್ಲಿಯೇ ಮುಂದೆ ಬಂದಂತಹ ವಿಶಿಷ್ಟ ಹಾಗೂ ವಿಭಿನ್ನ ದೃಷ್ಟಿಕೋನದ ಸಾಹಿತಿ ಮೊಕಾಶಿಯವರಾಗಿದ್ದಾರೆ. ಯಾವುದೋ ಒಂದು ಪತ್ತೇದಾರಿಯ ಮೂಲಕ ಶುರುವಾಗಿ ಅಂತಿಮವಾಗಿ ಮನುಷ್ಯ ಸಂಬಂಧದ ಮೌಲ್ಯವನ್ನು ತಿಳಿಸುವ ಬಗೆ ಇವರದ್ದಾಗಿದೆ.

ಮೊಕಾಶಿ ಕಥೆಗಳ ಕೇಂದ್ರ ವಸ್ತು ಪ್ರಧಾನವಾಗಿ ಸಮಕಾಲೀನ ಸಮಾಜ ಮತ್ತು ಮನುಷ್ಯ. ಪತ್ತೇದಾರಿ ಮಾದರಿಯ ಮೂಲಕ ಮಾನವ ಸಂಬಂಧಗಳ ನಿಗೂಢತೆಗಳನ್ನು ಅನುಸಂಧಾನ ಮಾಡುವ ತಾತ್ತ್ವಿಕ ಮಹತ್ವಕಾಂಕ್ಷೆಯಲ್ಲಿ ಪಾತ್ರಗಳನ್ನು ದುಡಿಸಿಕೊಳ್ಳುತ್ತಾರೆ. ಹಾಗೆಯೇ ಮೊಕಾಶಿ ಅವರ ಈ ಕಥೆಗಳು ಅವರ ಸಮಕಾಲೀನರಾಗಿದ್ದ ಶಾಂತಿನಾಥ ದೇಸಾಯಿ, ಯು.ಆರ್. ಅನಂತಮೂರ್ತಿ – ಮುಂತಾದ 'ನವ್ಯ' ಕಥೆಗಾರರ ಕಥೆಗಳಿಗಿಂತ ತುಂಬಾ ಭಿನ್ನವಾಗಿವೆಯೆಂದು ಟಿ.ಪಿ. ಅಶೋಕ ಅವರು ಅಭಿಪ್ರಾಯಪಡುತ್ತಾರೆ.

"ಡೆರಿಕ್ ಡಿಸೋಝಾ ಮತ್ತು ಇತರ ಕಥೆಗಳು" ಶೀರ್ಷಿಕೆ ಹೊತ್ತ ಈ ಕಥಾಸಂಕಲನದಲ್ಲಿ ಬರುವ ಮೊದಲ ಹಾಗೂ ಹೃದ್ಯವಾದ ಪರಿಣಾಮಕಾರಿ ಕಥೆ 'ಬಿಲಾಸ ಖಾನ'. ಈ ಸಂಕಲನದ ಮುಖ್ಯ ಕಥೆಗಳಲ್ಲಿ ಮನಕರಗಿಸುವ; ಓದುಗರ ಹೃದಯ ಸ್ಪರ್ಶಿಸುವ ಮಾನವ ಸಂಬಂಧದ ಚಿತ್ರಣವನ್ನು ಕಟ್ಟಿಕೊಡುವ ಕಥೆ ಇದಾಗಿದೆ. ಇದು ತಂದೆಯನ್ನು ಹುಡುಕಿ ಹೊರಟ ದುರಂತ ಮಗನ ಕಥೆಯಾಗಿದೆ. ಸಂಗೀತ ಜಗತ್ತಿನ ವಿದ್ಯಮಾನ ಇಲ್ಲಿ ಕಥೆಯಾಗಿ ನೆಲೆ ಪಡೆದಿದೆ. ಮಿಯಾ ತಾನಸೇನರ ವೈಯಕ್ತಿಕ ಜೀವನದ ನಾನಾ ರೀತಿಯ ಸನ್ನಿವೇಶಗಳನ್ನು ಕಟ್ಟಿಕೊಡುವತ್ತ ಕಥೆಯು ಸಾಗುತ್ತದೆ. ಈ ಕಥೆಯ ಪ್ರಮುಖ ಪಾತ್ರ 'ಬಿಲಾಸ ಖಾನ'. ಈತನ ಸುತ್ತಲೂ ಈ ಕಥೆಯೂ ಹೆಣೆಯಲ್ಪಟ್ಟಿದೆ. ಕಥೆಯ ಆರಂಭದಿಂದ ಅಂತ್ಯದವರೆಗೂ ಯಾವುದೋ ಒಂದನ್ನು ಹುಡುಕುವ ಪ್ರಕ್ರಿಯೆ ಶುರುವಾಗಿ ಅಂತಿಮವಾಗಿ ಕಥಾನಾಯಕ ದುರಂತ ಸಾವನ್ನು ಪಡೆಯುವ ಪರಿ ವಿಷಾದನೀಯವಾಗಿದೆ. ಮಿಯಾ ತಾನಸೇನರು ಅತ್ರಾಳಿ ಹಳ್ಳಿಯನ್ನು ಬಿಟ್ಟು ದಿಲ್ಲಿಗೆ ಹೋಗಿ ಹದಿನೈದು ವರ್ಷಗಳು ಕಳೆದಿರುತ್ತವೆ. ಮೂಲತಃ ಸಂಗೀತಗಾರನಾದ ತಾನಸೇನನು ದಿಲ್ಲಿಯ ಅಕ್ಬರ್‌ನ ಆಸ್ಥಾನ ಸೇರಿ ಬಹಳ ಪ್ರಸಿದ್ಧಿಯನ್ನು ಪಡೆದಿರುತ್ತಾನೆ. ಹಳ್ಳಿಯಲ್ಲಿ ಹಾಗೂ ದಿಲ್ಲಿಯಲ್ಲಿ ಸೇರಿ ಒಟ್ಟು ನಾಲ್ಕು

ಜನ ಹೆಂಡತಿಯರು ತಾನಸೇನರಿಗಿರುತ್ತಾರೆ. ಮೊದಲ ಹಳ್ಳಿಯ ಹೆಂಡತಿ 'ಹಮೀದಾ'ಳಿಂದ ಒಬ್ಬನೇ ಮಗ ಬಿಲಾಸ ಖಾನ. ದಿಲ್ಲಿಯಲ್ಲಿ ಎರಡನೆಯ ಹೆಂಡತಿಯಲ್ಲಿ ಮೂರು ಮಕ್ಕಳು. ಹಾಗೆಯೇ ಮೂರನೆಯವಳಿಂದ ಮೂರು ಮಕ್ಕಳು ಮತ್ತು ಕೊನೆಯವಳಾದ ನಾಲ್ಕನೆಯ ಹೆಂಡತಿಯಿಂದ ಇಬ್ಬರು ಮಕ್ಕಳು. ಇಲ್ಲಿ ಕಥೆಗಾರರು ಮುಖ್ಯವಾಗಿ ತಮ್ಮ ಗಮನವನ್ನು ಕೇಂದ್ರೀಕರಿಸುವುದು ಹಮೀದಾಳ ಮಗನಾದ 'ಬಿಲಾಸ ಖಾನ'ನ ಸಂಬಂಧಗಳ ಹುಡುಕಾಟದ ಮೇಲೆ ಎಂದು ಹೇಳಬೇಕು. ಈ ಬಿಲಾಸಖಾನನ ದುಗುಡ ದುಮ್ಮನವನ್ನು ಈ ಕಥೆ ತೆರೆದಿಟ್ಟಿದೆ. ಬಿಲಾಸ ಖಾನ ಹದಿನಾರು ವರ್ಷದ ಹುಡುಗ. ಆತನಿಗೆ ತನ್ನ ತಂದೆಯನ್ನು ಕಾಣಬೇಕೆಂಬ ಹೆಬ್ಬಯಕೆ. ಆ ಕಾರಣದಿಂದಲೇ ತನ್ನ ತಂದೆಯನ್ನು ಕಾಣಲು ದಿಲ್ಲಿಗೆ ಬರುತ್ತಾನೆ. ಬಾಲ್ಯದಿಂದಲೂ ತನ್ನ ತಂದೆಯ ಪ್ರೀತಿ–ವಾತ್ಸಲ್ಯದಿಂದ ವಂಚಿತನಾಗಿ ಮನೆಯವರು ಎಷ್ಟೇ ಬೇಡವೆಂದರೂ ತಂದೆಯನ್ನು ಕಂಡು ಅವರ ಪ್ರೀತಿಯನ್ನು ಮರಳಿ ಪಡೆಯಬೇಕೆಂದು ಉತ್ಸಾಹದಿಂದ ಹೊರಡುತ್ತಾನೆ. ಅಲ್ಲಿ ತಾನಸೇನರ ಸ್ನೇಹಿತರಾದ ರಹಮತ ಖಾನರ ಮನೆಯಲ್ಲಿ ಉಳಿದು ತಂದೆಯನ್ನು ಕಾಣುತ್ತಾನೆ. ಆದರೆ ಆತನನ್ನು ಮಾತನಾಡಿಸಲು ಸಾಧ್ಯವಾಗದೇ ಇರುವ ಸ್ಥಿತಿ ಬಂದೊದಗುತ್ತದೆ. ಕಥೆಯ ಕೊನೆಯವರೆಗೂ ಅವನು ತನ್ನ ತಂದೆಯನ್ನು ಮಾತನಾಡಿಸಬೇಕೆಂಬ ಹಂಬಲದಿಂದಲೇ ಅಂತಿಮವಾಗಿ ಅಸುನೀಗುತ್ತಾನೆ. ಅಲ್ಲಿಯವರೆಗೂ ಆತ ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಬಿಲಾಸ ಖಾನ ತನ್ನ ಮಗನೆಂದು ತಾನಸೇನರಿಗೆ ತಿಳಿಯುವ ಹೊತ್ತಿಗೆ ಈ ದುರಂತ ನಡೆದು ಹೋಗಿರುತ್ತದೆ. ಈ ಸಂದರ್ಭವನ್ನು ತಾನಸೇನರು ಎದುರಿಸಲಾಸಾಧ್ಯವಾಗುತ್ತದೆ. ಮಾಮೂಲಾ ಬೇಗಂ ಸಲಹೆಯಂತೆ ಮಗನಿಗಾಗಿ ತಂದೆಯು ದುಃಖದ ಮಡುವಿನಲ್ಲಿ ರಾಗವೊಂದನ್ನು ಹಾಡುತ್ತಾನೆ. ಈ ಸಂದರ್ಭದಲ್ಲಿ ಹುಟ್ಟಿದ ಮೊದಲ ಸ್ವತಂತ್ರರಾಗ 'ಬಿಲಾಸ ಖಾನಿ' ತೋಡಿ ಜನ್ಮ ತಾಳುತ್ತದೆ. ಆದರೆ ಬಿಲಾಸ ಖಾನ ಮತ್ತೆ ಏಳಲಿಲ್ಲ. ಒಟ್ಟಿನಲ್ಲಿ ನೋವಿನ ತೀವ್ರತೆ, ದುಃಖ, ವೇದನೆ ಎಲ್ಲವೂ ಸೇರಿ ಹೊಸ ರಾಗಗಳ ಹುಟ್ಟಿಗೆ ಕಾರಣವಾಗುತ್ತದೆ. ಸಂಗೀತ ಪ್ರಪಂಚವನ್ನು ಕಥೆಯಲ್ಲಿ ಕಟ್ಟಿಕೊಡುವ ಮೂಲಕ ಓದುಗರ ಅನುಭವವನ್ನು ಹೆಚ್ಚಿಸುವಲ್ಲಿ ಪುಣೇಕರರು ಸಫಲರಾಗಿದ್ದಾರೆ.

ಸಾಂಪ್ರದಾಯಿಕ ಕೌಟುಂಬಿಕ ವ್ಯವಸ್ಥೆ ಮತ್ತು ಮುಂಬೈ ಪರಿಸರ ಎರಡನ್ನೂ ಒಳಗೊಂಡು ಗಮನ ಸೆಳೆಯುವ ಎರಡನೇ ಕಥೆ 'ಪತ್ತಲು'. ಈ ಕಥೆಯ ಮೂಲಕ ಬದಲಾಗುತ್ತಿರುವ ಭಾರತೀಯ ಜೀವನದ ಒಂದು ನವಿರಾದ ಚಿತ್ರಣವನ್ನು ಬಿಡಿಸಿದ್ದಾರೆ. ಈ ಕಥೆಯಲ್ಲಿ ಬರುವ ಪ್ರಮುಖ ಪಾತ್ರಗಳು ಮೂರು. ಜೋಶಿ, ಪದ್ಮಾವತಿ, ಧನಲಕ್ಷ್ಮಿ

ಈ ಮೂವರ ಸುತ್ತ ಕಥೆ ಹೆಣೆಯಲ್ಪಟ್ಟಿದೆ. ಕಥೆ ಆರಂಭವಾಗುವುದು ಮುಂಬೈ ಪರಿಸರದ ಆಫೀಸೊಂದರಿಂದ. ವಿದ್ಯಾವಂತ ಜೋಶಿಯು ಒಬ್ಬ ಸಾಧಾರಣ ನೌಕರ. ಆತನು ಆಗ ತಾನೆ ಕೆಲವು ದಿನಗಳ ಹಿಂದೆ ಹದಿನೇಳು ವರ್ಷದ ಹಳ್ಳಿ ಹುಡುಗಿಯನ್ನು ಮದುವೆಯಾಗಿ ಮುಂಬೈನ ಒಂದು ಸಣ್ಣ ಮನೆಯಲ್ಲಿ ಸಂಸಾರ ಹೂಡಿರುತ್ತಾನೆ. ಆತನ ಹೆಂಡತಿಯಾದ ಪದ್ಮಾವತಿಯು ಮುಂಬೈ ಹೆಣ್ಣು ಮಕ್ಕಳಷ್ಟು ಅಲ್ಲದಿದ್ದರೂ, ತನ್ನ ಆಫೀಸಿನ ಸಹೋದ್ಯೋಗಿ ಹೆಣ್ಣು ಮಕ್ಕಳಷ್ಟು ಸುಧಾರಿಸಿದವಳಲ್ಲ ಎಂಬ ತನ್ನ ಮನದಾಳದ ಮಾತುಗಳನ್ನು ಆಫೀಸಿನ ಗೆಳತಿಯಾದ ಧನಲಕ್ಷ್ಮಿಯ ಮುಂದೆ ಹೇಳಿಕೊಳ್ಳುತ್ತಾನೆ. ಹಳ್ಳಿಯ ಹುಡುಗಿಯಾದ ಆಕೆಗೆ ಹೊರಜಗತ್ತಿನ ನಾಜೂಕಿನ ಪರಿವಿಲ್ಲ. ಮನರಂಜನೆಯ ಆಸಕ್ತಿಯೂ ಇಲ್ಲ. ವಿನಾಕಾರಣ ಹಣವನ್ನು ವ್ಯಯಿಸುವುದಿಲ್ಲ. ಪತಿಯಾದವನು ಒಂದು ಒಳ್ಳೆಯ ಸೀರೆಯನ್ನು ತಂದುಕೊಟ್ಟರೂ ಸಹ ಅನಗತ್ಯ ಖರ್ಚೆಂದು ಭಾವಿಸುತ್ತಾಳೆ. ಓದು–ಬರಹವಂತೂ ಕೇಳುವಷ್ಟಿಲ್ಲ, ತಾನಾಯಿತು ತನ್ನ ಕೆಲಸವಾಯಿತೆಂದು ಮನೆಯ ನಾಲ್ಕು ಗೋಡೆ ಮಧ್ಯೆಯೇ ಕಾಲವನ್ನು ಸರಿದೂಗಿಸಿ ಬಿಡುತ್ತಾಳೆ. ಇಂತಹ ಮನಸ್ಥಿತಿಯವಳಿಂದ ಆತ ಬೇಸತ್ತು, ಅವಳನ್ನು ನಾಗರೀಕ ಪ್ರಪಂಚಕ್ಕೆ ಸೆಳೆಯಲು ಧನಲಕ್ಷ್ಮಿಯ ಸಹಾಯ ಕೋರುತ್ತಾನೆ. ಆಕೆಯ ಸಹಾಯದಿಂದ ಪದ್ಮಾವತಿಯನ್ನು ಬದಲಾಯಿಸಲು ಸಾಧ್ಯವೆಂದು ಅಂದುಕೊಂಡರೂ ಸಹ ಅದು ಅಸಾಧ್ಯವೇ ಆಗುತ್ತದೆ. ಆದರೆ ಧನಲಕ್ಷ್ಮಿಯ ಮನಸ್ಸು ಕೆಲವೊಮ್ಮೆ ಜೋಶಿಯ ಮೇಲೂ ಜೋಶಿಯ ಮನಸ್ಸು ಧನಲಕ್ಷ್ಮಿಯ ಮೇಲೆ ಹಾಯುತ್ತದೆ. ಆದರೆ ಪರಿಸ್ಥಿತಿಗನುಗುಣವಾಗಿ ಮತ್ತೆ ವಾಸ್ತವ ಲೋಕದತ್ತ ಹೊರಳುವ ಪರಿ ಕಥೆಗಾರರ ಕಲಾತ್ಮಕತೆ ಎಂದೇ ಹೇಳಬಹುದು. ಇಲ್ಲಿ ಪದ್ಮಾವತಿ ಹಾಗೂ ಧನಲಕ್ಷ್ಮಿ ಈ ಇಬ್ಬರ ಜಗತ್ತುಗಳು ಬೇರೆ ಬೇರೆಯಾಗಿದ್ದು, ಇವೆರಡರ ಮಧ್ಯೆ ಜೋಶಿ ಇದ್ದು ಅವೆರಡೂ ಆತನನ್ನು ಬೇರೆ–ಬೇರೆಯಾಗಿಯೇ ಆಕರ್ಷಿಸುತ್ತವೆ. ಆದರೆ ಕೊನೆಗೆ ವಾಸ್ತವ ಪ್ರಜ್ಞೆಯನ್ನು ಜಾಗೃತವನ್ನಾಗಿಸುವ ಪರಿ ಇಲ್ಲಿ ವಿಶೇಷವಾದುದಾಗಿದೆ.

ಮೂರನೆಯದಾಗಿ ಘಾಟಕೋಪರ ಕಥೆ ನವ್ಯ ಕಾಲದ ಕಥೆಯೆಂದು ಹೇಳಬಹುದಾಗಿದೆ. ಘಾಟ್‌ಕೋಪರ್ ಮುಂಬೈನ ಒಂದು ಉಪನಗರದ ಹೆಸರಾಗಿದೆ. ಈ ಕಥೆಯಲ್ಲಿ ಮುಂಬೈ ಪರಿಸರವೇ ಕಥೆಯ ಕೇಂದ್ರವಾಗಿದ್ದು, ಪರಿಸರವನ್ನು ಹಲವಾರು ವಿಧದಲ್ಲಿ ಕಟ್ಟಿಕೊಡುತ್ತಲೇ ಲೇಖಕರು 'ಅನಿಲ ಕಾರ್ತಿಕ'ನೆಂಬ ಕಥಾನಾಯಕನ ಕಡೆ ನಮ್ಮ ಗಮನ ಸೆಳೆಯುವಂತೆ ಮಾಡುತ್ತಾರೆ. ಆತ 'ರಘು–

ಆಮದು' ಕಂಪನಿಯೊಂದರಲ್ಲಿ ಮ್ಯಾನೇಜರ್ ಆಗಿ ಕೆಲಸ ನಿರ್ವಹಿಸುತ್ತಿರುತ್ತಾನೆ. ಮುಂದೆ ಆತನ ಕೆಲವೇ ಗಂಟೆಗಳಲ್ಲಿ ನಡೆದ ವಿಚಿತ್ರ ಸಂಗತಿಗಳನ್ನೂ, ಅಲ್ಲಿಯ ಸ್ವಾರ್ಥ, ನರಕಸದೃಶ್ಯ ಬದುಕು, ಕಪಟ, ವಿಚಿತ್ರ ಸಂಬಂಧಗಳ ಕುರಿತ ಈ ಕಥೆಯನ್ನು ಹೆಣೆದಿದ್ದಾರೆ. ಘಾಟ್‌ಕೋಪರದಿಂದ ಹೊರನಡೆದ ಅನಿಲ್ ಕಾರ್ತಿಕನ ಗೊತ್ತು – ಗುರಿ ಇಲ್ಲದ ಓಡಾಟಗಳು, ಅವನಲ್ಲೇ ಮೂಡಿದ ಪ್ರಶ್ನೆಗಳು ಹೊಸ ಬಗೆಯ ಬದುಕಿಗೆ ಹಾತೋರೆಯುವ ಪ್ರಸಂಗಗಳಲ್ಲಿ ಕಟ್ಟಿಕೊಟ್ಟಿದ್ದಾರೆ.

ನಾಲ್ಕನೆಯ ಕಥೆಯಾದ 'ಗೋಪಿ' ಕಥೆಯಲ್ಲಿ ಲೇಖಕರು ತನ್ನ ಅಕ್ಕನ ಮನೆಯಲ್ಲಾದ ಒಂದೆರಡು ದಿನಗಳ ಅನುಭವವನ್ನು ಕಟ್ಟಿಕೊಡುತ್ತಾರೆ. ಗೋಪಣ್ಣನ ಮಡದಿ ಕಥೆಯಲ್ಲಿ ಗೋಪಣ್ಣ ಆತನ ಹೆಂಡತಿ ಸೀತಾ ಹಾಗೂ ಅತ್ತೆ ತುಂಗಕ್ಕ ಈ ಮೂವರ ಸುತ್ತ ಕಥೆ ಕಟ್ಟಲಾಗಿದೆ. ಅತ್ತೆ –ಸೊಸೆಯರ ನಡುವಿನ ಜಗಳ, ಮುನಿಸು ಕೊನೆಗೆ ಸೀತಾಳಿಗಾದ ಅವಗಢದಿಂದ ಸರಿಯಾಗುವ ಪರಿಯನ್ನೂ, ಸಂಸಾರದೊಳಗಿನ ತಾಕಲಾಟಗಳನ್ನು ನಿರೂಪಿಸುವ ಮೂಲಕ ತಾಳ್ಮೆಯಿಂದ ಏನನ್ನೂ ಬೇಕಾದರೂ ಸಾಧಿಸಿ, ನೆಮ್ಮದಿಯ ಜೀವನ ನಡೆಸಬಹುದೆಂಬ ಆಶಯವನ್ನು ಕಥೆಯಲ್ಲಿ ಅಡಗಿಸಿದ್ದಾರೆ.

'ಡೆರಿಕ್ ಡಿಸೋಝಾ' ಈ ಸಂಕಲನದ ಶೀರ್ಷಿಕೆಯನ್ನು ಹೊತ್ತ ಕಥೆ ಇದಾಗಿದೆ. ಇದೊಂದು ಪತ್ತೇದಾರಿ ನಮೂನೆಯ ಕಥೆಯಾಗಿದೆ. ಒಂದು ಕೊಲೆಯ ಸುತ್ತ ಹಾಗೂ ಅದರ ಪತ್ತೆ ಹಚ್ಚುವಿಕೆಯ ಸುತ್ತ ಕಥೆ ರಚನೆಯಾಗಿದೆ. ಈ ಕಥೆಯ ನಾಯಕ ಡೆರಿಕ್ ಡಿಸೋಝಾ ಈತ ಒಬ್ಬ ಖಾಸಗಿ ಪತ್ತೆದಾರ ವೃತ್ತಿಯವನು. ಡಾ. ಸಕ್ಸೆನಾ ಅವರ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆಯುತ್ತಿದ್ದ ಅರುಣ ಪ್ರಸಾದ ಗುಪ್ತಾ ಅವರ ಕೊಲೆಯಾಗುತ್ತದೆ. ಈ ಕೊಲೆಯ ತನಿಖೆಯನ್ನು ಇನ್‌ಸ್ಪೆಕ್ಟರ್ ಪೆರುಮಾಳ್ ನಡೆಸುತ್ತಾರೆ. ಆದರೆ ಅವರ ತನಿಖೆಗೆ ಸವಾಲಾಗಿ ಡೆರಿಕ್ ಡಿಸೋಜಾ ತನ್ನ ಕೆಲಸವನ್ನು ಶುರುಮಾಡುತ್ತಾನೆ. ಕೊನೆಗೆ ಅರುಣ ಪ್ರಸಾದರ ಕೊಲೆ ರಹಸ್ಯವನ್ನು ಭೇದಿಸುವಲ್ಲಿ ಯಶಸ್ವಿಯಾಗುತ್ತಾನೆ. ಮುದುಕ ಅರುಣ ಪ್ರಸಾದರ ಕೊಲೆಯನ್ನು ಆಸ್ಪತ್ರೆಯ ನರ್ಸ್ ಸಾಳೂಬಾಯಿಯ ಗಂಡ ಜೀವಣರಾವ ಎಂಬುದು ಡಿಸೋಜಾನ ತನಿಕೆಯಿಂದ ತಿಳಿದು ಬರುತ್ತದೆ, ಇಲ್ಲಿ ಆತನೇ ಔಷಧಿಯಲ್ಲಿ ವಿಷ ಬೆರೆಸಿದ್ದನೆಂದು ಈತನ ತನಿಖೆಯಿಂದ ತಿಳಿದು ಬರುವ ಪರಿ ಒಂದು ಉತ್ತಮ ಪತ್ತೆದಾರಿ ತಂತ್ರವನ್ನು ಮೊಕಾಶಿಯವರು ನಿರ್ವಹಿಸಿರುವ ಪರಿ ಕಾಣಬಹುದಾಗಿದೆ.

'ವರ್ಗಮಿತ್ರರು' ಈ ಸಂಕಲನದ ಮತ್ತೊಂದು ಯಶಸ್ವಿ ಕಥೆಯೆಂದು

ಹೇಳಬಹುದು. ಬದುಕಿನ ವಿವಿಧ ಅವಸ್ಥೆಗಳ ಮುಖಾಮುಖಿಯೊಂದಿಗೆ, ಹದಿಹರೆಯದ ಪ್ರೇಮದ ಸ್ವರೂಪದ ಚಿತ್ರಣವಿದೆ. ರಾಮಚಂದ್ರ, ವಸಂತ ಹಾಗೂ ಹೈಸ್ಕೂಲ್ ಗೆಳತಿ ಸುಮಿತ್ರಾ ಕಥೆಯ ಮೂರು ಪ್ರಮುಖ ಪಾತ್ರಗಳಾಗಿವೆ. ಈ ಮೂವರು ಹೈಸ್ಕೂಲ್ ದಿನಗಳಲ್ಲಿ ಒಳ್ಳೆಯ ಸ್ನೇಹಿತರಾಗಿದ್ದರು. ವಿದ್ಯಾಭ್ಯಾಸ ಮುಂದುವರೆದಂತೆ ಒಂದು ದಿನ ಸುಮಿತ್ರಾಳ ಮದುವೆ ನಡೆದು ಈ ಮೂವರು ಪರಸ್ಪರ ದೂರವಾಗುತ್ತಾರೆ. ಆದರೆ ವಸಂತ ಹಾಗೂ ರಾಮ ಈ ಇಬ್ಬರೂ ನೆಚ್ಚಿನ ಸ್ನೇಹಿತರಾಗಿಯೇ ಕಾಲ ದೂಕುತ್ತಿದ್ದ ಸಂದರ್ಭದಲ್ಲಿ ಒಂದು ದಿನ ಆಕಸ್ಮಿಕವಾಗಿ ಅನೇಕ ವರ್ಷಗಳ ಬಳಿಕ ಸುಮಿತ್ರೆಯನ್ನು ನೋಡುತ್ತಾರೆ. ಆದರೆ ಅವಳು ಡಾಕ್ಟರ್ ನಾಯಕ್ ಅವರ ಹೆಂಡತಿಯಾಗಿ ಒಂದು ಮಗುವಿನ ತಾಯಿಯೂ ಆಗಿದ್ದಾಳೆ. ಆಶ್ಚರ್ಯವೆಂದರೆ ಸುಮಿತ್ರಾ ದಂಪತಿಗಳು ವಸಂತನ ರೂಮಿಗೆ ತೀರಾ ಹತ್ತಿರವಿರುವ ಬಂಗಲೆಯೊಂದರಲ್ಲಿ ನೆಲೆಸಿರುತ್ತಾರೆ. ವಸಂತ ಮತ್ತು ರಾಮಚಂದ್ರ ಇನ್ನೂ ವಿದ್ಯಾರ್ಥಿಗಳಾಗಿಯೇ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸುತ್ತಿದ್ದಾರೆ. ಒಮ್ಮೆ ವರ್ಗಮಿತ್ರೆಯಾಗಿದ್ದವಳು ಇಂದು ಗೃಹಿಣಿಯಾದ ಮೇಲೆ ಅವಳೊಂದಿಗಿನ ಸಂಬಂಧ ಹೇಗಿರಬೇಕೆಂಬ ತಿಳುವಳಿಕೆಯೂ ಇಲ್ಲದ ಇವರು ಅವಳ ಮೇಲೆ ಅಪಾರ ಕುತೂಹಲ ಹಾಗೂ ಆಕರ್ಷಣೆಯಿಂದ ಅನೈತಿಕ ಸಂಬಂಧ ಸಾಧ್ಯವೇ ಎಂಬ ಮಟ್ಟಕ್ಕೆ ಯೋಚಿಸುತ್ತಾರೆ. ಆದರೆ ಹಿಂದಿನ ಬಾಲ್ಯದ ಸ್ನೇಹ ಈಗ ಸುಮಿತ್ರೆಗೆ ನೆನಪು ಮಾತ್ರ ಆಗಿರುತ್ತದೆ.

ಒಂದು ದಿನ ವಸಂತ ಮತ್ತು ರಾಮಚಂದ್ರರನ್ನು ಭೇಟಿಯಾದ ಸುಮಿತ್ರೆ ಅವರನ್ನು ಪ್ರೀತಿಯಿಂದ ಮಾತನಾಡಿಸುತ್ತಾಳೆ. ಸುಮಿತ್ರಾಳ ಆಮಂತ್ರಣದ ಮೇರೆಗೆ ವಸಂತನು ಆಶಾಭಾವನೆಯಿಂದ ಆಕೆಯ ಮನೆಗೆ ಹೋಗುತ್ತಾನೆ. ಆದರೆ ಅಲ್ಲಿ ವಾಸ್ತವ ಚಿತ್ರಣವೇ ಬೇರೆ ಇದ್ದು, ಆತನನ್ನು ಮಂತ್ರಮುಗ್ಧನನ್ನಾಗಿಸುತ್ತದೆ. ವಸಂತನನ್ನು ಸುಮಿತ್ರೆ ಉಪಚರಿಸಿದ ರೀತಿ, ಕರುಣೆ, ಗಾಂಭೀರ್ಯ, ಗಂಡ – ಹೆಂಡತಿಯರ ನಡುವಿನ ಅನ್ಯೋನ್ಯತೆ, ಸುಮಿತ್ರೆಯ ಮಗುವಿನ ಮುಗ್ಧತೆ ಇವೆಲ್ಲವನ್ನೂ ಕಂಡ ವಸಂತನ ಮನಸ್ಸು ಕವಿ ನಾಗಚಂದ್ರನ ರಾವಣನ ಮನಸ್ಸು 'ಕದಡಿದ ಸಲಿಲಂ ತಿಳಿವಂದದೆ' ಎನ್ನುವಂತೆ ಬದಲಾಗಿ ಬಿಡುತ್ತಾನೆ. ಮನಸ್ಸು ತಿಳಿಗೊಂಡು ಆತ್ಮದರ್ಶನವಾಗುವ ಪರಿಯನ್ನು ಲೇಖಕರು ಸೊಗಸಾಗಿ ಚಿತ್ರಿಸಿದ್ದಾರೆ. ಮನೆಯಿಂದ ಹೊರಡುವಾಗ ಅವನ ಕೊನೆಯ ನುಡಿಗಳು ಹೃದಯಾಂತರಾಳದಿಂದ ಮೂಡಿ ಬರುತ್ತವೆ. ತನ್ನನ್ನೇ ತಾನು, ಅರಿತಂತೆ ಭಾಸವಾಗಿ, ಅವನ ಸಂಪೂರ್ಣ ವ್ಯಕ್ತಿತ್ವ

ಅಭಿವ್ಯಕ್ತಿಗೊಂಡಂತಾಗುತ್ತದೆ. ಹೀಗೆ ಕೌಟುಂಬಿಕ ಜೀವನ ಸೌಂದರ್ಯದ ದರ್ಶನವನ್ನು ಮೊಕಾಶಿಯವರು ಕಥೆಯಾಗಿ ಓದುಗರಿಗೆ ಅರ್ಪಿಸಿದ್ದಾರೆ.

ಇನ್ನೂ ಈ ಸಂಕಲನದ ಕೊನೆಯ ಕಥೆ 'ಕುಂಟ ರಾಠೋಡ' ಕಥೆಯಲ್ಲಿ ದಿಲ್ಲಿಯನ್ನು ಕೇಂದ್ರವಾಗಿಟ್ಟುಕೊಂಡು ಮಹಾನಗರದ ಜನರ ಬದುಕಿನ ವಿವಿಧ ಸಮಸ್ಯೆಗಳನ್ನು ಕುರಿತು ಚರ್ಚಿಸಿದ್ದಾರೆ. ಕಥಾನಾಯಕನಾದ ರಾಠೋಡ್ ದಿಲ್ಲಿಯ ಜಂತರಮಂತರಿನ ಸಮೀಪದ ಮಾರ್ಕೆಟ್‌ನ ಬಳಿ ಸಣ್ಣ ಅಂಗಡಿಯೊಂದಿಗೆ ಜೀವನ ಸಾಗಿಸುತ್ತಿದ್ದ. ಹೀಗೆ ಬಡಪಾಯಿ ತನ್ನ ಪಾಡಿಗೆ ತಾನು ಬದುಕು ಸಾಗಿಸುತ್ತಿರುವಾಗ ಮಾಫಿಯಾ ತಂಡವೊಂದರ ಹಿಡಿತಕ್ಕೆ ಸಿಲುಕಿ ಕಷ್ಟಗಳನ್ನು ಅನುಭವಿಸಿ ಕೊನೆಗೆ ಅನಾಥವಾಗಿ ಸಾವನ್ನಪ್ಪುತ್ತಾನೆ. ಇಲ್ಲಿಗೆ ಕಥೆ ಮುಕ್ತಾಯವಾಗುತ್ತದೆ.

ಒಟ್ಟಾರೆಯಾಗಿ ಮೊಕಾಶಿಯವರ ಎಲ್ಲಾ ಕಥೆಗಳಲ್ಲೂ ಎದ್ದು ಕಾಣುವ ಅಂಶವೆಂದರೆ ಅದು ಜೀವನ ಪ್ರೀತಿ. ಇವರ ಪ್ರತಿಯೊಂದು ಕಥೆಗಳಲ್ಲೂ ವಾಸ್ತವತೆಯ ಗುರುತಿನ ಜೊತೆಗೆ ಆತ್ಮಶೋಧನೆಯ ನೆಲೆ ಕಾಣುತ್ತದೆ. ಹೀಗಾಗಿ ಎಲ್ಲಾ ಕಥೆಗಳು ಓದುಗರ ಮನಸೂರೆಗೊಳಿಸುವ ಜೊತೆಗೆ ಅವರನ್ನು ಒಂದು ಅತೀತವಾದ ಚಿಂತನೆಗೆ ಒಳಗು ಮಾಡುತ್ತವೆ. ಬದುಕಿನ ದ್ವಂದ್ವತೆಯನ್ನು ತಮ್ಮ ಕಥೆಗಳ ನಿರೂಪಣಾ ಹಂದರದಲ್ಲೇ ತೆರೆದಿಟ್ಟಿರುವ ಇವರು ಅಸ್ತಿತ್ವದ ಹುಡುಕಾಟದೊಂದಿಗೆ ಮನುಷ್ಯ ಸಂಬಂಧಗಳ ಮಹತ್ವವನ್ನು ತಿಳಿಸಲು ಪ್ರತಿಯೊಂದು ಪಾತ್ರವನ್ನು ಯಶಸ್ವಿಯಾಗಿ ಬಳಸಿಕೊಂಡಿದ್ದಾರೆ. ವ್ಯಕ್ತಿತ್ವದ ಸ್ವ ವಿಮರ್ಶೆಯೊಂದಿಗೆ ವರ್ತಮಾನದ ಬದುಕು ಪಶ್ಚಾತ್ತಾಪದಿಂದ ತುಂಬಿರುತ್ತದೆ ಎಂಬ ಆಶಯದ ಶೋಧನೆಯೊಂದಿಗೆ ಅದ್ಭುತವಾದ ತಾಂತ್ರಿಕ ಕೌಶಲವನ್ನು ಕಥೆಗಳು ಒಳಗೊಂಡಿವೆ. ಕಥೆಗಾರರು ಅಭಿವ್ಯಕ್ತಿಸುವ ಸಂವಹನ ಪ್ರತಿಕ್ರಿಯೆಯ ಉತ್ತಮ ಗುಣದಿಂದಾಗಿ ಇಲ್ಲಿಯ ಕಥೆಗಳು ಹೊಸತನವನ್ನು ಸಾಧಿಸುತ್ತವೆ. ಹಾಗಾಗಿ ಈ ಕಥೆಗಳ ನಿದರ್ಶನಗಳನ್ನಿಟ್ಟುಕೊಂಡೇ ಶಂಕರ ಮೊಕಾಶಿ ಪುಣೇಕರ ಅವರು ಕನ್ನಡ ಸಾಹಿತ್ಯದ ಕಥಾಲೋಕ ಕಂಡ ಪ್ರಸಿದ್ಧ ಕಥೆಗಾರರೆಂದು ಹೇಳಬಹುದು.

ಪರಾಮರ್ಶನ ಗ್ರಂಥಗಳು :

1. ಅವಧಾನಿ ಜಿ.ಎಸ್, (ಸಂ), 1992, ಸಾಹಿತ್ಯ ವಿಮರ್ಶೆ1991, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
2. ಅಶೋಕ ಟಿ.ಪಿ, 2020, ಮೊಕಾಶಿ ಕಥನ, ಅಭಿನವ ಪ್ರಕಾಶನ, ಬೆಂಗಳೂರು
3. ಹರೀಶ ಜಿ.ಬಿ, 2012, ಶಂಕರ ಮೊಕಾಶಿ ಪುಣೇಕರ ಸಮಸ್ತ ಸಾಹಿತ್ಯ 1, ಅಭಿನವ ಪ್ರಕಾಶನ, ಬೆಂಗಳೂರು.
4. ಹರೀಶ ಜಿ.ಬಿ, 2012, ಶಂಕರ ಮೊಕಾಶಿ ಪುಣೇಕರ ಸಮಸ್ತ ಸಾಹಿತ್ಯ 2, ಅಭಿನವ ಪ್ರಕಾಶನ, ಬೆಂಗಳೂರು.
5. ಹರೀಶ ಜಿ.ಬಿ, 2012, ಶಂಕರ ಮೊಕಾಶಿ ಪುಣೇಕರ ಸಮಸ್ತ ಸಾಹಿತ್ಯ 3, ಅಭಿನವ ಪ್ರಕಾಶನ, ಬೆಂಗಳೂರು.
6. ಹರೀಶ ಜಿ.ಬಿ, 2012, ಶಂಕರ ಮೊಕಾಶಿ ಪುಣೇಕರ ಸಮಸ್ತ ಸಾಹಿತ್ಯ 4, ಅಭಿನವ ಪ್ರಕಾಶನ, ಬೆಂಗಳೂರು.
7. ನಾಗಭೂಷಣ ಸ್ವಾಮಿ ಓ.ಎಲ್., 2014, ವಿಮರ್ಶೆಯ ಪರಿಭಾಷೆ, ಅಭಿನವ ಪ್ರಕಾಶನ, ಬೆಂಗಳೂರು.
8. ಉಪಾಧ್ಯ ಜಿ.ಎನ್, 2009, ಶಂಕರ ಮೊಕಾಶಿ ಪುಣೇಕರ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

***

ಜನಪದರು ಮತ್ತು ಭೂಮಿಯ ಒಡನಾಟ

1
ಡಾ. ಶಿವಾನಂದ ಬ. ಟವಳಿ
ಸಹಾಯಕ ಪ್ರಾಧ್ಯಾಪಕರು, ಭಾಷಾ ವಿಭಾಗ,
ಕ್ರೈಸ್ಟ್ ವಿಶ್ವವಿದ್ಯಾಲಯ,
ಬೆಂಗಳೂರು–29

ಜನಪದರ ಬದುಕು ಎಂದೆಂದೂ ಬತ್ತದ ಸಮೃದ್ಧ ಸಂಸ್ಕೃತಿಯ ಸೆಲೆ. ಅಂತಹ ಬದುಕಿನ ಅವಿಭಾಜ್ಯ ಅಂಗಗಳೆಂದರೆ ಅವರ ರೂಢಿ, ಸಂಪ್ರದಾಯ ಮತ್ತು ಆಚರಣೆಗಳು. ದೈನಂದಿನ ನಡೆ–ನುಡಿಗಳಲ್ಲಿ ಸುಖ–ದುಃಖ, ನೋವು–ನಲಿವು ಎಲ್ಲವೂ ಇದೆ. ಪರಿಸರದಲ್ಲಿ ಸಾವಿರಾರು ಪ್ರಭೇದದ ಸಸ್ಯ ಮತ್ತು ಜೀವಿಗಳು ವಾಸಿಸುತ್ತವೆ. ಇವುಗಳಲ್ಲಿ ಹೆಚ್ಚಾಗಿ ಜನಪದರ ಬಳಕೆಯಲ್ಲಿರುವ ಜೀವಿ ಮತ್ತು ಸಸ್ಯಗಳು ಜನಪದರೊಂದಿಗೆ ಸಂಬಂಧ ಹೊಂದಿವೆ. ಜನಪದರು ಕೇವಲ ಮಾನವೀಯ ಸಂಬಂಧಗಳನ್ನು ಮಾತ್ರ ಹೊಂದಿಲ್ಲ. ಅವರು ಪ್ರಕೃತಿ, ಭೂಮಿ, ಬಸವ, ದೈವ, ನದಿ, ಮಳೆ, ಪ್ರಾಣಿ, ಪಕ್ಷಿ ಮುಂತಾದವುಗಳೊಂದಿಗೆ ಭಾವನಾತ್ಮಕ ಸಂಬಂಧವನ್ನು ಹೊಂದಿದ್ದಾರೆ. ಏಕೆಂದರೆ ತನ್ನ ದಿನನಿತ್ಯದ ಬದುಕಿನಲ್ಲಿ ಅವು ನೀಡುವ ಕಾಣಿಕೆಯನ್ನು ಮರೆಯದೆ ತಮ್ಮಂತೆಯೇ ಅವುಗಳಿಗೆ ಜೀವನವಿದೆ ಎಂದು ಕೃತಜ್ಞತಾ

ಭಾವದಲ್ಲಿ ಸ್ಮರಿಸುತ್ತಾರೆ. ಪೋಷಿಸುತ್ತಾರೆ. ಸಾಕುತ್ತಾರೆ. ನಮಿಸುತ್ತಾರೆ. ಬಹುಪಾಲು ಜನಪದರು ಕೃಷಿಕರಾಗಿರುವುದರಿಂದ ಕೃಷಿಗೆ ನೆರವಾಗುವ ಬಸವ(ಎತ್ತು)ನೊಂದಿಗೆ ವಿಶೇಷವಾಗಿ ತಮ್ಮದೇ ಆದ ಭಾವಲೋಕವನ್ನು ಜನಪದರು ಸೃಜಿಸಿದ್ದಾರೆ. ನಮ್ಮ ಜನಪದರು ಮಣ್ಣಿನ ಮಕ್ಕಳು. ತಾವಾಡುವ ಮಾತನ್ನೇ ಕೃತಿಯನ್ನಾಗಿಸಿದ್ದಾರೆ. ಅವರ ಪ್ರತಿಭಾದರ್ಶನಕ್ಕೆ ಜನಪದ ಸಾಹಿತ್ಯವೇ ಸಾಕ್ಷಿ.

ಪ್ರಕೃತಿ, ಭೂಮಿ, ಮಳೆ, ದೇವರು, ಪ್ರಾಣಿ ಪಕ್ಷಿ ಮುಂತಾದವುಗಳು ಜನಪದರ ಗ್ರಹಿಕೆಗೆ ಬರುವುದಾದರೆ ಅವು ಮನುಷ್ಯನ ಪ್ರಜ್ಞಾವಲಯವನ್ನು ಪ್ರವೇಶಿಸುವುದು ಎಂದರ್ಥ. ಹಾಗೆಂದರೆ ಇವು ತಮ್ಮದೇ ಸಮೂಹದಲ್ಲಿ ಸಾಧ್ಯವಿಲ್ಲದ, ಮಾನವ ಸಂಸ್ಕೃತಿಯಲ್ಲಿ ಸಾಧ್ಯವಿರುವ ವ್ಯಕ್ತಿತ್ವವನ್ನು ಪಡೆಯುವುದು ಜೊತೆಗೆ ಭಿನ್ನ ಸಂಸ್ಕೃತಿಯಾಗುವುದು. ಹೊರಗೆ ಸಾಮಗ್ರಿ ಸ್ವರೂಪ ಮಾತ್ರವಾಗಿದ್ದ ಮಳೆ, ಪ್ರಕೃತಿ, ಭೂಮಿ, ದೇವರು, ಪ್ರಾಣಿಪಕ್ಷಿ ಇವು ಮಾನವ ಪ್ರಜ್ಞೆಯಲ್ಲಿ ದಾಖಲಾಗುತ್ತವೆ. ಅದು ಯಾವಾಗ ಅಂದರೆ, "ಮಾನವನ ಸಾಂಸ್ಕೃತಿಕ ದಾಖಲೆಗಳಾದ ಹುಟ್ಟು, ನಾಮಕರಣ, ಸಂಬಂಧ, ಸಾವು ಮುಂತಾದ ಆಚರಣೆಗಳಲ್ಲಿ ಆಶಯವಾಗಿ ಬರುವುದು. ಇವು ಆಶಯವಾಗುವುದನ್ನೇ ಅಭಿವ್ಯಕ್ತಿ ಎಂದು ಕರೆಯುವುದು".[1] ಜನಪದ ನಂಬಿಕೆ, ನಡವಳಿಕೆ, ಆಚಾರ–ವಿಚಾರ, ಸಾಹಿತ್ಯ, ಭಾಷೆ ಇವೆಲ್ಲ ಜನಪದರ ಆಶಯಗಳ ಅಭಿವ್ಯಕ್ತಿಗಳು ಆದುದರಿಂದ ಜನಪದರು ಹೊಂದಿರುವ ಮಾನವೇತರ ಸಂಬಂಧಗಳನ್ನು ಅಲ್ಲಗಳೆಯುವಂತಿಲ್ಲ.

ಜನಪದರು ನಿಸರ್ಗ ಮತ್ತು ಜೀವ ಜಗತ್ತಿನೊಂದಿಗೆ ಅಚಲ ನಂಬಿಕೆ ಇಟ್ಟುಕೊಂಡಿದ್ದಾರೆ. ಅವರಿಗೆ ಮಳೆ, ಭೂಮಿ, ಎತ್ತು, ಬೆಳೆ, ಗಾಳಿ ಮೊದಲಾದವುಗಳಲ್ಲಿ ನಂಬಿಕೆ. ನೆಲ ಸಲಹುವ ತಾಯಿ, ಜಲ ಜೀವದಾಯಿ ಎಂಬ ನಂಬಿಕೆಯಿಂದಲೇ ತಮ್ಮ ದೈನಂದಿನ ಜೀವನಕ್ಕೆ ಬೇಕಾದ ವಸ್ತುಗಳನ್ನು, ಪ್ರಾಣಿಗಳನ್ನು ಬಳಸುತ್ತ ಬಂದಿದ್ದಾರೆ. ಅಂತೆಯೇ ಅವುಗಳನ್ನು ತಮ್ಮ ಜೀವನದ ಅವಿಭಾಜ್ಯ ಅಂಗಗಳೆಂದು ನಂಬಿದ್ದಾರೆ. ಪ್ರಕೃತಿಯಲ್ಲಿನ ಮರ, ಕಂಬ, ಕಲ್ಲುಗಳನ್ನು ಬದುಕಿಗೆ ನೆರವಾಗುವ ಎತ್ತು, ಹಸು, ಸಾಕುಪ್ರಾಣಿಗಳನ್ನು, ಸೃಷ್ಟಿಕಾರ್ಯಕ್ಕೆ ನೆರವಾದ ನೀರು, ಮಳೆ, ಭೂಮಿಯನ್ನು ಹೆಣ್ಣುಮಕ್ಕಳ ನಿತ್ಯ ಜೀವನದಲ್ಲಿ ಉಪಯೋಗವಾಗುವ ಮೊರ, ಒನಕೆ, ಬೀಸುವಕಲ್ಲುಗಳನ್ನು ಗಂಡಸರ ನಿತ್ಯ ಜೀವನದಲ್ಲಿ ಒಕ್ಕಲುತನಕ್ಕೆ ನೆರವು ನೀಡುವ ರಂಟೆ, ಕುಂಟೆ, ಕೂರಿಗೆ, ಬಂಡಿಗಳನ್ನು ಒಂದಲ್ಲ ಒಂದು ಕಾರಣದಿಂದ ಸ್ಮರಿಸಿ ಕೃತಜ್ಞತೆಯನ್ನು ಅರ್ಪಿಸುತ್ತಾರೆ. ಜನಪದರು ಅವುಗಳೊಂದಿಗೆ ಒಂದು ವಿಶೇಷ

ಬಾಂಧವ್ಯವನ್ನು ಹೊಂದಿದ್ದಾರೆ.

ಪಂಚಭೂತಗಳಾದ ಅಗ್ನಿ, ವಾಯು, ವರುಣ, ಭೂಮಿ ಮತ್ತು ಆಕಾಶಗಳನ್ನು ಸಾಕಷ್ಟು ಹಿಂದಿನಿಂದಲೂ ಮಾನವರು ಗುರುತಿಸುತ್ತ ಬಂದಿದ್ದಾರೆ. ಪಂಚಭೂತಗಳನ್ನು ಸಹ ಜನಪದರು ತಮ್ಮ ಬದುಕಿನ ಮೂಲ ನೆಲೆ ಸೆಲೆಯೆಂದು ಪೂಜ್ಯ ಭಾವನೆಯಿಂದ ಕಾಣುತ್ತಾರೆ. ಹಬ್ಬ–ಹರಿದಿನಗಳಲ್ಲಿ ಇಲ್ಲವೇ ಯಾವುದಾದರೊಂದು ನೆಪದಲ್ಲಿ ಪಂಚಭೂತಗಳನ್ನು ಸ್ಮರಿಸಿ ಪೂಜಿಸುತ್ತಾರೆ. ಅಗ್ನಿ, ವಾಯು, ವರುಣ, ಭೂಮಿ ಮತ್ತು ಆಕಾಶ ಇವು ಪುರಾಣದಲ್ಲಿ ದಾಖಲಾಗಿರುವ ಪಂಚಭೂತಗಳಾಗಿವೆ. ಇವು ಇಂದ್ರನ ಒಡ್ಡೋಲಗದ ದೇವತೆಗಳಾದ್ದರಿಂದ ನಾವು ಸ್ಮರಿಸಬೇಕೆಂಬ ಕಲ್ಪನೆ ಜನಪದರಲ್ಲಿ ಇಲ್ಲ. ತಮಗೆ ನೆರವಾದ ಸಕಲ ಚರಾಚರಗಳನ್ನು ಗೌರವಿಸುವುದು ಜನಪದರ ಸಂಸ್ಕೃತಿ. ಆದ್ದರಿಂದ ಜನಪದರಲ್ಲಿ ಸ್ಮರಣೆ, ಪೂಜೆಯು ಸಂಪ್ರದಾಯವಾಗಿ ಬಂದಿದೆ.

ಆಧುನಿಕತೆ ಇಂದು ಜನಜೀವನದ ಮೇಲೆ ಹೆಚ್ಚು ಪ್ರಭಾವ ಬೀರಿದೆ. ಪ್ರಕೃತಿಯಿಂದ ಬೇರ್ಪಟ್ಟ ಮಾನವನ ಬದುಕು ರೂಪುಗೊಳ್ಳುತ್ತದೆ. ಕೃತಕ ವಾತಾವರಣ ಉಂಟಾಗುತ್ತಿದೆ. ಪ್ರಾಣಿ, ಪಕ್ಷಿ, ಪರಿಸರದೊಂದಿಗಿನ ಒಡನಾಟದಿಂದ ಜನರು ದೂರವಾಗುತ್ತಿದ್ದಾರೆ. ಕಾಡಿನ ನಾಶದಿಂದ, ನಗರೀಕರಣದಿಂದ ಅಪೂರ್ವ ಸಂಸ್ಕೃತಿಯ ಮೇಲೆ ಸಾಕಷ್ಟು ಪರಿಣಾಮ ಬೀರುತ್ತಲಿವೆ. ಅದನ್ನು ಬಳಸಿಕೊಳ್ಳುವ ಪ್ರಯತ್ನವನ್ನು ಯಾರೂ ಮಾಡಿದಂತೆ ತೋರುತ್ತಿಲ್ಲ. ನಗರಾಕರ್ಷಣೆಯತ್ತ ಚಿತ್ತ ಹರಿದು ಗ್ರಾಮೀಣ ಸಂಸ್ಕೃತಿ ಇಲ್ಲವಾಗುತ್ತಿದೆ. ಕೋಗಿಲೆಯ ದನಿ, ಗುಬ್ಬಿಯ ಗೂಡು, ಹಸು ಕರುವಿನ ಕರೆ, ಎತ್ತಿನ ಗಂಟೆಯನಾದ, ಚಿಲಿಪಿಲಿ ಹಕ್ಕಿಗಳ ಕಲರವ, ಮಾರ್ದನಿಸುವ ಕಾಡುಮೃಗಗಳ ಘರ್ಜನೆ ಇವುಗಳೊಂದಿಗೆ ಮಾನವನ ಬೆಸೆದುಕೊಂಡಿದ್ದ ಬದುಕು ಆಧುನಿಕತೆಯ ನೆಪದಲ್ಲಿ ಅವುಗಳೊಂದಿಗೆ ಸಂಬಂಧವನ್ನು ಕಡಿದುಕೊಂಡಿದೆ. ಅಲ್ಲದೇ ಪ್ರಾಣಿ ಸಾಕುವ, ಪಕ್ಷಿ ಸಾಕುವ, ಸಸಿ ನೆಡುವ ಮತ್ತು ಬೆಳೆಸುವ ಸುಂದರ ಸಂಸ್ಕೃತಿಯ ಅಂತ್ಯಕ್ಕೆ ಮಾನವ ಕುಲವೇ ಕಾರಣವೆನಿಸಿದೆ. ಒಂದು ವೇಳೆ ಜನ–ಜಾನುವಾರು, ಪ್ರಕೃತಿಯೊಂದಿಗೆ ಒಡನಾಟ ಶುರುವಾದಲ್ಲಿ ಜನಪದರ ಬದುಕಿನ ಆದರ್ಶಗಳನ್ನು ಉಳಿಸಿಕೊಂಡಂತೆ ಜೊತೆಗೆ ಪ್ರಕೃತಿಯನ್ನು ಉಳಿಸಿ ಬೆಳೆಸಿದಂತಾಗುತ್ತದೆ.

ಜನಪದರಲ್ಲಿ ಮಾನವೀಯ ಒಡನಾಟಗಳ ಹೊರತಾಗಿ ಮಾನವೇತರ ಒಡನಾಟಗಳು ಕಂಡುಬರುತ್ತವೆ. ಮಾನವನು ಕೇವಲ ಮಾನವರೊಂದಿಗೆ ಬಾಂಧವ್ಯ ಬೆಳೆಸಿಲ್ಲ. ತನ್ನ ದಿನನಿತ್ಯದ ಬದುಕಿಗೆ ಸಹಾಯವಾಗುವ ಭೌತಿಕ ವಸ್ತುಗಳೊಡನೆ ಭಾವನಾತ್ಮಕ ಸಂಬಂಧ ಹೊಂದಿದ್ದಾನೆ. ಗ್ರಾಮೀಣ ಪರಂಪರೆಯಲ್ಲಿ ಜನರು ದೇವರು,

ಭೂಮಿ, ಮಳೆ, ಎತ್ತುಗಳೊಂದಿಗೆ ಭಾವನಾತ್ಮಕ ಸಂಬಂಧವನ್ನು ಹೊಂದಿದ್ದಾರೆ ಎಂಬುದನ್ನು ಪರಿಚಯಿಸುವ ಪ್ರಯತ್ನ ಇಲ್ಲಿ ನಡೆದಿದೆ. ಜೊತೆಗೆ ಒಡನಾಟದ ಭೂಮಿಯ ಕುರಿತು ಜನಪದರು ತಮ್ಮ ಸಾಹಿತ್ಯದಲ್ಲಿ ಹೇಗೆ ಅಭಿವ್ಯಕ್ತಿಸಿದ್ದಾರೆ? ಎಂಬುದನ್ನು ಈ ಬರಹದಲ್ಲಿ ವಿಶ್ಲೇಷಿಸಲಾಗಿದೆ.

ಜನಪದರ ಸ್ತುತಿಯಲ್ಲಿ ಮೊದಲ ಪ್ರಾಶಸ್ತ್ಯ ಭೂದೇವಿಗೆ ಸಲ್ಲುತ್ತದೆ. ಬೇಟೆ ವೃತ್ತಿಯಿಂದ ಕೃಷಿಗೆ ಬಂದ ಮೇಲೆ ಸಂಪೂರ್ಣವಾಗಿ ಭೂಮಿಯನ್ನು ಅವಲಂಬಿಸುವುದು ಅನಿವಾರ್ಯವಾಯಿತು. ಭೂಮಿಯಿಂದಲೇ ಮಾನವನ ಬದುಕು. ಬದುಕಿನ ಸರ್ವಸ್ವವೂ ಆದ ಭೂಮಿ ತಾಯಿಗೆ ಮೊದಲ ಸ್ಥಾನ ಕೊಡುವುದು ಅರ್ಥಪೂರ್ಣವೂ ಕೂಡ. ಹಾಸಿಗೆಯಿಂದ ಎದ್ದು ಹಿಟ್ಟು ಬೀಸುವ ಕಾಯಕಕ್ಕೆ ತೊಡಗುವ ಮೊದಲು ಜನಪದ ಮಹಿಳೆಗೆ ಥಟ್ಟನೆ ನೆನಪಾಗುವುದು ಭೂಮಿತಾಯಿ. ಭೂಮಿತಾಯಿಯನ್ನು ಅನೇಕ ಕಾರಣಗಳಿಗಾಗಿ ಸ್ಮರಣೆ ಮಾಡಬಹುದು. ಜನಪದ ಮಹಿಳೆಗೆ ಅದು ಮುಖ್ಯವಲ್ಲ. ಅವಳಿಗೆ ಭೂಮಿತಾಯಿ ಮುಖ್ಯವೆನಿಸುವುದು ಎಳ್ಳು ಜೀರಿಗೆಯನ್ನು ಬೆಳೆಯುವುದರಿಂದ. ಎಳ್ಳು ಜೀರಿಗೆ ಎಂತಹ ಅತಿ ಸಣ್ಣ ವಸ್ತುಗಳನ್ನು ಬೆಳೆಯಲು ಸಾಧ್ಯವಾಗುವುದು ಭೂಮಿಯಿಂದಲೇ. ಅಂತಹ ವಿಶಿಷ್ಟ ಶಕ್ತಿ ಇರುವುದು ಭೂಮಿಗೆ ಮಾತ್ರ. ಭೂಮಿಯ ಆ ಶಕ್ತಿಗೆ ಜನಪದ ಮಹಿಳೆ ಮೂಕವಿಸ್ಮಿತಳಾಗಿ ಮೊದಲ ನಮನವನ್ನು ಸಲ್ಲಿಸುತ್ತಾಳೆ. ತಾಯಿಯು ತನ್ನ ಗರ್ಭದಲ್ಲಿ ಮಗುವೊಂದನ್ನು ಒಂಬತ್ತು ತಿಂಗಳಿಟ್ಟುಕೊಂಡು ಹೆತ್ತು ಹೊತ್ತು ಸಾಕುತ್ತಾಳೆ. ಆ ತಾಯಿಗೆ ಗೊತ್ತು ಮಗುವಿನ ಪಾಲನೆ ಪೋಷಣೆಯ ಶ್ರಮ. ಸಮಸ್ತ ಮಾನವ ಕುಲವನ್ನೇ ತನ್ನ ಗರ್ಭದಲ್ಲಿಟ್ಟುಕೊಂಡು ಸಾಕುತ್ತಿರುವ ಭೂದೇವಿ ಶ್ರಮ ಅನಂತವಾದುದು ಎಂದು ನಂಬಿದ ಜನಪದರಿಗೆ ಅವಳಿಗೆ ಮೊದಲ ನಮನವನ್ನು ಸಲ್ಲಿಸುತ್ತಾರೆ.

ಸಂಬಂಧಗಳ ಮೂಲನೆಲೆ ಮಾನವನ ಹೃದಯ. ಅವನು ತನ್ನಲ್ಲಿಯ ಸ್ವಾರ್ಥ ಅಹಂಕಾರವನ್ನು ತೊರೆದಾಗ ಮಾತ್ರ ಇತರರಿಗೆ ಪ್ರಿಯನಾಗುತ್ತಾನೆ. ತನ್ನನ್ನು ಪೋಷಿಸುವ, ಪ್ರೀತಿಸುವ ಪ್ರತಿಯೊಂದು ವಸ್ತುವಿನೊಡನೆ ಅವಿನಾಭಾವ ಸಂಬಂಧವಿಟ್ಟುಕೊಂಡಿದ್ದಾನೆ. ಅಂತೆಯೇ ಜನಪದರು ತಮಗೆ ನೆಲೆ ನೀಡಿದ, ಬದುಕಿಗೆ ಮಾರ್ಗ ತೋರಿದ ಭೂಮಿಯೊಂದಿಗೆ ಭಾವನಾತ್ಮಕ ಒಡನಾಟ ಹೊಂದಿದ್ದಾರೆ. ರೈತರಾದ ಜನಪದರಿಗೆ ಬೆಳಗು–ಬೈಗುಗಳಾಗುವುದು ಹೊಲದಲ್ಲಿಯೇ ಸೂರ್ಯೋದಯಕ್ಕೂ ಮುನ್ನ ಹೊಲಕ್ಕೆ ತೆರಳಿದ ರೈತರು ಮತ್ತೆ ಮನೆಗೆ ಬರುವುದು ಸೂರ್ಯಾಸ್ತವಾದ ಮೇಲೆಯೇ. ಇದು ಅವರ ನಿತ್ಯದ ಕಾಯಕ. ಯಾವಾಗಲೂ

ಪರಿಶ್ರಮದಿಂದ ದುಡಿಯುವ ರೈತನಿಗೆ ನೆಲವೇ ಸರ್ವಸ್ವ. ಒಕ್ಕಲುತನದ ಪ್ರತಿಯೊಂದು ಚಟುವಟಿಕೆಗಳಲ್ಲೂ ಆತನಿಗೆ ಭೂಮಿಯೇ ಆಸರೆ. ಆತನ ಪ್ರತಿಯೊಂದು ಉದಯವು ಭೂಮಿಯೊಂದಿಗೆ ಬೆಸೆದಿದೆ. ಭೂಮಿಯನ್ನು ದೇವರಾಗಿಯೂ, ಹೊತ್ತ ತಾಯಿಯಾಗಿಯೂ ಕಂಡವನು ರೈತ. ಆತನಿಗೆ ಭೂಮಿಗಿಂತ ದೊಡ್ಡ ದೇವರಿಲ್ಲ. ಪ್ರತಿ ಉದಯ, ಪ್ರತಿ ಗಳಿಗೆಯೂ ಭೂತಾಯಿಯ ಸ್ಮರಣೆಯೇ ಆತನ ಉಸಿರಾಗಿದೆ. ರೈತನ ಮೊದಲ ಸ್ತುತಿಯೂ ಕೂಡ ಭೂತಾಯಿಯ ಕುರಿತಾಗಿದೆ.

ಏಳುತಲೆದ್ದು ಯಾರ‍್ಯಾರ ನೆನೆದ್ಹೇವು
ಎಳ್ಳು ಜೀರಿಗೆಯ ನೆನೆದ್ಹೇವು । ಭೂಮಿತಾಯೀಯ
ಎದ್ದೊಂದರ ಘಳಿಗೆ ನೆನೆದ್ಹೇವು ।[2]

ಮೇಲ್ಕಂಡ ತ್ರಿಪದಿಯು ಭೂದೇವಿಯ ನಿತ್ಯ ಸ್ಮರಣೆಗೆ ಸಾಕ್ಷಿ. ರೈತನು ಮುಂಜಾನೆದ್ದು ತನಗೆ ಅನ್ನ-ಆಶ್ರಯ ನೀಡಿರುವ ಭೂಮಿಯನ್ನು ನೆನೆಯುವ ಕಾರ್ಯ ಮಾಡುತ್ತಿದ್ದಾನೆ. ಆತನಿಗೆ ಭೂಮಿ ಕೇವಲ ಭೂಮಿಯಲ್ಲ, ಬದಲಾಗಿ ಭೂದೇವಿ, ಭೂತಾಯಿಯಾಗಿದ್ದಾಳೆ. ಭೂತಾಯಿ ಬಿಟ್ಟು ಆತನಿಗೆ ಅನ್ಯದೈವವೇ ಇಲ್ಲ. ಸಕಲ ಜೀವಾತ್ಮಕ್ಕೂ, ಗಿಡಮರ ಬಳ್ಳಿಗಳಿಗೂ ಉಸಿರಾಗಿರುವ ಭೂಮಿಯೇ ಆತನ ದೈವ. ವರ್ಷದುದ್ದಕ್ಕೂ ಉತ್ತುವ, ಬಿತ್ತುವ, ಬೆಳೆಯುವ ಹಾಗೂ ಒಕ್ಕಲುಮಾಡುವ ಕಾರ್ಯದಲ್ಲಿ ನಿರತನಾದ ಆತನಿಗೆ ಭೂಮಿ ಬದುಕನ್ನು ಕಲ್ಪಿಸಿಕೊಟ್ಟಿದೆ. "ಜಾನಪದ ಕವಿಗಳು ಅಥವಾ ಕವಯಿತ್ರಿಯರು ದೃಗ್ಗೋಚರವಲ್ಲದ ದೂರದ ದೇವತೆಗಳನ್ನು ನೆನೆಯದೆ ಕಣ್ಣಿಗೆ ಕಾಣುವ ಎಲ್ಲರ ಇರುವಿಗೂ ಆಶ್ರಯ ಭೂತಳದ ಭೂದೇವಿಯನ್ನು ಮೊದಲು ಸ್ಮರಿಸಿಕೊಳ್ಳುತ್ತಾರೆ." ಎಂಬುದಾಗಿ ಸಿ.ಪಿ.ಕೆ. ಅವರು ಭೂದೇವಿಯ ಸ್ಮರಣೆ ಉದ್ದೇಶವನ್ನು ಸ್ಪಷ್ಟಪಡಿಸುತ್ತಾರೆ.

ಕಲ್ಲು ಹಿಡೆದೆವು ಕಲ್ಯಾಣಿ ನೆನೆದೇವು
ಕಲ್ಲೀಗೆ ರಾಗಿ ಕೊಡುವಾಳ । ಭೂಮಿ ತಾಯೀಯ
ನಾವು ಎದ್ದೊಂದರ ಘಳಿಗೆ ನೆನೆದ್ಹೇವು ।[3]

ರೈತನ ಬದುಕು ಕ್ಷೇಮದಿಂದ ಇರಬೇಕಾದರೆ ಕಾಲಕಾಲಕ್ಕೆ ಉತ್ತಮ ಮಳೆಯೂ ಆಗಬೇಕು. ಏಕೆಂದರೆ ಮಳೆಯಿಲ್ಲದೆ ಬೆಳೆಯಿಲ್ಲ. ಭೂಮಿಗೆ ಮಳೆ ಬೀಳದೆ ಹೊರತು ಕ್ಷೇಮವಿಲ್ಲ. ಮಳೆಯಿಂದ ರೈತನ ಮೊಗದ ಕಳೆ ಹೆಚ್ಚುತ್ತದೆ. ಬಿತ್ತಿದ ಹೊಲಗಳಿಗೆ ಮಳೆ ಹುಯ್ಯದಿದ್ದರೆ ರೈತನ ಬದುಕಿನ ಮಾರ್ಗ ಕೆಟ್ಟುಬಿಡುತ್ತದೆ. "ಜಾನಪದರಿಗೆ ಆಕಾಶವೇ ತಂದೆ. ಭೂಮಿಯೇ ತಾಯಿ. ಈ ತಾಯಿ ಸಹನಶೀಲಳು. ಏನೆಲ್ಲವನ್ನು

ಬೆಳೆದುಕೊಟ್ಟು ನಮ್ಮನ್ನೆಲ್ಲ ಸಂರಕ್ಷಿಸುವಳೆಂದು ಭೂಮಿ ತಾಯಿಯ ಬಗ್ಗೆ ಅಪಾರ ಭಯ ಭಕ್ತಿಯಿದೆ."[೪] ಭೂಮಿತಾಯಿ ಬರಡಲ್ಲ ಎನ್ನುತ್ತ ಮಳೆಯಾದ ಸಂದರ್ಭದಲ್ಲಿ ಹರ್ಷಗೊಳ್ಳುತ್ತಾನೆ. ಬಿತ್ತಿದ ಬೆಳೆಯು ಹುಲಸಾಗಿ ಬೆಳೆದು ಕಣ ತುಂಬಿ ಬರಬೇಕೆಂಬುದು ಆತನ ಹಾರೈಕೆ. ಕಷ್ಟಜೀವಿಯಾದ ರೈತ ಯಾವುದೇ ಕೆಲಸವಾದರೂ ಸರಿಯೇ ಅಚ್ಚುಕಟ್ಟಾಗಿ ಉತ್ಸಾಹದಿಂದ ಮಾಡುತ್ತಾನೆ. ಅವನು ಬಯಸುವುದು ಕಷ್ಟಕ್ಕೆ ತಕ್ಕ ಪ್ರತಿಫಲ. ಪೈರು ಚೆನ್ನಾಗಿ ಬೆಳೆದುಬಿಟ್ಟರೆ ಸಾಕು ಆತನ ಆನಂದಕ್ಕೆ ಪಾರವೇ ಇಲ್ಲ.

ಪ್ರತಿಯೊಂದು ಸಂದರ್ಭದಲ್ಲಿಯೂ ಜನಪದರು ಭೂಮಿಯ ಪೂಜೆ ಮಾಡುತ್ತಾ ಬಂದಿದ್ದಾರೆ. ಪ್ರತಿ ಕಾರ್ಯದಲ್ಲಿಯೂ ಅಗ್ರಪೂಜೆ ಭೂಮಿಗೆ. ರೈತ ಮೊದಲು ಉಳುಮೆ ಮಾಡುವಾಗ, ಬಿತ್ತನೆ ಮಾಡುವಾಗ, ಭೂಮಿ ಹಸಿರಾದಾಗ, ಬೆಳೆದ ಫಸಲನ್ನು ಕಟಾವು ಮಾಡುವಾಗ, ಒಕ್ಕಲು ಮಾಡುವಾಗ, ಕಣ ಮಾಡುವಾಗ ರಾಶಿ ಮಾಡುವಾಗ ಮುಂತಾದ ಸಂದರ್ಭಗಳಲ್ಲಿ ಭೂಮಿಯನ್ನು ಪೂಜಿಸಿಯೇ ಮುಂದುವರೆಯುತ್ತಾನೆ. ಹಬ್ಬಹರಿದಿನಗಳಲ್ಲಿಯೂ ಅಮವಾಸ್ಯೆ–ಹುಣ್ಣಿಮೆಗಳಲ್ಲಿಯೂ ಆತ ಭೂದೇವಿಯನ್ನು ಮರೆಯುವುದಿಲ್ಲ. ಜನಪದರಿಗೆ ಭೂಮಿಯೆಂದರೆ ವರಕೊಡುವ ದೈವ. ಬದುಕನ್ನು ಬಂಗಾರವಾಗಿಸುವ ಸಿರಿದೇವಿ. ಆದ್ದರಿಂದ ಬಡತವನ್ನು ಹೋಗಲಾಡಿಸಿ ಎಂದು ಅಂಗಲಾಚುತ್ತಾರೆ. ಭೂಮಿಯ ಬದಲಾಗಿ ಮಣ್ಣನ್ನು ಪೂಜಿಸುತ್ತಾರೆ.

ಮಣ್ಣನ್ನು ನಂಬಿ ಮಣ್ಣಿಂದ ಬದುಕೇನು
ಮಣ್ಣೆನಗೆ ಮುಂದೆ ಹೊನ್ನು । ಅಣ್ಣಯ್ಯ
ಮಣ್ಣೆ ಲೋಕದಲಿ ಬೆಲೆಯಾದ್ದು ।[5]

ಮಣ್ಣಿನ ಮಕ್ಕಳಾದ ಜನಪದರಿಗೆ ಮಣ್ಣಿಗಿಂತ ಬೆಲೆಯಾದ ಹೊನ್ನು ಬೇರೊಂದಿಲ್ಲ. ಮಣ್ಣಿನೆಂದರೆ ಅವರಿಗೆ ದೈವಸ್ವರೂಪ. "ಜನಪದರಿಗೆ ಭೂಮಿ ದೈವಕ್ಕೆ ಸಮ ಅಂತೆಯೇ ಹಲವು ಹಬ್ಬಗಳಲ್ಲಿ ಭೂಮಿ (ಮಣ್ಣು) ಪೂಜೆ ಮಾಡುತ್ತಾರೆ. ಅದಕ್ಕಾಗಿಯೇ ಮಣ್ಣಿನಿಂದ ಮಾಡಿದ ನಾಗಪ್ಪ, ಗಣಪ, ಗುಳ್ಳವ್ವ, ಬಸವ, ಗೌರಿ ಮತ್ತು ಕಾಮನ ಮೂರ್ತಿಗಳನ್ನು ಹಬ್ಬಗಳಲ್ಲಿ ಪೂಜಿಸುತ್ತಾರೆ."[6] ಹೀಗೆಯೇ ಮಣ್ಣೆತ್ತಿನ ಅಮವಾಸ್ಯೆಯ ದಿನದಂದು ಮಣ್ಣಿನ ಎತ್ತುಗಳ ಪೂಜೆ, ನಾಗರ ಪಂಚಮಿಯಂದು ನಾಗಮೂರ್ತಿ ಪೂಜೆ, ಚೌತಿಯಂದು ಗಣೇಶ ಪೂಜೆ, ವಿಜಯದಶಮಿಯಂದು ಭೂಮಿಯ ಪೂಜೆ, ಸೀಗೆ ಹುಣ್ಣಿಮೆಯಂದು ಸೀಗವ್ವ (ಭೂಮಿ)ನ ಪೂಜೆ ವಿಧ ವಿಧ ರೀತಿಯಲ್ಲಿ ಮಣ್ಣನ್ನು ಶ್ರದ್ಧೆ ಭಕ್ತಿಯಿಂದ ಜನಪದ ರೈತರು ಪೂಜಿಸುತ್ತ ಬಂದಿದ್ದಾರೆ.

ಎಲ್ಲ ಹಬ್ಬಗಳಲ್ಲೂ ಮಣ್ಣನ್ನು ಮರೆಯದೇ ಪೂಜಿಸುವ ಸಂಪ್ರದಾಯ ಜನಪದರಲ್ಲಿದೆ. ಅಲ್ಲದೇ ಭೂದೇವಿಗೆ ನಾನಾ ರೀತಿಯ ಅಡುಗೆಗಳನ್ನು ಮಾಡಿ ನೈವಿದ್ಯ ಮಾಡುವ ರೈತನು ಹೊಲಗಳಿಗೆ 'ಚರಗ' ಚೆಲ್ಲುತ್ತಾನೆ. ಒಂದು ಬೆಳೆಯ ಫಸಲು ಮನೆಗೆ ಬರುವಷ್ಟರಲ್ಲಿಯೇ ಮೂರು ಸಲ ಚರಗವನ್ನು ಭೂಮಿಗೆ ಚೆಲ್ಲುತ್ತಾನೆ.

ನಾಗರಪಂಚಮಿಯಂದು ಮಣ್ಣೆತ್ತಿನ ಅಮವಾಸ್ಯೆಯಂದು ಪೂಜಿಸುವ ಎತ್ತುಗಳನ್ನು ಹೊಲದಲ್ಲಿಟ್ಟು ಪೂಜಿಸಿ, ಮೊದಲ ಚರಗ ಭೂಮಿಗೆ ಅರ್ಪಿಸುತ್ತಾನೆ. ಎರಡನೆಯದಾಗಿ ಸೀಗೆ ಹುಣ್ಣಿಮೆಯ ದಿನದಂದು ಸೀಗವ್ವ ಅಂದರೆ ಭೂಮಿಯನ್ನು ಪೂಜಿಸಿ, ನಂತರ ತೆನೆಗಳು ತುಂಬಿಕೊಂಡಿರುವ ಭೂಮಿಗೆ ಚರಗ ಚೆಲ್ಲುತ್ತಾನೆ. ಮೂರನೆಯದಾಗಿ ಒಕ್ಕಲು ಮಾಡಿ ಕಣದಲ್ಲಿ ರಾಶಿಯನ್ನು ಮಾಡಿದಾಗ ಕಣದ ಹಬ್ಬ ಮಾಡಿ ಚರಗವನ್ನು ಭೂಮಿಗೆ ಚೆಲ್ಲುತ್ತಾನೆ. ತನಗೆ ಸಿರಿನೀಡಿದ ಭೂದೇವಿಗೆ ತಾನು ಪ್ರತಿಯಾಗಿ ಭಕ್ತಿಯನ್ನು ತೋರ್ಪಡಿಸುತ್ತಾನೆ.

ಬದುಕುವ ಭರವಸೆಯೇ ಭೂತಾಯಿ ಎಂದು ನಂಬಿದ ಜನಪದರಿಗೆ ಧನ್ಯತೆಯ ಭಾವ. ನೋವಿರಲಿ, ನಲಿವಿರಲಿ ಭೂದೇವಿಯ ಕುರಿತು, ಹಾಡುವ ಮೂಲಕ ಭಕ್ತಿಯನ್ನು ತೋರ್ಪಡಿಸಿದ್ದಾರೆ.

ಹೊಸಬಂಡಿ ಮೇಲೆ ಹಸುವಿನ ಗೊಬ್ರತಂದೆ
ಹಸಿರ ಭೂದೇವಿ ಹಾಕ್ತೇನೆ । ನನ ತಾಯವ್ವ
ಹಸಿದ ಕಂದಯ್ನ ಕಾಯವ್ವ ।[7]

ಹಗಲಿರುಳೆನ್ನದೆ ಹೊಲದಲ್ಲಿಯೇ ದುಡಿಯುವ ರೈತನಿಗೆ ಉತ್ತಮ ಬೆಳೆಯ ನಿರೀಕ್ಷೆ. ಆತನಿಗೆ ಅತಿಯಾಸೆಯಿಲ್ಲ. ಬದಲಾಗಿ ಹೊಟ್ಟೆ ತುಂಬುವಷ್ಟು ಬೆಳೆಯನ್ನಾದರೂ ಕರುಣಿಸೆಂಬುದು ಆತನ ಬಯಕೆ. ಸಾಮಾನ್ಯವಾಗಿ ಸಾವಯವ ಕೃಷಿಯನ್ನೇ ಮಾಡುವ ರೈತನು ಹಸಿದಿರುವ ನನ್ನ ಮಕ್ಕಳನ್ನು ಸಲಹೆಂದು ಬೇಡಿಕೊಳ್ಳುತ್ತಿದ್ದಾನೆ. ಆತನು ಭೂದೇವಿಯನ್ನು ನೆನೆಯದ ಕ್ಷಣಗಳು ತೀರ ಕಡಿಮೆ. ಅಷ್ಟರಮಟ್ಟಿಗೆ ಭೂಮಿಯೊಂದಿಗೆ ಜನಪದರು ಬೆಸೆದುಕೊಂಡಿದ್ದಾರೆ.

ಪಂಚಭೂತಗಳಾದ ಅಗ್ನಿ, ವಾಯು, ವರುಣ, ಭೂಮಿ ಮತ್ತು ಆಕಾಶಗಳನ್ನು ಜೊತೆಗೆ ಮಾನವನಿಗೆ ಹಿತಕಾರಿ ಆಗಿರುವ ಪ್ರಾಣಿ, ಪಕ್ಷಿಗಳು ಜನಪದರೊಂದಿಗೆ ವಿಶೇಷ ಸಂಬಂಧ ಹೊಂದಿರುತ್ತವೆ. ನಾಯಿ, ಬೆಕ್ಕು, ಮೊಲ, ಕುದುರೆ, ಎಮ್ಮೆ ಎತ್ತು, ಹಸು, ಆನೆ, ಕುರಿ, ಗಿಳಿ, ಪಾರಿವಾಳ ಮುಂತಾದವು ಸಾಕಿದವರ ಮೇಲೆ ಬಹಳ ಪ್ರೀತಿಯಿಟ್ಟು ಕೂಗಿ ಕರೆಯುತ್ತವೆ. ಇಲ್ಲಿ ತಾವು ಸಾಕಿದ ಪ್ರಾಣಿ, ಪಕ್ಷಿಗಳೆಂಬ ಮಧುರತೆ

ಮಾನವರಲ್ಲಿರುತ್ತದೆ. ಅದೇ ರೀತಿ ಪ್ರಾಣಿ ಪಕ್ಷಿಗಳು ಪ್ರೀತಿಯಿಂದ ವರ್ತಿಸಿ, ಪ್ರತಿಕ್ರಿಯಿಸಿ ಸಂತೋಷಪಡಿಸುತ್ತವೆ. ತಾವೂ ಸಂತೋಷವನ್ನು ಅನುಭವಿಸುತ್ತವೆ. ತಮ್ಮ ದಿನನಿತ್ಯದ ಬದುಕಿಗೆ ನೆರವಾದ ಭೌತಿಕ ವಸ್ತುಗಳು ಮತ್ತು ಪ್ರಾಣಿಪಕ್ಷಿಗಳ ಜೊತೆಗೆ ಜನಪದರು ಅವಿನಾಭಾವ ಸಂಬಂಧವನ್ನು ಹೊಂದಿದ್ದಾರೆ. ಬಹುತೇಕ ರೈತರೆ ಆಗಿರುವ ನಮ್ಮ ಹಳ್ಳಿಗರಿಗೆ ಉಳುವ ಭೂಮಿ, ಸುರಿಯುವ ಮಳೆ, ಗಿಡಮರ, ಹಳ್ಳಕೊಳ್ಳಗಳೆಲ್ಲ ಪೂಜ್ಯನೀಯ. ಅದರಲ್ಲೂ ಹೊತ್ತಿರುವ ಭೂತಾಯಿ ದೇವರು. ದೈವ ಚಿಂತನೆಯಿಲ್ಲದೆ ಜನಪದರಿಗೆ ಹೊತ್ತು ಮೂಡದು; ಹೊತ್ತು ಮುಳುಗದು. ಭೂತಾಯಿ ಬಗ್ಗೆ ಅಪಾರವಾದ ಭಯವಿದೆ. ಅದಕ್ಕಿಂತಲೂ ಹೆಚ್ಚು ಭಕ್ತಿ ಹೊಂದಿರುವ ನಮ್ಮ ಜನಪದರು ಈ ರೀತಿ ಹಾಡಿ ಹೊಗಳಿದ್ದಾರೆ.

ಉಲ್ಲೇಖಗಳು :

1. ಪುಟ–64, ಹಿ. ಶಿ. ರಾಮಚಂದ್ರೇಗೌಡ(ಲೇ.), ಜನವರಿ 2001, ಜನಪದ ಸಾಹಿತ್ಯ ದರ್ಶನ ಭಾಗ–24, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
2. ಪುಟ–35, ಕರಾಕೃ (ಸಂ), 1957, ಜಾನಪದ ಜೇನು, ಕಾವ್ಯೋದಯ ಪ್ರಕಾಶನ, ಮೈಸೂರು, 1958
3. ಪುಟ–35, ಕರಾಕೃ (ಸಂ), 1957, ಜಾನಪದ ಜೇನು, ಕಾವ್ಯೋದಯ ಪ್ರಕಾಶನ, ಮೈಸೂರು, 1958
4. ರಾಮು ಮೂಲಗಿ (ಲೇ.), 29–10–2012, ಸೀಗಿಹುಣ್ಣಿಮೆ ಮೆಟ್ರೋ ಪುರವಣಿ, ಪ್ರಜಾವಾಣಿ ದಿನಪತ್ರಿಕೆ.
5. ಪುಟ–143, ವಿನೀತ ರಾಮಚಂದ್ರರಾಯ (ಸಂ.), 1960, ಹಳ್ಳಿಯ ಹಾಡುಗಳು, ಅರುಣೋದಯ ಪ್ರಕಾಶನ, ಬೆಂಗಳೂರು.
6. ಶಿವಾನಂದ ಬ. ಟವಳಿ (ಲೇ.), 10–8–2013, ನಮಜೀಕ ಮಿಂಚಿ ಮುಗಲೀಗೆ ಏರಲಿ, ಮೆಟ್ರೊ ಪುರವಣಿ, ಪ್ರಜಾವಾಣಿ ದಿನಪತ್ರಿಕೆ.
7. ಪುಟ–1, ತಿಪ್ಪೇಸ್ವಾಮಿ ಜಿ.ಆರ್. (ಸಂ.), 2009, ದಕ್ಷಿಣ ಕರ್ನಾಟಕದ ಬೇಸಾಯದ ಹಾಡುಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ಆಕರ ಕೃತಿಗಳು

1. ಕರಾಕೃ (ಸಂ.), 1959, ಜಾನಪದ ಕಥನ ಗೀತೆಗಳು, ಜನಪದ ಸಾಹಿತ್ಯ ಅಕಾಡೆಮಿ, ಸರಸ್ವತಿಪುರಂ, ಮೈಸೂರು, 1962
2. ಗೊರೂರು ರಾಮಸ್ವಾಮಿ ಅಯ್ಯಂಗಾರ್ (ಸಂ.), 1938, ಹಳ್ಳಿಯ ಹಾಡುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2009
3. ಗೊರೂರು ರಾಮಸ್ವಾಮಿ ಅಯ್ಯಂಗಾರ್ (ಸಂ.), 1943, ಹಳ್ಳಿಯ ಬಾಳು, ಕಾವ್ಯಾಲಯ, ಜಯನಗರ, ಮೈಸೂರು. 1981
4. ಮತಿಘಟ್ಟ ಕೃಷ್ಣಮೂರ್ತಿ (ಸಂ.), 1952, ನಮ್ಮ ಹಳ್ಳಿಯ ಹಾಡುಗಳು, ಮಯೂರ ಮುದ್ರಣಾಲಯ, ಬೇಲೂರು. 1956
5. ವಿನೀತ ರಾಮಚಂದ್ರರಾಯ (ಸಂ.), 1960, ಹಳ್ಳಿಯ ಹಾಡುಗಳು, ಅರುಣೋದಯ ಪ್ರಕಾಶನ, ಬೆಂಗಳೂರು.
6. ಸಿಂಪಿ ಲಿಂಗಣ್ಣ (ಸಂ.), 1933, ಜೀವನ ಸಂಗೀತ, ಜಯ ಕರ್ನಾಟಕ ಗ್ರಂಥಮಾಲೆ, ಧಾರವಾಡ.
7. ಹಲಸಂಗಿ ಗೆಳೆಯರು (ಸಂ.), 1931, ಗರತಿಯ ಹಾಡು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2008

***

‘ಅಂತರಾತ್ಮ ಶುದ್ಧಿಗೆ ದಾರಿದೀಪ’ ಪುರಂದರದಾಸರ ‘ಮಲವ ತೊಳೆಯಬಲ್ಲರಲ್ಲದೆ’ ಕೀರ್ತನೆ

1
ಡಾ. ರಂಗಸ್ವಾಮಿ ಹೆಚ್.
ಕನ್ನಡ ಅಧ್ಯಾಪಕರು,
ವಿಶ್ವವಿದ್ಯಾನಿಲಯ ಕಲಾ ಕಾಲೇಜು,
ತುಮಕೂರು ವಿಶ್ವವಿದ್ಯಾನಿಲಯ,
ತುಮಕೂರು–572103.
ranguhosur@gmail.com

‘ಕರ್ನಾಟಕ ಸಂಗೀತ ಪಿತಾಮಹ’, ‘ದಾಸಶ್ರೇಷ್ಠ’ ಎಂಬ ಕೀರ್ತಿಗೆ ಪಾತ್ರರಾಗಿರುವ ‘ದಾಸ ಸಾಹಿತ್ಯದ ಅಶ್ವಿನಿ ದೇವತೆ’ಗಳಲ್ಲೊಬ್ಬರಾದ ಪುರಂದರದಾಸರು ಸರಿಸುಮಾರು ಕ್ರಿ.ಶ. 1480 ರಿಂದ 1564ರ ವರೆಗೆ ಬಾಳಿ–ಬದುಕಿದ ಹಿರಿಯ ಹರಿಭಕ್ತರು. ಇವರು ಅತ್ಯುತ್ತಮ ಹಾಡುಗಾರರಾಗಿ ಅನನ್ಯ ಹರಿಭಕ್ತಿಯನ್ನು ಸಕಾರಗೊಳಿಸಿದವರು. “ ‘ದಾಸರೆಂದರೆ ಪುರಂದರದಾಸರಯ್ಯ’ ಎಂಬ ಹೊಗಳಿಕೆಯನ್ನು ತನ್ನ ಗುರುವಿನಿಂದಲೇ ಪಡೆದವನು. ‘ನೀತಿಯೆಲ್ಲವನರಿತು ನಿಗಮವೇದ್ಯನ ನಿತ್ಯ ಮಾತುಮಾತಿಗೆ ಬಿಡದೆ ವರ್ಣಿಸುತಲಿ, ಗೀತನರ್ತನದಿ ಶ್ರೀಕೃಷ್ಣನ ಪೂಜಿಸುವ ಪೂತಾತ್ಮದಾಸ ಪುರಂದರದಾಸರಯ್ಯ’ ಎಂಬ ವ್ಯಾಸಸ್ತುತಿ ಸಾರ್ಥಕವಾಗಿದೆ.”[1] ಶ್ರೀಮಂತಿಕೆಯ ಸಿರಿತನದಲ್ಲಿ ಜೀವನವನ್ನು ಸಾಗಿಸುತ್ತಿದ್ದ ಇವರು ಯಾವುದೋ ಒಂದು ಪ್ರಸಂಗದಿಂದಾಗಿ ತನ್ನೆಲ್ಲಾ ಸಿರಿ–ಸಂಪತ್ತನ್ನು

ಸ್ವ–ಇಚ್ಛೆಯಿಂದಲೇ ತ್ಯಾಗಮಾಡಿದವರು. ಇವರ ಪೂರ್ವಾಶ್ರಮದ ಹೆಸರು 'ಶ್ರೀನಿವಾಸ ನಾಯಕ'. ಚಿನಿವಾರ (ಚಿನ್ನ, ಮುತ್ತು–ರತ್ನಗಳ ವ್ಯಾಪಾರಿ) ವೃತ್ತಿಯನ್ನು ಮಾಡುತ್ತಿದ್ದ ಇವರು ತುಂಬಾ ಜಿಪುಣನಾಗಿರುತ್ತಾರೆ. ಒಂದು ಹಂತದಲ್ಲಿ ಜ್ಞಾನೋದಯವಾಗಿ, ವೈರಾಗ್ಯತಾಳಿ, ತಾನು ಸಂಪಾದಿಸಿದ ಹಣ, ಕನಕಾದಿ ಸಂಪತ್ತನ್ನು ದಾನ ಮಾಡಿ, ಹೆಂಡತಿ ಮಕ್ಕಳೊಂದಿಗೆ ವಿಜಯನಗರಕ್ಕೆ ಬಂದು ನೆಲೆಸಿದರೆಂದು ತಿಳಿದು ಬರುತ್ತದೆ. "ಪುರಂದರದಾಸರು ತಮ್ಮ ಮನಃಪರಿವರ್ತನೆಯಾದ ಮರುಕ್ಷಣದಲ್ಲಿಯೇ ತಮ್ಮ ಸಮಸ್ತ ಸಂಪತ್ತನ್ನೂ 'ಶ್ರೀ ಕೃಷ್ಣಾರ್ಪಣ'ವೆಂದು ಅರ್ಪಿಸಿ ವಿರಕ್ತರಾದರೂ, ಅವರ ಅಂತರಂಗದ ಅರ್ಪಣವಾದರೋ ಅಷ್ಟು ಸುಲಭವೆನ್ನಿಸಲಿಲ್ಲ. 'ಮನೆಯೆಂಬ ಆಸೆಯು ಎನ್ನ ಮುಂದುಗೆಡಿಸುತಿದೆ, ಮನೆವಾರುತೆಯು ಎನ್ನ ಭಂಗಪಡಿಸುತಿದೆ, ಸುತರಾಸೆಯು ಎನ್ನ ದೈನ್ಯಪಡಿಸುತಿದೆ, ಇನಿತಾಸೆಯುಳಿದು ಬುದ್ಧಿನಿನ್ನಲ್ಲಿ ನಿಲುವಂತೆ ಮಾಡೋ ಸಿರಿಪುರಂದರ ವಿಠಲ' ಎಂಬುದಾಗಿ ತಮ್ಮ ಮನಸ್ಸನ್ನು ತಾವೇ ವಿಶ್ಲೇಷಣೆ ಮಾಡಿಕೊಂಡು, ಅದಕ್ಕಾಗಿ ಮರುಗಿ, ಕೊರಗಿ, ಪರಮಾತ್ಮನನ್ನು ಮೊರೆಹೋಗುವರು."[2] ಇವರು ವ್ಯಾಸರಾಯರ (ವ್ಯಾಸತೀರ್ಥರ) ಶಿಷ್ಯರಾಗಿದ್ದುಕೊಂಡು ಅವರಿಂದಲೇ ಮಂತ್ರೋಪದೇಶದ ದೀಕ್ಷೆಯನ್ನು ಪಡೆದು ಪುರಂದರ ದಾಸರಾದರು. ತಮ್ಮ ಮುಂದಿನ ಜೀವನವನ್ನು ಸಂಪೂರ್ಣವಾಗಿ 'ಶ್ರೀಹರಿ'(ವಿಷ್ಣು)ಗೆ ಸಮರ್ಪಿಸಿ, ಸಂಸಾರಿಯಾಗಿ ಇದ್ದುಕೊಂಡೇ ಸಮಾಜ ಸುಧಾರಣೆಗೆ ಪ್ರಯತ್ನಿಸಿದ ದಾಸಶ್ರೇಷ್ಠರು. 'ಪುರಂದರ ವಿಠಲ' ಎಂಬ ಅಂಕಿತದಿಂದ ಸಾವಿರಾರು ಕೀರ್ತನೆಗಳನ್ನು ಕಟ್ಟಿ ಮೈದುಂಬಿ ಹಾಡಿದ್ದಾರೆ. ಅಷ್ಟೇ ಅಲ್ಲದೆ, ಹಲವಾರು ಸುಳಾದಿಗಳನ್ನೂ ಮತ್ತು ಉಗಾಭೋಗಗಳನ್ನೂ ರಚಿಸಿ ಹಾಡಿದ್ದು ಅವುಗಳಲ್ಲಿ ಅವರ 'ದೃಢಭಕ್ತಿ' ಮತ್ತು 'ತತ್ತ್ವಬೋಧನೆ'ಯು ಸ್ವಚ್ಛಂದವಾಗಿ ಹರಿದಿದೆ. ಹರಿದಾಸ ಸಾಹಿತ್ಯವನ್ನು ಶ್ರೀಮಂತಗೊಳಿಸಿ, ಆ ಪಂಥದ ಬುನಾದಿಯನ್ನು ಗಟ್ಟಿಗೊಳಿಸಿದ್ದಾರೆ. ಅತ್ಯುತ್ತಮವಾದ ಭಕ್ತಿಗೀತೆಗಳನ್ನು ಕಟ್ಟಿ ಹಾಡುವುದರ ಮೂಲಕ ಜನಸಾಮಾನ್ಯರಿಗೂ, ಕನ್ನಡ ಸಾಹಿತ್ಯಕ್ಕೂ ಚಿರವಾದ, ಶಾಶ್ವತವಾದ ಬೆಸುಗೆಯನ್ನು ಉಂಟುಮಾಡಿದ ಹಿರಿಯ ಹರಿದಾಸರಲ್ಲಿ ಒಬ್ಬರಾಗಿದ್ದಾರೆ.

ಪುರಂದರದಾಸರು ಕಟ್ಟಿ ಹಾಡಿರುವ ಹಾಡುಗಳ (ಕೀರ್ತನೆಗಳ) ಪರಿಪ್ರೇಕ್ಷ್ಯವನ್ನು ಕುರಿತು ರಂ. ಶ್ರೀ. ಮುಗಳಿಯವರು ಹೇಳಿರುವ ಮಾತುಗಳು ಅರ್ಥಪೂರ್ಣವಾಗಿವೆ– "ಅವನು ಭಾರತವೆಲ್ಲ ಸಂಚರಿಸಿ ತೀರ್ಥಯಾತ್ರೆ ಮಾಡಿರಬೇಕು. ಎಲ್ಲ ತರದ, ಮತಪಂಥದ ಜನರೊಡನೆ ನಿಕಟಸಂಬಂಧವನ್ನು ಬೆಳೆಸಿ ಸೂಕ್ಷ್ಮವಾಗಿ ಲೋಕಜೀವನ ನಿರೀಕ್ಷಣೆಯನ್ನು ಮಾಡಿರಬೇಕು. ತನ್ನ ಭಕ್ತಿ–

ಸ್ಥಾಯಿಗೆ ವಿವಿಧ ಸಂನಿವೇಶಗಳಿಂದ ಸಹಜ ಸ್ಫೂರ್ತಿಯನ್ನು ಪಡೆದು ಹಾಡು ಕಟ್ಟಿರಬೇಕು, ನಕ್ಕು ನಗಿಸುವ ವಿಡಂಬಕ ಹಾಸ್ಯದಲ್ಲಿ ಮೇಲುಗೈಯಾಗಿರಬೇಕು ಎಂಬುದನ್ನು ಅರಿತರೆ ಅವನ ವ್ಯಕ್ತಿತ್ವದ ಕೆಲವಂಗಗಳ ದರ್ಶನವಾಗುತ್ತದೆ."3 ಮುಂದುವರಿದು– "ಜನರ ಬದುಕಿನ ಅನಂತ ವೈವಿಧ್ಯವನ್ನು ಪುರಂದರದಾಸರಷ್ಟು ಸೂಕ್ಷ್ಮವಾಗಿ ಗಮನಿಸಿದವರು ಮತ್ತೊಬ್ಬರಿಲ್ಲ. ಸಾರ್ವಕಾಲಿಕ ಜೀವನ ಮೌಲ್ಯಗಳನ್ನು ಇವರು ಪರಿಣಾಮಕಾರಿಯಾಗಿ ಪ್ರತಿಮೆ, ರೂಪಕಗಳ ಮೂಲಕ ಪ್ರತಿಪಾದಿಸಿದ್ದಾರೆ. ಅವರ ಅನೇಕ ಕೀರ್ತನೆಗಳು ಸುಂದರ ಭಾವಗೀತಗಳೇ ಆಗಿವೆ".[4]

ಪುರಂದರದಾಸರು ಕೀರ್ತನ ಸಾಹಿತ್ಯ ಪ್ರಕಾರದ ಉದ್ಧಾರಕರಾಗಿ, ಮತ–ಮತಗಳ ನಡುವಿನ ವೈಮನಸ್ಯಗಳನ್ನು ತಗ್ಗಿಸುವ ಪ್ರಯತ್ನ ಮಾಡಿ, ಪಂಚಮ ವರ್ಣಕ್ಕೆ ಸೇರಿದ ಜನರಲ್ಲಿ ಸಹಾನುಭೂತಿ ಪ್ರದರ್ಶಿಸಿ, ಕನ್ನಡ ಭಾಷೆಯನ್ನು ಉಜ್ಜೀವನಗೊಳಿಸಿ, ಕರ್ನಾಟಕ ಸಂಗೀತಕ್ಕೆ ಶಾಸ್ತ್ರೀಯ ಸ್ಥಾನಲಭಿಸುವಂತೆ ಮಾಡಿದ್ದಾರೆ. ಇವರ ಕೀರ್ತನೆಗಳಲ್ಲಿ ನಾವು 'ಹರಿ'ನಾಮದ ಸ್ಮರಣೆ–ಸ್ತುತಿ, ಗುರು ಸ್ಮರಣೆ, ಅಂತರಂಗದ ನಿವೇದನೆ, ಆತ್ಮನಿವೇದನೆ, ಕೃಷ್ಣನ ಲೀಲೆ, ಸಮಾಜದ ವಿಮರ್ಶೆ, ತತ್ತ್ವಬೋಧನೆ, ಸಮಾಜ ಬೋಧನೆ, ಆಧ್ಯಾತ್ಮಿಕ ತತ್ತ್ವವಿಚಾರಗಳು, ಭಕ್ತಿ–ಜ್ಞಾನ–ವೈರಾಗ್ಯ ಹೀಗೆ ಹತ್ತುಹಲವು ವಿಷಯಗಳನ್ನು ಗುರುತಿಸಬಹುದಾಗಿದೆ. ಶ್ರೀಹರಿಯಲ್ಲಿ (ಕೃಷ್ಣ–ವಿಷ್ಣು) ಆಳವಾದ ಶ್ರದ್ಧಾ–ಭಕ್ತಿಯನ್ನು ಹೊಂದಿದ್ದ ಇವರು ತನ್ನ ಅಂತರಂಗದಲ್ಲಿನ ಅಧ್ಯಾತ್ಮದ ಬೆಳಕಿನಿಂದ ಬಹಿರಂಗದ ಸಮಾಜದಲ್ಲಿನ ಅನೀತಿ, ಮೋಸ, ವಂಚನೆ, ಅನ್ಯಾಯ, ಡಾಂಭಿಕತೆಗಳನ್ನು ಕಟುವಿಮರ್ಶೆಗೆ ಒಳಪಡಿಸುತ್ತಾರೆ. ದೈವದಲ್ಲಿ ಸರ್ವಸ್ವವನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡಾಗ ಮನಸ್ಸಿಗೆ ದೊರೆಯುವ ಪರಮಾನಂದ, ಅನುಭಾವಗಳ ನಿರೂಪಣೆಗಳು ಅತ್ಯಂತ ಹೃದಯ ಸ್ಪರ್ಶಿಯಾಗಿ ಅಭಿವ್ಯಕ್ತಿಗೊಂಡಿವೆ.

ಪುರಂದರದಾಸರು ರಚಿಸಿರುವ ಅನೇಕ ಮಹತ್ವದ ಕೀರ್ತನೆಗಳಲ್ಲೊಂದಾಗಿರುವ 'ಮಲವ ತೊಳೆಯಬಲ್ಲರಲ್ಲದೆ' ಎಂಬ ಕೀರ್ತನೆಯಲ್ಲಿ ಭಕ್ತನ ಬಹಿರಂಗದ ಶುದ್ಧಿಗಿಂತ ಅಂತರಂಗದ ಶುದ್ಧಿಯು, ಅಂದರೆ, ಆತ್ಮಶುದ್ಧಿಯು ತುಂಬಾ ಮುಖ್ಯ ಎಂಬುದನ್ನು ಹಲವು ನಿದರ್ಶನಗಳ ಮೂಲಕ ಸಾರವತ್ತಾಗಿ ಕಟ್ಟಿಕೊಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ 'ಭಕ್ತಿ'ಯ ವಿವಿಧ ಮಜಲುಗಳನ್ನು ವಿಶ್ಲೇಷಣೆಗೆ ಒಳಗುಮಾಡುವುದು ಪ್ರಸ್ತುತ ಲೇಖನದ ಆಶಯವಾಗಿದೆ.

ಈ ಹಿನ್ನೆಲೆಯಲ್ಲಿ, 'ಮಲವ ತೊಳೆಯಬಲ್ಲರಲ್ಲದೆ' ಕೀರ್ತನೆಯಲ್ಲಿ ಪುರಂದರದಾಸರು ಯಾವ ವಿಧವಾದ ಭಕ್ತಿಯನ್ನು ಅಭಿವ್ಯಕ್ತಿಸುತ್ತಿದ್ದಾರೆ ಎಂಬ

ಪ್ರಶ್ನೆಯನ್ನು ಶೋಧಿಸಬಹುದು. ಭಕ್ತಿಯು ಮೂಲಭೂತವಾಗಿ ಒಂದೇ ಆದರೂ ಬೇರೆ–ಬೇರೆ ನಿಮಿತ್ತಗಳಿಂದ ಅದು ಹನ್ನೊಂದು ವಿಧದಲ್ಲಿ ಪ್ರಕಟಗೊಳ್ಳುವುದನ್ನು ನಾರದ ಮುನಿಗಳದ್ದು ಎಂದು ಹೇಳಲಾಗುವ 'ನಾರದ ಭಕ್ತಿಸೂತ್ರ' ಗ್ರಂಥದಲ್ಲಿ ತಿಳಿಸಲಾಗಿದೆ. ಹನ್ನೊಂದು ವಿಧಗಳಲ್ಲಿ "'ದಾಸ್ಯಾಸಕ್ತಿ' ಮತ್ತು 'ಆತ್ಮನಿವೇದನಾಸಕ್ತಿ' ಎಂಬವೂ ಸೇರಿವೆ. 'ದಾಸ್ಯಾಸಕ್ತಿ' ಎಂದರೆ– 'ಈಶ್ವರನ ಅನಂತ ಸದ್ಗುಣಗಳನ್ನು ಅರಿತು ಅವನ ದಾಸನು ತಾನೆಂಬ ಭಾವನೆಯನ್ನು ಹೊಂದುವುದು'. 'ಆತ್ಮನಿವೇದನಾಸಕ್ತಿ' ಎಂದರೆ– 'ಪರಮಾತ್ಮನಿಗೆ ತನ್ನನ್ನೇ ಅರ್ಪಿಸುವುದು' ".[5]

ಪುರಂದರದಾಸರು ಈ ಕೀರ್ತನೆಯಲ್ಲಿ 'ದಾಸ್ಯಾಸಕ್ತಿ' ಮತ್ತು 'ಆತ್ಮನಿವೇದನಾಸಕ್ತಿ' ಭಕ್ತಿಯ ವಿಧಗಳು ಹೃದಯಸ್ಪರ್ಶಿಯಾಗಿ ಅಭಿವ್ಯಕ್ತಿಗೊಂಡಿರುವುದನ್ನು ಗುರುತಿಸಬಹುದಾಗಿದೆ. ಭಗವಂತನಿಗೆ ಶರಣಾಗುವುದನ್ನು 'ಶರಣಾಗತಿಯ ಭಕ್ತಿ' ಅಥವಾ 'ಆತ್ಮನಿವೇದನಾಸಕ್ತಿ' ಎಂದು ಕರೆಯಲಾಗುತ್ತದೆ. ಇದು ಭಕ್ತಿಯ ಅತ್ಯುನ್ನತ ರೂಪವಾಗಿದೆ. ಇದು ಸ್ವಯಂ ಸಂಪೂರ್ಣವಾಗಿ ಭಗವಂತನಿಗೆ ಶರಣಾಗುವುದು. ಅಂದರೆ ಭಗವಂತನೇ ಎಲ್ಲಾ, ಭಗವಂತನನ್ನು ಬಿಟ್ಟು ಬೇರೇನೂ ಇಲ್ಲ ಎಂದು ದೃಢವಾಗಿ ಆತ್ಮವಿಶ್ವಾಸದಿಂದ ಭಗವಂತನಲ್ಲಿ ನಂಬಿಕೆ ಇಡುವುದಾಗಿದೆ. ಹಾಗೆಯೇ, ಭಗವಂತನ ಸೇವಕನಾಗಿ, ದಾಸನಾಗಿ ಅವನ ಸೇವೆಯಲ್ಲಿ ತೊಡಗಿಕೊಳ್ಳುವುದಕ್ಕೆ 'ದಾಸ್ಯಭಕ್ತಿ' ಎಂದು ಹೇಳಬಹುದು.

ಪುರಂದರದಾಸರ ಕೀರ್ತನೆಗಳನ್ನೆಲ್ಲಾ ಒಂದು ಚೌಕಟ್ಟಿನಲ್ಲಿಟ್ಟು ಅವುಗಳ ಉದ್ದೇಶ, ಗುರಿ, ಆಶಯ, ಆಳ, ವಿಸ್ತಾರ, ವೈವಿಧ್ಯತೆ, ಮೌಲ್ಯ, ಶ್ರೇಷ್ಠತೆಗಳನ್ನು ಕುರಿತು ರಂ. ಶ್ರೀ. ಮುಗಳಿಯವರು ಹೀಗೆ ಹೇಳಿದ್ದಾರೆ– "ಅಂತರಂಗದ ಕೀರ್ತನೆಗಳಲ್ಲಿ ಭಕ್ತಿಜೀವನದ ಬಯಕೆ–ಬೇಡಿಕೆಗಳು, ಕುಗ್ಗು–ಕೊರತೆಗಳು ವ್ಯಕ್ತವಾಗಿವೆ. ಇಂಥ ಕೆಲವು ಗೀತೆಗಳಲ್ಲಿ ಪುರಂದರದಾಸರ ಸೊಗಸನ್ನೂ ಹಿರಿಮೆಯನ್ನೂ ಸೂರೆಗೊಳಿಸಿದ್ದಾನೆ"....... ಮುಂದುವರಿದು, "ಇವರ ಕೀರ್ತನೆಯಲ್ಲಿ ಆರ್ತಭಕ್ತನ ಕೋರಿಕೆ–ಕಳವಳಗಳಿದ್ದಂತೆ ಸಿದ್ಧಭಕ್ತನ ಸಮಗ್ರ ಸಮರ್ಪಣೆ, ಸಾಕ್ಷಾತ್ಕಾರ, ನಿಶ್ಚಿಂತೆಗಳು ಭಾವಗೀತೆಯ ಸುಂದರ ರೂಪವನ್ನು ತಾಳಿರುತ್ತವೆ. ಒಂದೊಂದಾಗಿ ನೋಡಿದಾಗ ನಕ್ಷತ್ರಗಳು ಚೆಲುವಾಗಿ ಮಾತ್ರ ತೋರಿ, ಒಟ್ಟಾಗಿ ನೋಡಿದಾಗ ಭವ್ಯ–ರಮಣೀಯವಾಗಿ ತೋರುವಂತೆ ಇವುಗಳ ರೀತಿ ಇದೆ."6 ಈ ಮೇಲಿನ ಮಾತುಗಳು ಪ್ರಸ್ತುತ ಕೀರ್ತನೆಗೂ ಸಮರ್ಪಕವಾಗಿ ಅಳವಡುತ್ತದೆ.

'ಮಲವ ತೊಳೆಯಬಲ್ಲರಲ್ಲದೆ' ಎಂಬ ಕೀರ್ತನೆಯಲ್ಲಿ ಮನುಷ್ಯನ

ವೈವಿಧ್ಯಮಯ ಸ್ವಭಾವ ಹಾಗೂ ಅದರ ಸಂಕೀರ್ಣತೆಯನ್ನು ಪರಿಚಯಿಸುವುದರೊಂದಿಗೆ ಈ ಸ್ವಭಾವವನ್ನು ಹಾಗೂ ದೈನಂದಿನ ಜೀವನವನ್ನು ವಿಡಂಬಕ ಹಾಸ್ಯದ ಮೂಲಕ ರಸವತ್ತಾಗಿ ಚಿತ್ರಿಸಿದ್ದಾರೆ. ಸಮಾಜದಲ್ಲಿ ಮನುಷ್ಯನ ಜೀವನ ಅಧೋಗತಿಯ ಅಂತಃಪತನದ ಕಡೆಗೆ ಸಾಗುತ್ತಿರುವುದನ್ನು ಸೂಕ್ಷ್ಮವಾಗಿ ಗ್ರಹಿಸಿದ ನಿಚ್ಚಳವಾದ ಅರಿವು ಪುರಂದರದಾಸರಲ್ಲಿ ಎಷ್ಟರಮಟ್ಟಿಗೆ ಇತ್ತೆಂಬುದನ್ನು ಅವರ ಕೀರ್ತನೆಗಳ ಅವಲೋಕನದಿಂದ ತಿಳಿಯಬಹುದಾಗಿದೆ. ಇದರ ಹಿನ್ನೆಲೆಯಲ್ಲಿ ಈ ಕೀರ್ತನೆಯನ್ನು ಗ್ರಹಿಸಬಹುದಾಗಿದೆ.

“ಮಲವ ತೊಳೆಯಬಲ್ಲರಲ್ಲದೆ
ಮನವ ತೊಳೆಯಬಲ್ಲರೆ ॥ಪ॥
ಹಲವು ತೀರ್ಥಂಗಳಲಿ ಮುಳುಗಿ
ಹಲುಬಿದರೆ ಫಲವೇನು ॥ಅ.ಪ॥”

ಈ ಕೀರ್ತನೆಯ ಪಲ್ಲವಿಯ ಮೊದಲೆರಡು ಸಾಲುಗಳಲ್ಲಿ ‘ಮಲ’ ಎಂಬ ಪದವಿದ್ದು, ಮಲ ಎಂದರೆ ‘ಕೊಳಕು’, ‘ಹೊಲಸು’, ‘ಧೂಳು’, ‘ಅಶುದ್ಧತೆ’, ‘ಬೆವರು’ ‘ತ್ಯಾಜ್ಯ ಉತ್ಪನ್ನ’ ‘ಗಲೀಜು’ ಮೊದಲಾದ ಅರ್ಥಗಳನ್ನು ಒಳಗೊಂಡಿದೆ. ಮನುಷ್ಯ ತನ್ನ ದೇಹದ ಮೇಲಿನ ಮಲವನ್ನು ತೊಳೆದು ಶುದ್ಧ–ಸ್ವಚ್ಛ ಮಾಡಿಕೊಳ್ಳಬಹುದು. ಆದರೆ ಮನಸ್ಸಿನಲ್ಲಿರುವ ಮಲವನ್ನು (ಹೊಲಸನ್ನು, ಕೊಳಕನ್ನು) ತೊಳೆಯಬಹುದೆ. ಮನಸ್ಸನ್ನು ಅಂದರೆ ಅಂತರಂಗವನ್ನು ಕೊಳಕಾಗಿ, ಅಶುದ್ಧವಾಗಿ ಇಟ್ಟುಕೊಂಡು ಹಲವು ತೀರ್ಥಕ್ಷೇತ್ರಗಳಿಗೆ ಹೋಗಿ ಅಲ್ಲಿನ ಪವಿತ್ರ ತೀರ್ಥಗಳಲ್ಲಿ ಮುಳುಗಿ ಪುಣ್ಯಸ್ನಾನಮಾಡಿದರೆ, ಹರಿಯನ್ನು ಪ್ರಾರ್ಥಿಸಿದರೆ ಏನು ಫಲ? ಎಂದು ಪ್ರಶ್ನಿಸುತ್ತಿದ್ದಾರೆ. ನಮ್ಮ ಅಂತರಾತ್ಮವನ್ನು ಸದಾಕಾಲ ನಾವು ಶುದ್ಧವಾಗಿ, ನಿಶ್ಕಲ್ಮಶವಾಗಿ ಇಟ್ಟುಕೊಂಡು ದೇವರನ್ನು, ದೇವರ ನಾಮವನ್ನು ಸ್ಮರಿಸಿದರೆ ಅದರಿಂದ ಒಳಿತಾಗುತ್ತದೆ ಎಂಬುದು ಇವರ ನಂಬಿಕೆ. ಆದರೆ ಕಲ್ಮಶ ತುಂಬಿರುವ ಮನಸ್ಸನ್ನು ಶುದ್ಧಗೊಳಿಸದೆ, ದೈವದಲ್ಲಿ ಅಚಲವಾದ ನಂಬಿಕೆ, ಶ್ರದ್ಧಾಭಕ್ತಿಗಳಿಲ್ಲದೆ, ಎಲ್ಲ ಆಚರಣೆಗಳೂ ವ್ಯರ್ಥವಾಗುತ್ತವೆ. ತೀರ್ಥಸ್ನಾನವನ್ನು ಮಾಡದೆಯೇ ಅಂತರಂಗವನ್ನು, ಆಂತರಿಕ ಒಳಮನಸ್ಸನ್ನು ನಿಷ್ಕಲ್ಮಶವಾಗಿ ಶುದ್ಧವಾಗಿಟ್ಟುಕೊಂಡರೆ ಅದರಿಂದ ಸತ್ಫಲವನ್ನೇ ನಿರೀಕ್ಷೆ ಮಾಡಬಹುದು. ಉಳಿದಂತೆ ನಾವೇನು ಮಾಡಿದರೂ ಅದು ಬರೀ ಬಹಿರಾಡಂಬರವೇ ಆಗಿ, ತೋರ್ಪಡಿಕೆಗೆ ಮಾತ್ರ ಸೀಮಿತವಾಗುತ್ತದೆ. ನಮ್ಮ ಮನಸ್ಸು ಮತ್ತು ಅಂತರಾತ್ಮ ಸದಾ ಶುದ್ಧವಾಗಿ, ಪಾವಿತ್ರ್ಯತೆಯಿಂದ ಕೂಡಿ ಸುಜ್ಞಾನದ ಬೆಳಕಿನೆಡೆಗೆ ಸಾಗುತ್ತಿದ್ದರೆ

ಅದರಿಂದ ಪುಣ್ಯಫಲಗಳೇ ಲಭಿಸುತ್ತವೆ ಎಂದು ಹೇಳುತ್ತಿದ್ದಾರೆ. ಇವರ ಉಪದೇಶ ಜನಮನದ ಕೊಳೆಯನ್ನು ತೊಳೆದು ಸಮಾಜ ಜೀವನವನ್ನು ಹಸನಾಗಿ ಮಾಡುವಂಥದ್ದಾಗಿದೆ.

"ಭೋಗ ವಿಷಯ ಫಲವನುಂಡು ರಾಗಲೋಭದಿಂದ ಮತ್ತ-
ನಾಗಿ ಮೆರೆಯುತಿರೆ ಅವನ ಭಾಗ್ಯವಂತನೆಂಬರೆ
ಯೋಗಿಯಂತೆ ಜನರು ಮೆಚ್ಚುವಂತೆ ಹೋಗಿ ನೀರಿನಲ್ಲಿ
ಕಾಗೆಯಂತೆ ಮುಳುಗಿ ಮಾಘಸ್ನಾನ ಫಲವು ಬಾಹೋದೆ" ॥ 1 ॥

ಇಂದ್ರಿಯ ಸುಖಗಳನ್ನು ಸಂತೋಷವಾಗಿ, ಸಮೃದ್ಧವಾಗಿ ಅನುಭವಿಸಿ, ದುರಾಸೆಯ ವ್ಯಾಮೋಹದ ಅಮಲಿನಲ್ಲಿರುವ ಮನುಷ್ಯ ಭಗವಂತನ ಸ್ಮರಣೆಯನ್ನು, ತನ್ನ ಇರವಿನ ಸ್ಥಿತಿಯನ್ನು ಮರೆತು ಮೋಹದಲ್ಲಿ ಮೈಮರೆತಿರುತ್ತಾನೆ. ತನ್ನ ನಿಜವಾದ ಅಸ್ತಿತ್ವವನ್ನೇ ಮರೆತು ಕಾಮ, ಕ್ರೋಧ, ಲೋಭ, ಮದ ಮತ್ತು ಮತ್ಸರಗಳಲ್ಲಿ ತೇಲಾಡುವಂಥವನಿಗೆ ಭಾಗ್ಯವಂತನೆಂದು ಕರೆಯುವರೆ? ಎಂದು ಪುರಂದರದಾಸರು ಪ್ರಶ್ನೆ ಮಾಡುತ್ತಿದ್ದಾರೆ. ಹಾಗಾದರೆ ನಿಜವಾದ ಭಾಗ್ಯವಂತರು ಯಾರು? ಯೋಗಿಗಳು ಈ ಭೂಮಿಯ ಮೇಲಿನ ಯಾವುದೇ ವಸ್ತು-ವಿಷಯಗಳಲ್ಲಿ ಅನುರಕ್ತರಾಗದೆ, ಪ್ರತಿಫಲವನ್ನು ಅಪೇಕ್ಷೆ ಪಡದೆ, ತಮ್ಮ ಯೋಗದ ಸಿದ್ಧಿಗಾಗಿ ಸೂರ್ಯೋದಯಕ್ಕೆ ಮೊದಲು ತಣ್ಣೀರಿನಲ್ಲಿ ಮುಳುಗಿ ಭಗವಂತನ ಸ್ಮರಣೆ ಮಾಡುತ್ತಾರೆ. ಆದರೆ ಅವರಿಗೆ ಜನರು ಮೆಚ್ಚಲಿ ಎಂಬ ನಿರೀಕ್ಷೆ, ಅಪೇಕ್ಷೆಯೂ ಇರುವುದಿಲ್ಲ. ಅವರಿಗೆ ಅವರ ಗುರಿ-ಉದ್ದೇಶ-ಸಂಕಲ್ಪಗಳಲ್ಲಿ ಖಚಿತತೆಯಿದ್ದು, ಆ ಮಾರ್ಗವನ್ನೇ ಅನುಸರಿಸುತ್ತಾರೆ. ಆದರೆ, ಈ ಯಾವ ಸಂಕಲ್ಪಗಳೂ ಇಲ್ಲದೆ ನೀರಿನಲ್ಲಿ ಮುಳುಗಿದರೆ ಅದು ಕಾಗೆ ಮುಳಿಗಿ ಮಾಘಸ್ನಾನದ ಪ್ರತಿಫಲವನ್ನು ಅಪೇಕ್ಷೆ ಮಾಡಿದಂತೆ. ತನ್ನ ಕರ್ಮವನ್ನು ಕಳೆಯುವ ಸಲುವಾಗಿ ಯೋಗಿ ಶ್ರದ್ಧಾಭಕ್ತಿಯಿಂದ ತಾನು ಮಾಡುವಂತಹ ಕೆಲಸವನ್ನು ಪ್ರತಿನಿತ್ಯ ಮಾಡುತ್ತಾನೆ. ಆದರೆ ವಿಷಯ ಸುಖಗಳಲ್ಲಿ ಮುಳುಗಿರುವವನು ಯಾವುದೇ ಎಚ್ಚರವಿರದೆ ಮದದಲ್ಲಿ ಮುಳುಗಿ ಹೋಗಿರುತ್ತಾನೆ. ಭಗವಂತನ ಸ್ಮರಣೆಯನ್ನೇ ಮರೆತ ಮನುಷ್ಯರನ್ನು ಸಿರಿವಂತರು, ಭಾಗ್ಯವಂತರು ಎಂದು ಕರೆಯಬಹುದೇ? ನಮ್ಮ ಸಮಾಜದಲ್ಲಿ 'ಸಿರಿವಂತರು' ಮತ್ತು 'ಭಾಗ್ಯವಂತರು' ಎಂಬ ಪರಿಕಲ್ಪನೆಗಳ ಅರ್ಥಗಳೇ ಸಂಕುಚಿತಗೊಂಡಿವೆ. ಈ ಸಂಕುಚಿತ ಅರ್ಥವನ್ನೇ ಬಹುತೇಕ ಜನರು ಇಷ್ಟಪಡುತ್ತಾರೆ, ಹಾಗೇ ವೈಭವದ ಜೀವನ ನಡೆಸುತ್ತಿದ್ದಾರೆ. ಇಲ್ಲಿ ಪುಣ್ಯ ಸ್ನಾನಕ್ಕಿರುವ ನಿಜವಾದ ಅರ್ಥವನ್ನು ಮರೆತು ಕ್ಷಣಿಕ ಸುಖ-ಸಂತೋಷ, ಭೋಗಗಳಲ್ಲಿ

ಮೈಮರೆತಿರುವ ಜನರನ್ನು ದಾಸರು ತಮ್ಮ ಕಟುವಾದ ಮಾತುಗಳಿಂದ ಎಚ್ಚರಿಸುತ್ತಿದ್ದಾರೆ. ಅಲ್ಲದೆ, ಜನರು ಮರೆತಿರುವ ಸನ್ಮಾರ್ಗ, ಸುಜ್ಞಾನ, ಸತ್ಕಾರ್ಯಗಳ ಮಹತ್ವವನ್ನು ಗಂಭೀರವಾಗಿ ತಿಳಿಸುತ್ತಿದ್ದಾರೆ ಎಂದು ಹೇಳಬಹುದು.

"ಪರರ ಕೇಡು ಬಯಸಿ ಗುರು ಹಿರಿಯರನ್ನು ನಿಂದಿಸುತ್ತ
ಪರಮ ಸೌಖ್ಯವೆಂದು ಪರಸ್ತ್ರೀಯರನ್ನು ಬಯಸುತ್ತ
ಪರಮನಿಷ್ಠ ಮೌನಿಯಂತೆ ಧರೆಯ ಮೇಲೆ ಡಂಭ ತೋರಿ
ಹರಿವ ನೀರಿನ ತೀರದಿ ಕುಳಿತರೇನು ಬಕಧ್ಯಾನದಿ" ॥ 2 ॥

ಪರರಿಗೆ ಅಂದರೆ ತನ್ನ ಸಹಜೀವಿಗಳಿಗೆ, ನೆರೆ–ಹೊರೆಯವರಿಗೆ, ಸಕಲ ಜೀವಿಗಳಿಗೆ ಕೆಡುಕನ್ನು ಬಯಸುತ್ತಾ, ಗುರು–ಹಿರಿಯರನ್ನು ಮತ್ತು ತಂದೆ–ತಾಯಿಗಳನ್ನು ಒಂದಿಲ್ಲೊಂದು ರೀತಿ ಅವಮಾನಿಸಿ ನಿಂದಿಸುತ್ತಾ, ಶ್ರೇಷ್ಠವಾದ ಸುಖವೆಂದು ಅನ್ಯ ಸ್ತ್ರೀಯರನ್ನು ಬಯಸುತ್ತಾ, ಅಧ್ಯಾತ್ಮದಲ್ಲಿ ಅತ್ಯಂತ ನಿಷ್ಠೆ ಮತ್ತು ಶ್ರದ್ಧೆಯ ಬೂಟಾಡಿಕೆಯನ್ನು ಪ್ರದರ್ಶಿಸುತ್ತಾ, ಜನರೆಲ್ಲಾ ನನ್ನನ್ನು ನೋಡಿ ಹೊಗಳಿ ಗೌರವಿಸಲಿ ಎಂಬ ಮನೋಧೋರಣೆಯನ್ನುಳ್ಳ ವ್ಯಕ್ತಿಗಳು ಹರಿಯುವಂತಹ ನದಿಯ ತೀರದಲ್ಲಿ ಬಕಪಕ್ಷಿಯು ತನ್ನ ಆಹಾರದ ಬೇಟೆಗಾಗಿ ನಿಶ್ಚಲವಾಗಿರುವಂತೆ ಮಾಡುವ ಧ್ಯಾನದ ಹಾಗೆ. ಇದೇನು, ಸಕಲಜೀವಿಗಳ ಏಳಿಗೆಗಾಗಿ, ಸತ್ ಪ್ರಯೋಜನವನ್ನು ಪಡೆಯುವ ಸಲುವಾಗಿ, ಬೇರಾವುದೇ ಪ್ರತಿಫಲಾಪೇಕ್ಷೆ ಇರದೆ ಮಾಡುವ ಧ್ಯಾನವಲ್ಲ. ಮನುಷ್ಯ ತೋರಿಕೆಗಾಗಿ ಮಾಡುವಂತಹ ಇಂತಹ ಅನೇಕ ಸಂಪ್ರದಾಯ–ಆಚರಣೆಗಳನ್ನು ಇಲ್ಲಿ ಪುರಂದರದಾಸರು ಕಟುವಾಗಿ ಪ್ರಶ್ನಿಸುತ್ತಿದ್ದಾರೆ.

"ವ್ಯಕ್ತಿಯ ಬದುಕು ಹಸನಾಗಬೇಕಾದರೆ ಅವನ ಮನಸ್ಸು ಶುದ್ಧವಾಗಬೇಕು. ಮನದೊಳಗಿನ ತಾಮಸವನ್ನು ಹೋಗಲಾಡಿಸಿಕೊಂಡರೆ ಸುಖ ಸಂತೋಷಗಳು ತಾವಾಗಿ ಬರುತ್ತವೆ. ಆದ್ದರಿಂದ ವ್ಯಕ್ತಿ ಹಾಗೂ ಸಮಾಜ ಶುದ್ಧಿಗೆ ಸಂಸಾರ ಜೀವನ ಅಗತ್ಯವೆಂದು ಮತ್ತು ಇಂದ್ರಿಯ ನಿಗ್ರಹ, ನಿರ್ಮಲ ಮನಸ್ಸು, ಶುದ್ಧ ನಡೆ ನುಡಿ ಇವುಗಳೇ ಎಲ್ಲ ಕಷ್ಟ ಕೋಟಲೆಗಳಿಗೂ ಪರಿಹಾರವೆಂಬುದು ದಾಸರ ವಿಚಾರವಾಗಿದೆ."[7] ಯಾವ ಜೀವಿಗೂ ಕೇಡನ್ನು, ಹಿಂಸೆಯನ್ನು, ಅನ್ಯಾಯವನ್ನು ಮಾಡದೆ ದೃಢವಾದ ಶ್ರದ್ಧೆ, ಭಕ್ತಿ, ಸಂಕಲ್ಪದಿಂದ ಭಗವಂತನ ಸ್ಮರಣೆಯಿಂದ ಈ ಲೋಕಕ್ಕೆ ಮತ್ತು ಜೀವಸಂಕುಲಕ್ಕೆ ಒಳಿತಾಗುತ್ತದೆ ಎಂಬ ಅಂಶವನ್ನು ಪುರಂದರದಾಸರು ಸ್ಪಷ್ಟಪಡಿಸುತ್ತಿದ್ದಾರೆ. 'ನಡೆ–ನುಡಿ' ಒಂದಾಗಿರದ ಈ ಮನುಷ್ಯ ಲೋಕ ಸಾಗುತ್ತಿರುವ ದುರ್ಮಾರ್ಗವನ್ನು ವಿಡಂಬಿಸುತ್ತಾ, ಟೀಕಿಸುತ್ತಾ, ಸನ್ಮಾರ್ಗವನ್ನು ಸೂಚಿಸುತ್ತಿದ್ದಾರೆ.

ಸುಜ್ಞಾನದ ಬೆಳಕಿನೆಡೆಗೆ ಕರೆದೊಯ್ಯುತ್ತಿದ್ದಾರೆ.

"ಕಾಸುವೀಸಕ್ಕಾಗಿ ಹರಿದಾಸನೆಂದು ತಿರುಗಿ ತಿರುಗಿ
ದೇಶದೇಶಗಳಲಿ ತೊಳಲಿ ಕಾಶಿಯಾತ್ರೆ ಪೋಗಲು
ಆಶಾಪಾಶ ಬಿಡದೆ ಮನಸು ಹೇಸಿವಿಷಯ ಬಯಸುವಂಥ
ವೇಷಧಾರಿಗಳಿಗೆ ಕಾಶಿಯಾತ್ರೆ ಫಲವು ಬಾಹೋದೆ" ॥ 3 ॥

ಧಾರ್ಮಿಕತೆಯಲ್ಲಿ ನಂಬಿಕೆಯಿರುವ ವ್ಯಕ್ತಿಗಳು ಮುಕ್ತಿಯನ್ನು ಪಡೆಯಲು ತೀರ್ಥಯಾತ್ರೆಗೆ ಹೋಗಬೇಕೆಂದು ಸಹಜವಾಗಿ ಬಯಸುತ್ತಾರೆ. ನಾನು ಹರಿಯ ಭಕ್ತ, ಹರಿಯ ಸೇವೆಯಲ್ಲಿ ನಿರತನಾದ ಹರಿದಾಸ ಎಂದು ಹೇಳಿಕೊಂಡು ಹಾದಿ–ಬೀದಿಗಳಲ್ಲಿ, ಊರು–ಕೇರಿಗಳನ್ನು ತಿರುಗಿ ಸುತ್ತಾಡಿ ಕಾಸು–ಕಾಸುಗಳನ್ನು ಸಂಗ್ರಹಿಸಿ ಒಟ್ಟುಮಾಡುತ್ತಾರೆ. ಕಾಶಿಯಾತ್ರೆಗೆ ಹೋಗುವುದಕ್ಕೆ ಅವರು ಮನಸ್ಸು ಮಾಡುತ್ತಾರೆ, ಆಸೆಯೇನೋ ಪಡುತ್ತಾರೆ. ಆದರೆ ಅವರು ಭವದ ಆಕರ್ಷಣೆಗೆ ಒಳಗಾಗಿ ಭವಬಂಧನದಲ್ಲಿ ಬಂಧಿಯಾಗಿರುತ್ತಾರೆ. ಅದರಿಂದ ಅವರ ಬಿಡುಗಡೆ ಸುಲಭವಾಗಿ ಸಾಧ್ಯವಿಲ್ಲ. ಇಂತಹ ನಾನಾ ವೇಷಗಳನ್ನು ತೊಟ್ಟಿರುವಂತಹ ವೇಷಧಾರಿ ಮನುಷ್ಯರು ಕಾಶಿಯಾತ್ರೆಗೆ ಹೋದರೂ ಸಹ ಏನು ಫಲ ಬರುತ್ತದೆ ಎಂದು ಪುರಂದರದಾಸರು ಹೇಳುತ್ತಿದ್ದಾರೆ.

"ದುರ್ಗುಣಗಳಿಂದ ಕೂಡಿದ ಮಾನವ, ದೇವರ ಅಸ್ತಿತ್ವವನ್ನು ಮರೆಯುತ್ತಾನೆ. ಆದರೆ ಅವನಲ್ಲಿ ಒಮ್ಮೆ ದೈವದಲ್ಲಿ ನಂಬಿಕೆ, ದೃಢವಾದ ಭಕ್ತಿ ಹುಟ್ಟಿದರೆ ಅವನಲ್ಲಿದ್ದ ಅವಗುಣಗಳೆಲ್ಲ ಕಣ್ಮರೆಯಾಗಿ ಭಕ್ತಿಭಾವ ಮಾತ್ರ ಉಳಿಯುತ್ತದೆ. ಭಕ್ತಿಯೇ ಮುಕ್ತಿಗೆ ಸೋಪಾನವಾಗುತ್ತದೆ."8 ತನ್ನ ಅರಿವಿಗೆ ಬಾರದೆ ಮಾಡಿದಂತಹ ಪಾಪ–ಪುಣ್ಯ, ಒಳಿತು–ಕೆಡುಕುಗಳಿಂದ ಬಿಡುಗಡೆಯನ್ನು ಪಡೆಯಲು ಕಾಶಿಯಾತ್ರೆಯನ್ನು ನಿಜವಾದ ಭಕ್ತರು ಕೈಗೊಳ್ಳುತ್ತಾರೆ. ಈ ಭವದ ಮೇಲಿನ ಎಲ್ಲಾ ಬಂಧನಗಳಿಂದ, ವ್ಯಾಮೋಹಗಳಿಂದ ಬಿಡುಗಡೆಯನ್ನು ಪಡೆದು ಮುಕ್ತಿಯನ್ನು ಪಡೆಯುವುದೇ ಅದರ ನಿಜ ಉದ್ದೇಶವಾಗಿರುತ್ತದೆ. ಪ್ರತಿಯೊಬ್ಬ ಮನುಷ್ಯನ ಜೀವನದ ಸಾರ್ಥಕತೆ ಇರುವುದೂ ಸಹ ಭವಬಂಧನದ ಬಿಡುಗಡೆಯಿಂದ ಮುಕ್ತಿಯನ್ನು ಪಡೆಯುವುದರಲ್ಲೇ. ಮುಕ್ತಿಯನ್ನು ಪಡೆಯಲು ಹಲವು ಮಾರ್ಗಗಳುಂಟು.

"ತಂದೆತಾಯಿ ತಿರಿದು ತಿನಲು ಒಂದು ದಿನ ಕೇಳಲಿಲ್ಲ
ಮಂದಗಮನೆಯರೊಡನೆ ಆನಂದದಿಂದಲಿರುವರು
ತಂದೆಸತ್ತ ಮೇಲೆ ನೂರುಮಂದಿ ವಿಪ್ರರಿಗುಣಿಸಿ ತಮ್ಮ
ತಂದೆ ತೃಪ್ತನಾದನೆಂಬರು ಮಂದಮತಿಯ ಜನಗಳು" ॥ 4 ॥

ತಂದೆ–ತಾಯಿಗಳು ಭಿಕ್ಷೆಯನ್ನು ಬೇಡಿ ತಿರಿದು ತಿನ್ನುತ್ತಿದ್ದರೂ ಸಹ ಒಂದು ದಿನವೂ ಅವರ ಯೋಗಕ್ಷೇಮವನ್ನು ವಿಚಾರಿಸದ ಮಕ್ಕಳಿರುತ್ತಾರೆ. ಅವರಿಗೆ ಅವರ ಶೃಂಗಾರ ಜೀವನವೇ ಮುಖ್ಯವಾಗಿರುತ್ತದೆ. ಜನ್ಮವಿತ್ತ ತಂದೆ–ತಾಯಿಗಳು ಸತ್ತಮೇಲೆ ನೂರು ಮಂದಿ ವಿಪ್ರರನ್ನು ಕರೆಸಿ ಅವರಿಂದ ಕರ್ಮವನ್ನು ಮಾಡಿಸಿ ನಮ್ಮ ತಂದೆ–ತಾಯಿಗಳ ಆತ್ಮಕ್ಕೆ ಶಾಂತಿ ಲಭಿಸಿತು ಎಂದು ತೃಪ್ತಿಯನ್ನು ಪಟ್ಟುಕೊಳ್ಳುತ್ತಾರೆ.

ಇತ್ತೀಚಿನ ದಿನಮಾನಗಳಲ್ಲಿ ಮಕ್ಕಳು ಜನ್ಮವಿತ್ತ ತಂದೆ–ತಾಯಿಗಳು ಜೀವಂತವಾಗಿ ಇರುವಾಗ ಅವರನ್ನು ಕಡೆಗಣಿಸಿ, ಅವರಿಂದ ದೂರವಾಗುತ್ತಾರೆ. ಅವರು ಒಬ್ಬೊಂಟಿಯಾಗಿ ಜೀವನ ನಡೆಸಲು ರಸ್ತೆಗಳ ಬದಿಯಲ್ಲಿ ಮತ್ತು ದೇವಸ್ಥಾನಗಳ ಮುಂದೆ ಭಿಕ್ಷೆ ಬೇಡುವ ಹಾಗೆ ಮಾಡುತ್ತಾರೆ. ಇಲ್ಲವೆ, ಅನಾಥ ಆಶ್ರಮ, ವೃದ್ಧಾಶ್ರಮಗಳನ್ನು ಸೇರುವ ಹಾಗೆ ಮಾಡುತ್ತಾರೆ. ಅವರನ್ನು ಕಳೆದುಕೊಂಡ ಮೇಲೆ ಅವರಿಗೆ ಅರಿವಾಗುತ್ತದೆ ತಂದೆ–ತಾಯಿಗಳ ಮಹತ್ವ ಮತ್ತು ಪ್ರಾಮುಖ್ಯತೆ. ಆದರೆ ಕಾಲ ಮುಂದೆ ಸರಿದು ಹೋಗಿರುತ್ತದೆ. ಜೀವನ, ಕುಟುಂಬ, ಸಂಸಾರ ಅಂದರೆ ನೋವು–ನಲಿವು, ದುಖ–ದುಮ್ಮಾನ, ಕಷ್ಟ–ಸುಖ, ಏಳು–ಬೀಳು, ಪ್ರೀತಿ–ಕೋಪ, ಜಗಳ–ಸಾಂತ್ವಾನ, ಸಮಸ್ಯೆ–ಪರಿಹಾರ ಎಲ್ಲವೂ ಇರುತ್ತವೆ. ಆಗಾಗ ಬಂದು ನಮ್ಮ ತಾಳ್ಮೆ, ಶಕ್ತಿ, ಧೈರ್ಯ, ಆತ್ಮವಿಶ್ವಾಸ, ನಂಬಿಕೆ ಎಲ್ಲವನ್ನೂ ಪರೀಕ್ಷೆಗೆ ಒಳಪಡಿಸುತ್ತವೆ. ಆದರೆ ಇವ್ಯಾವೂ ಶಾಶ್ವತವಲ್ಲ. ಅಂಥಹ ಸಂದರ್ಭಗಳಲ್ಲಿ ಧೃತಿಗೆಡದೆ ತಂದೆ–ತಾಯಿ–ಹೆಂಡತಿ–ಮಕ್ಕಳೊಂದಿಗೆ ಒಟ್ಟಾಗಿ ಬದುಕುವಂತಹ ತಿಳುವಳಿಕೆಯನ್ನು ನಾವು ಕಲಿಯಬೇಕು ಎಂಬುದನ್ನು ಇಲ್ಲಿ ಅರ್ಥಮಾಡಿಕೊಳ್ಳಬೇಕು.

ಇಲ್ಲಿ ಪುರಂದರದಾಸರು ಪರಕ್ಕೆ ಸಂಬಂಧಿಸಿದ ಆಚರಣೆಗಳಿಗಿಂತ ಇಹಕ್ಕೆ ಸಂಬಂಧಿಸಿದ ಕರ್ತವ್ಯಗಳು ಮುಖ್ಯ ಎಂದು ಹೇಳುತ್ತಿದ್ದಾರೆ. ಇನ್ನು, ಇಲ್ಲಿಯ 'ತಂದೆ–ತಾಯಿ' ಹಾಗೂ 'ಮಂದಗಮನೆಯರು' ಎಂಬುದನ್ನು ಶ್ಲೇಷೆಯಾಗಿಯೂ ಓದಬಹುದು. ತಂದೆ–ತಾಯಿ ಎಂಬುದು ಯಾವುದರಿಂದ ಜೀವನ್ಮುಕ್ತಿ ದೊರಕುವುದೋ ಅಂತಹ ಹರಿಭಕ್ತಿ. ಮಂದಗಮನೆಯರು ಎಂದರೆ ಅರಿಷಡ್ವರ್ಗಗಳು. ಹರಿಭಕ್ತಿಯತ್ತ ಗಮನ ಕೊಡದೆ ಅರಿಷಡ್ವರ್ಗಗಳ ಬಲೆಯಲ್ಲಿ ಸಿಲುಕಿ, ಧಾರ್ಮಿಕ ಆಚರಣೆಗಳಿಂದ ಈ ಪಾಪ ಪರಿಹಾರವಾಗುತ್ತದೆ ಎಂದು ನಂಬುವವರನ್ನು ಪುರಂದರದಾಸರು ಎಚ್ಚರಿಸುತ್ತಿದ್ದಾರೆ.

"ಏನು ಓದಲೇನು ಫಲ ಏನು ಕೇಳಲೇನು ಫಲ
ಜ್ಞಾನದಿಂದ ಅಚ್ಯುತನ ಧ್ಯಾನವಿಲ್ಲದವರಿಗೆ

ಮೌನ ನೇಮ ನಿಷ್ಠೆಯಾಕೆ ಹೀನಚಿತ್ತನಾದ ಮೇಲೆ
ಶ್ರೀನಿವಾಸ ಪುರಂದರ ವಿಠಲನು ಮೆಚ್ಚುವನೆ ಮರುಳೆ" ॥ 5 ॥

ಮನುಷ್ಯರಾದ ನಮಗೆ ಭಗವಂತನನ್ನು ಶುದ್ಧ ಮನಸ್ಸಿನಿಂದ ಸ್ಮರಣೆ ಮತ್ತು ಧ್ಯಾನವನ್ನು ಮಾಡುವಂತಹ ಸಾಮಾನ್ಯ ಅರಿವೂ ನಮಗೆ ಬಂದಿಲ್ಲವೆಂದರೆ ನಾವು ಯಾವ ಶಾಸ್ತ್ರ, ಪುರಾಣ, ಬೃಹತ್ ಗ್ರಂಥಗಳನ್ನು ಓದಿದರೆ ಏನು ಫಲ? ಅವುಗಳನ್ನು ಕೇಳಿದರೇನು ಫಲ? ತಮ್ಮ ಮನಸ್ಸನ್ನೇ ಶುದ್ಧವಾಗಿಟ್ಟುಕೊಳ್ಳದೆ ಮೌನವಾಗಿ ನಿತ್ಯ ನೇಮಗಳನ್ನು ನಿಷ್ಠೆಯಿಂದ ಮಾಡಿದರೆ ಏನು ಪ್ರಯೋಜನ? ಇಂತಹ ಜನರನ್ನು ಶ್ರೀನಿವಾಸ ಪುರಂದರ ವಿಠಲ ಮೆಚ್ಚುವನೇ? ಎಂದು ಪ್ರಶ್ನಿಸುತ್ತಿದ್ದಾರೆ. ನಾವು ಯಾರಿಗೂ ತಿಳಿಯದಹಾಗೆ, ಕಣ್ಣಿಗೆ ಬೀಳದಹಾಗೆ ಮರೆಮಾಚಿ ಏನೆಲ್ಲಾ ಮೋಸಗಳನ್ನು, ಅನ್ಯಾಯಗಳನ್ನು ಮಾಡುತ್ತೇವೆ. ನಾವು ಮಾಡುವ ಒಳಿತು–ಕೆಡುಕುಗಳನ್ನು ಆ ಭಗವಂತ ನೋಡುವುದಿಲ್ಲವೆ? ಅವನಿಗೆ ಮರೆಮಾಚಲು ಸಾಧ್ಯವೇ? ಇಂತಹ ಪ್ರಶ್ನೆಗಳನ್ನು ಪರೋಕ್ಷವಾಗಿ ಎತ್ತುತ್ತ ಮನುಷ್ಯನು ತಾನು ಮಾಡಬೇಕಾದ ಕಾರ್ಯವನ್ನು ಕುರಿತು ಎಚ್ಚರಿಸುವಂತಹ ಮಾತುಗಳು ಇಲ್ಲಿ ವ್ಯಕ್ತವಾಗಿವೆ. "ಪುರಂದರ ದಾಸರ ಕೀರ್ತನೆಗಳಲ್ಲಿ ಸಮಾಜ ಜೀವನವನ್ನು ಕುರಿತ ಕೀರ್ತನೆಗಳು ಹೇರಳವಾಗಿವೆ. ಅವುಗಳಲ್ಲಿ ಸಂಸಾರದ ನಿಸ್ಸಾರತೆ, ವೈರಾಗ್ಯ ಬೋಧೆಯಿದ್ದಂತೆ ಜೀವನ ನಿಷ್ಠೆಯಿದೆ. ಅನೀತಿ–ದಾಂಭಿಕತೆಗಳ ಕಟುವಿಮರ್ಶೆಯೊಡನೆ ಚಿರಂತನ ಮೌಲ್ಯಗಳ ಮತ್ತು ಭಕ್ತಿ ಮಹಿಮೆಯ ಉಪದೇಶವಿದೆ".[9]

ಇಲ್ಲಿ, 'ಜ್ಞಾನದಿಂದ ಅಚ್ಯುತನ ಧ್ಯಾನ' ಎಂಬ ಮಾತು ಮುಖ್ಯವಾದದ್ದು. ಧ್ಯಾನ ಮಾಡಲೂ ಒಂದು ಪೂರ್ವಸಿದ್ಧತೆ ಇರಬೇಕು. ಇದರಲ್ಲಿ ಈ 'ಇಹ' ಮತ್ತು 'ಪರ'ದ ಕುರಿತಾದ ಜ್ಞಾನ ಮುಖ್ಯ. ಈ ಜ್ಞಾನ ಪುಸ್ತಕಗಳ ಓದಿನಿಂದಲಾದರೂ ಬರಬಹುದು, ಯೋಗಿಗಳ ಒಡನಾಟದಿಂದಲಾದರೂ ಬರಬಹುದು. ಆದರೆ, ಈ ಜ್ಞಾನವಿಲ್ಲದ ಧ್ಯಾನ, ಭಕ್ತಿಗಳು ಕುರುಡು ಭಕ್ತಿಯಾಗುವ, ಅಂಧಶ್ರದ್ಧೆಯಾಗುವ ಸಾಧ್ಯತೆಯನ್ನು ಹೊಂದಿರುತ್ತವೆ. ನಮ್ಮ ಸಮಕಾಲೀನ ಸಾಮಾಜಿಕ ಮತ್ತು ರಾಜಕೀಯ ಬದುಕಿನಲ್ಲಿ ಇಂತಹ ಅಂಧಶ್ರದ್ಧೆ, ಕುರುಡುಭಕ್ತಿಗಳೇ ಮೇಲುಗೈ ಸಾಧಿಸಿವೆ.

ಒಟ್ಟಾರೆಯಾಗಿ ಪುರಂದರದಾಸರ ಈ ಮೇಲಿನ ಕೀರ್ತನೆಯಲ್ಲಿ ಬಹಿರಂಗ ಶುದ್ಧಿಯ ಜೊತೆಗೆ ಅಂತರಂಗದ ಶುದ್ಧಿಯು ಮಾನವನಿಗೆ ಅಷ್ಟೇ ಬಹುಮುಖ್ಯವಾದದ್ದು ಎಂದು ತೋರಿಸಲಾಗಿದೆ. ಅಂತರಂಗ–ಬಹಿರಂಗದಲ್ಲಿ, ನಡೆ–ನುಡಿಯಲ್ಲಿ ಒಂದಾಗಿರದ ಭಕ್ತಿಯನ್ನು ಅಣಕಿಸುವ ಮೂಲಕ ಅಂತರಂಗ ಶುದ್ಧಿಗೆ ಪ್ರಾಶಸ್ತ್ಯ ನೀಡಿ, ಡಾಂಭಿಕ

ಭಕ್ತಿಯನ್ನು ಮತ್ತು ಭಕ್ತನನ್ನು ವಿಮರ್ಶಿಸಲಾಗಿದೆ. ಈ ನಿಟ್ಟಿನಲ್ಲಿ, "ಪುರಂದರದಾಸರ ಕೃತಿಗಳಲ್ಲಿ ಅಡಗಿರುವ, ಸದ್ಭಕ್ತಿ ಮಾನವೀಯ ಮೌಲ್ಯಗಳು, ಉಪದೇಶಗಳು, ಆತ್ಮನಿವೇದನೆಯ ರೀತಿ, ಶರಣಾಗತಿಯ ಪರಿ, ವ್ಯಕ್ತಿಯ ಹಾಗೂ ಸಮಾಜದ ಉದ್ಧಾರಕ್ಕೆ ಅತ್ಯಗತ್ಯವಾಗಿರುವ ನೈತಿಕ ನೆಲೆಗಟ್ಟು ಇವೇ ಮುಂತಾದ ಜೀವನ ದರ್ಶನಗಳನ್ನು ಅತ್ಯಂತ ಸುಲಭ ಹಾಗೂ ಸರಳವಾಗಿ ಹೇಳಲಾಗಿದ್ದು ಪುರಂದರದಾಸರ ರಚನೆಗಳು ಕನ್ನಡಿಗರ ಮನದಲ್ಲಿ ಚಿರಂತನ ಸ್ಥಾನ ಪಡೆದಿವೆ"10 ಎಂಬ ಮಾತು ಈ ಕೀರ್ತನೆಗೆ ಭಾಗಶಃ ನೂರಕ್ಕೆ ನೂರು ಅನ್ವಯವಾಗುತ್ತದೆ ಎಂದು ಹೇಳಬಹುದು.

ಕೊನೆ ಟಿಪ್ಪಣಿಗಳು:

1. ರಂ. ಶ್ರೀ. ಮುಗಳಿ, ಕನ್ನಡ ಸಾಹಿತ್ಯ ಚರಿತ್ರೆ, ಪುಟ–255.
2. ಜಿ. ವರದರಾಜರಾವ್, ಹರಿದಾಸ ಸಾಹಿತ್ಯ ಸಾರ, ಪುಟ–25.
3. ರಂ. ಶ್ರೀ. ಮುಗಳಿ, ಕನ್ನಡ ಸಾಹಿತ್ಯ ಚರಿತ್ರೆ, ಪುಟ–250 ಮತ್ತು 251.
4. ಎ. ವಿ. ನಾವಡ ಮತ್ತು ಗಾಯತ್ರಿ ನಾವಡ, ಸಾವಿರಾರು ಕೀರ್ತನೆಗಳು, ಅಂತರಂಗದ ಕದವ ತೆರೆದಾಗ........, ಪುಟ–15.
5. ರಹಮತ್ ತರೀಕೆರೆ (ಸಂ), ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ : 3 ಧರ್ಮ, ಪುಟ–255.
6. ರಂ. ಶ್ರೀ. ಮುಗಳಿ, ಕನ್ನಡ ಸಾಹಿತ್ಯ ಚರಿತ್ರೆ, ಪುಟ–252.
7. ಸಿ. ಎನ್. ಕೃಷ್ಣಮೂರ್ತಿ, ಕನ್ನಡ ಕಾವ್ಯ ಪರಂಪರೆಯ ಪರಿಚಯ, ಪುಟ–382.
8. ಸಿ. ಎನ್. ಕೃಷ್ಣಮೂರ್ತಿ, ಕನ್ನಡ ಕಾವ್ಯ ಪರಂಪರೆಯ ಪರಿಚಯ, ಪುಟ–379.
9. ರಂ. ಶ್ರೀ. ಮುಗಳಿ, ಕನ್ನಡ ಸಾಹಿತ್ಯ ಚರಿತ್ರೆ, ಪುಟ–253.
10. ಸಿ. ಎನ್. ಕೃಷ್ಣಮೂರ್ತಿ, ಕನ್ನಡ ಕಾವ್ಯ ಪರಂಪರೆಯ ಪರಿಚಯ, ಪುಟ–402.
11. 'ಮಲವ ತೊಳೆಯಬಲ್ಲರಲ್ಲದೆ' ಎಂಬ ಕೀರ್ತನೆಯನ್ನು ಎ. ವಿ. ನಾವಡ ಮತ್ತು ಗಾಯತ್ರಿ ನಾವಡ ಅವರು ಸಂಪಾದಿಸಿರುವ 'ಸಾವಿರಾರು ಕೀರ್ತನೆಗಳು' ಪುಸ್ತಕದಿಂದ ಆರಿಸಿಕೊಳ್ಳಲಾಗಿದೆ. ಪುಟ ಸಂಖ್ಯೆ–335.

ಪರಾಮರ್ಶನ ಗ್ರಂಥಗಳು:

1. ಎ. ವಿ. ನಾವಡ ಮತ್ತು ಗಾಯತ್ರಿ ನಾವಡ (ಸಂಪಾದಕರು), ಸಾವಿರಾರು ಕೀರ್ತನೆಗಳು, 2012, ಅಂಕಿತ ಪುಸ್ತಕ, ಬೆಂಗಳೂರು.
2. ಬಸವರಾಜ ಕಲ್ಗುಡಿ, ಅನುಭಾವ ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ, 2013, ಕೆ. ಬಿ. ಪ್ರಗತಿ ಬರಹ ಪಬ್ಲಿಷಿಂಗ್ ಹೌಸ್, ಬೆಂಗಳೂರು.
3. ಚಂದ್ರಿಕಾ ಪಿ. (ಸಂ), ಭಕ್ತಿಯ ಬೆರಗು, 2015–ಸೆಪ್ಟಂಬರ್, ಜನವರಿ, ಮೇ, ಸೆಪ್ಟಂಬರ್–2016, ಅಭಿನವ ಪ್ರಕಾಶನ, ಬೆಂಗಳೂರು.
4. ಸಿ. ಎನ್. ಕೃಷ್ಣಮೂರ್ತಿ, ಕನ್ನಡ ಕಾವ್ಯ ಪರಂಪರೆಯ ಪರಿಚಯ, 2015, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.
5. ಗಿರಡ್ಡಿ ಗೋವಿಂದರಾಜ, ವಚನಗಳಲ್ಲಿ ಭಕ್ತಿಯ ಸಮಸ್ಯೆ, ಸಮಗ್ರ ವಿಮರ್ಶೆ (ಸಂಪುಟ–1), 2013, ಸಪ್ನ ಬುಕ್ ಹೌಸ್, ಬೆಂಗಳೂರು.
6. ಮಹಾಬಲೇಶ್ವರ ರಾವ್ (ಸಂಪಾದನೆ / ಅನುವಾದ), ಭಕ್ತಿ ಕಂಪಿತ (ಎ. ಕೆ. ರಾಮಾನುಜನ್ ಅವರ ಭಕ್ತಿ ಕುರಿತ ಲೇಖನಗಳು), ಜನವರಿ– ಮೇ 2017 (ಸಂಪುಟ–24, ಸಂಚಿಕೆ–1, 2), ಅಭಿನವ ಪ್ರಕಾಶನ, ಬೆಂಗಳೂರು.
7. ನರಹಳ್ಳಿ ಬಾಲಸುಬ್ರಹ್ಮಣ್ಯ, ಕನ್ನಡ ಸಾಹಿತ್ಯ ಪರಂಪರೆ ಮತ್ತು ವರ್ತಮಾನ, 2024, ಅಭಿನವ ಪ್ರಕಾಶನ, ಬೆಂಗಳೂರು.
8. ರಹಮತ್ ತರೀಕೆರೆ (ಸಂ), ಧರ್ಮ (ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ–3), 2000, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
9. ರಂ. ಶ್ರೀ. ಮುಗಳಿ, ಕನ್ನಡಸಾಹಿತ್ಯ ಚರಿತ್ರೆ, ಪರಿಷ್ಕೃತ 27ನೇ ಮುದ್ರಣ–2020, ಗೀತಾ ಬುಕ್ ಹೌಸ್, ಮೈಸೂರು.
10. ಸುಮತಿ ಮುದ್ದೇನಹಳ್ಳಿ, ಕಾವ್ಯ ನಾಗರಕಟ್ಟೆ (ಸಂ), ಅವರವರ ಭಕುತಿಗೆ (ಭಕ್ತಿ ಕುರಿತ ನುಡಿ ಚಿಂತನೆಗಳು), 2017, ಕನ್ನಡ ಸಾಹಿತ್ಯ ರಂಗ, ಯು.ಎಸ್.ಎ.
11. ಶಿವರಾಮಶೆಟ್ಟಿ ಬಿ. (ಸಂ), ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ (ಕನಕದಾಸ ಅಧ್ಯಯನ : ಸಮಗ್ರ ಸಂಪುಟ ಭಾಗ–1), 2013, ಕನಕದಾಸ ಅಧ್ಯಯನ ಪೀಠ, ಕನಕದಾಸ ಸಂಶೋಧನ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು.
12. ತ. ಸು. ಶಾಮರಾಯ, ಕನ್ನಡ ಸಾಹಿತ್ಯ ಚರಿತ್ರೆ, 2014, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಗೋಕುಲಂ ಮೂರನೆಯ ಹಂತ, ಮೈಸೂರು–2.

13. ತಿಪ್ಪೇರುದ್ರಸ್ವಾಮಿ ಎಚ್., ಕನ್ನಡದಲ್ಲಿ ಅನುಭಾವ ಸಾಹಿತ್ಯ, 1962 (ಮೊದಲನೇ ಮುದ್ರಣ), ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು.

14. ವೆಂಕಟೇಶಮೂರ್ತಿ ಎಚ್. ಎಸ್., ಕೀರ್ತನಕಾರರು (ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ, ಸಂಪುಟ–8), 2000, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

15. ಜಿ. ವರದರಾಜರಾವ್, ಹರಿದಾಸ ಸಾಹಿತ್ಯ ಸಾರ, 2015, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

16. ಯತೀಶ್ವರ ಸೀ. ಚ., ಭಾರತೀಯ ಭಕ್ತಿ ಚಳುವಳಿಗಳು, 2017, ಮಹಿಮಾ ಪ್ರಕಾಶನ, ಮೈಸೂರು.

ಜನರಿಂದ, ಜನರಿಗಾಗಿ, ಜನರಿಗೋಸ್ಕರ ಹುಟ್ಟಿದ ಕರ್ನಾಟಕದ ಜಾನಪದ ಕಲೆಗಳು

ಡಾ. ಭವ್ಯ ಅಶೋಕ್ ಸಂಪಗಾರ್
ಕ್ಷಯರೋಗ ವೈದ್ಯಾಧಿಕಾರಿ,
ಜಿಲ್ಲಾಸ್ಪತ್ರೆ, ಬೆಳಗಾವಿ
ಪ್ಲಾಟ್ ನಂ.176
ಶಿವಮೂರ್ತಿ ನಿಲಯ
ಮೂರನೇ ಮುಖ್ಯ ರಸ್ತೆ
ವಿದ್ಯಾನಗರ
ಬಾಕ್ಸೈಟ್ ರಸ್ತೆ ಹತ್ತಿರ
ಬೆಳಗಾವಿ–590001

ಜಾನಪದವೆಂದರೆ ಅದು ಮನುಷ್ಯನು ಓದಲು, ಬರೆಯಲು, ಸಾಂಪ್ರದಾಯಿಕ ಶಿಕ್ಷಣವನ್ನು ಪಡೆಯಲು ಆರಂಭಿಸುವ ಮುನ್ನವೇ ಯಾರ ಹಂಗಿಲ್ಲದೆ ಹಾಗೂ ಲಿಪಿಯ ಅವಶ್ಯಕತೆಯೂ ಇಲ್ಲದೆ ಪ್ರಕೃತಿದತ್ತವಾಗಿ ಒಲಿದು ಬಂದ ಕಲಾಪ್ರಕಾರ. ನಾವು ಯಾವುದೇ ದೇಶ, ಭಾಷೆ ಮತ್ತು ಸಂಸ್ಕೃತಿಯನ್ನು ಗಾಢವಾಗಿ ಅವಲೋಕಿಸಿದರೆ ಜಾನಪದದ ಬೇರುಗಳನ್ನು ಕಂಡೇ ಕಾಣುತ್ತೇವೆ. ಅದರಲ್ಲೂ ಭಾರತೀಯ ಜಾನಪದ ಕಲೆಗಳು ನಮ್ಮ ಧರ್ಮ, ಸಂಸ್ಕೃತಿ ಹಾಗೂ ಪರಂಪರೆಯ ಜೀವಾಳವಾಗಿವೆ. ಅದರಂತೆಯೇ ಕರ್ನಾಟಕದ ಜಾನಪದ ಕಲೆಗಳು ವಿಶ್ವಪ್ರಸಿದ್ಧ. ರಾಜ್ಯದ ಉದ್ದಗಲಕ್ಕೂ ವಿವಿಧ ರೀತಿಯ ಜಾನಪದ ಕಲೆಗಳನ್ನು ಕಾಣಬಹುದು. ನಮ್ಮ ರಾಜ್ಯದಲ್ಲಿ ಪ್ರಚಲಿತದಲ್ಲಿರುವ ಕೆಲವು ಕಲೆಗಳ ಬಗ್ಗೆ ಮಾಹಿತಿ ನೀಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಜಾನಪದ ಕಲೆಗಳೆಂದರೆ ದೃಶ್ಯ ಮಾಧ್ಯಮ, ಸಂಗೀತ, ನೃತ್ಯ, ಕಥೆ ಹೇಳುವಿಕೆ ಹೀಗೆ ಹಲವು ಪ್ರಾಕಾರಗಳಿವೆ. ಕರ್ನಾಟಕದ ಮೂಲೆ ಮೂಲೆಯಲ್ಲಿ ಈ ಕಲಾವಿದರು ಕಾಣಸಿಗುತ್ತಾರೆ. ಅಂಥಹ ಕಲಾವಿದರಿಗೆ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಮನ್ನಣೆ ದೊರೆಯುತ್ತಿದೆ.

ವಿಷಯ ವಿವರಣೆ :

ಕರ್ನಾಟಕ ರಾಜ್ಯದ ಜಾನಪದ ಕಲೆಗಳನ್ನು ಈ ಕೆಳಗಿನ ರೀತಿಯಲ್ಲಿ ದೃಶ್ಯ, ನೃತ್ಯ, ಗೀತೆಗಳು,ಕಥೆಗಳು, ಚಿತ್ರಕಲೆ ಹೀಗೆ ವಿಂಗಡಿಸಿ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ. ಸುಪ್ರಸಿದ್ಧ ಜಾನಪದ ದೃಶ್ಯಕಲೆಗಳು ಮತ್ತು ನೃತ್ಯಪ್ರಕಾರಗಳು ಇಂತಿವೆ.

ಡೊಳ್ಳು ಕುಣಿತ – ಹತ್ತರಿಂದ ಹದಿನಾರು ಜನರು ಡೊಳ್ಳಿನೊಂದಿಗೆ ಮಾಡುವ ಈ ನೃತ್ಯ ಪ್ರಕಾರವು ಚಿತ್ರದುರ್ಗ, ಶಿವಮೊಗ್ಗ, ಮೈಸೂರು ಪ್ರದೇಶಗಳಲ್ಲಿ ಹೆಚ್ಚಾಗಿ ರೂಢಿಯಲ್ಲಿದೆ. ಈ ಕುಣಿತದ ಹಿನ್ನೆಲೆಯಾಗಿ ಡೊಳ್ಳಾಸುರನೆಂಬ ರಕ್ಕಸನ ವಧೆಗಾಗಿ ಶಿವನನ್ನು ಜಾಗೃತಗೊಳಿಸಲು ಮಾಡಿದ ಉಪಾಯವೆಂಬ ಕಥೆಯೂ ಇದೆ. ಬಹಳ ಹಿಂದೆ ದೈಹಿಕ ಸಾಮರ್ಥ್ಯ ಹೊಂದಿದ್ದ ಕುರುಬ ಜನಾಂಗದ ಪುರುಷರಿಗಷ್ಟೇ ಸೀಮಿತವಾಗಿದ್ದ ಈ ಕಲೆ ಈಗ ಕರ್ನಾಟಕದ ಎಲ್ಲಾ ಸಾಂಪ್ರದಾಯಿಕ ಕಾರ್ಯಕ್ರಮಗಳಲ್ಲಿ ಸ್ಥಾನ ಪಡೆದುಕೊಂಡಿದೆ. ಗಂಡು ಕುಣಿತವೆಂದೆ ಪ್ರಸಿದ್ಧಿಯಾಗಿದ್ದರೂ ಈಗ ಮಹಿಳೆಯರ ಡೊಳ್ಳು ಕುಣಿತಕ್ಕೆ ಕೂಡ ಅಷ್ಟೇ ಪ್ರಾಮುಖ್ಯತೆಯಿದೆ.

ಕಂಸಾಳೆ – ಚಾಮರಾಜನಗರ, ಬೆಂಗಳೂರು,ಮೈಸೂರು,ಮಂಡ್ಯ ಜಿಲ್ಲೆಗಳಲ್ಲಿ ಮಲೆ ಮಹದೇಶ್ವರನ ಭಕ್ತರಾದ ದೇವರಗುಡ್ಡರು ಬಳಸುವ ಕಲೆ ಇದಾಗಿದೆ. ಕಂಸಾಳೆಯಲ್ಲಿ ಎರಡು ವಿಧ. ಬೀಸು ಕಂಸಾಳೆ ಮತ್ತು ಕುಳಿತು ಹಾಡುವ ಕಂಸಾಳೆ. ಈ ಕಲೆಯಲ್ಲಿ ಶಿವ ಮತ್ತು ಶರಣರ ಮಹಿಮೆಗಳನ್ನು ಕಥಾರೂಪದಲ್ಲಿ ಹೇಳುವ ಪ್ರಯತ್ನವಿರುತ್ತದೆ. ಎಷ್ಟೇ ಚುರುಕಿನಿಂದ ನಡೆದರೂ ತಾಳದ ಜೊತೆಗೆ ಎಂದಿಗೂ ಲಯತಪ್ಪದೆ ಪ್ರದರ್ಶನ ನೀಡುವುದು ಈ ಕಲೆಯ ಹೆಚ್ಚುಗಾರಿಕೆ.

ಸೋಮನ ಕುಣಿತ – ಗ್ರಾಮ ದೇವತೆಗಳ ಆರಾಧನೆಯ ಸಮಯದಲ್ಲಿ ಸರ್ವೇಸಾಮಾನ್ಯವಾಗಿ ಗಂಗಾಮತ ಸಮುದಾಯದವರು ನಡೆಸಿಕೊಡುವ ಈ ಕಲೆಯು ಧಾರ್ಮಿಕ ಆಚರಣೆಗಳ ರೂಪವಾಗಿದ್ದು, ಮುಖವಾಡಗಳೊಂದಿಗೆ (ಸೋಮಗಳು) ಮಾಡುವ ನೃತ್ಯ ರೂಪಕವಾಗಿ ದಕ್ಷಿಣ ಕರ್ನಾಟಕದಲ್ಲಿ ಹೆಚ್ಚು ರೂಢಿಯಲ್ಲಿದೆ.

ಸುಗ್ಗಿ ಕುಣಿತ – ಇದು ಕೂಡ ದಕ್ಷಿಣ ಕರ್ನಾಟಕದಲ್ಲಿ ಜನಪ್ರಿಯವಾಗಿರುವ ಒಂದು ನೃತ್ಯ ಪ್ರಕಾರ. ಸುಗ್ಗಿಯ ಸಮಯದಲ್ಲಿ ರೈತ ಸಮುದಾಯದವರು ಮರದ

ಶಿರಸ್ತ್ರಾಣದೊಂದಿಗೆ ಹೂವುಗಳ ಅಲಂಕಾರ ಮಾಡಿಕೊಂಡು ಕೋಲು, ನವಿಲುಗರಿ, ಡ್ರಮ್ ಗಳೊಂದಿಗೆ ತಮ್ಮ ಸ್ವಂತಿಕೆಯನ್ನು ಬಳಸಿ ನಿರೂಪಿಸುವ ಈ ಕಲೆ ನೋಡಲು ಆಕರ್ಷಕ.

ಲಾವಣಿ – ಮಹಾರಾಷ್ಟ್ರದ ಜನಪ್ರಿಯ ಕಲೆಯಾದ ಲಾವಣಿ ಕರ್ನಾಟಕದ ಹಲವಾರು ಭಾಗಗಳಲ್ಲಿಯೂ ಸುಪ್ರಸಿದ್ಧಿ. ಉತ್ಸಾಹ ತುಂಬಿದ ನಾಟಕೀಯ ನೃತ್ಯ ಪ್ರಕಾರವಾದ ಇದು ರಂಗಭೂಮಿಗೆ ಸಿಕ್ಕ ಅತ್ಯಂತ ಉತ್ಕೃಷ್ಟ ಕೊಡುಗೆಯಾಗಿದೆ.

ಕೃಷ್ಣ ಪಾರಿಜಾತ – ಯಕ್ಷಗಾನ ಮತ್ತು ಬಯಲಾಟಗಳನ್ನು ಒಟ್ಟಾಗಿ ಸಂಯೋಜಿಸಿದ ಈ ಕಲೆ ಉತ್ತರ ಕರ್ನಾಟಕ ಭಾಗದಲ್ಲಿ ಬಹಳ ಪ್ರಸಿದ್ಧ. ಇದು ಮಹಾಭಾರತದ ಹಾಗೂ ಕೃಷ್ಣನ ಕಥೆಗಳ ರೂಪಕವಾಗಿದೆ.

ಕರಡೆ ಮಜಲು – ಅಂಗೈ ಗಾತ್ರದ ತಾಳೆ ಅಂದರೆ ಕರಡೆ ಮತ್ತು ಶಹನಾಯಿ ವಾದ್ಯವನ್ನು ಬಳಸಿ ಪ್ರಸ್ತುತಪಡಿಸುವ ಈ ಕಲೆ ಉತ್ತರ ಕರ್ನಾಟಕದ ವೈಶಿಷ್ಟ್ಯ.

ಜಗ್ಗ ಹಳಿಗೆ ಕುಣಿತ – ಸುಮಾರು ಹದಿನೈದು ಜನರನ್ನು ಒಳಗೊಂಡ ಈ ಕುಣಿತವು ಹೆಚ್ಚಾಗಿ ಹುಬ್ಬಳ್ಳಿ ಧಾರವಾಡ ಭಾಗದಲ್ಲಿ ರೂಢಿಯಲ್ಲಿದೆ. ಇದರಲ್ಲಿ ಜಗ್ಗಲಿಗೆ ಮತ್ತು ಕಣಿಹಳಿಗೆ ಎಂಬ ತಾಳವಾದ್ಯಗಳನ್ನು ಬಳಸಿಕೊಂಡು ನೀಡುವ ಈ ವಿಶಿಷ್ಟ ನೃತ್ಯವನ್ನು ಯುಗಾದಿ ಮತ್ತು ಹೋಳಿ ಹಬ್ಬಗಳ ಸಂದರ್ಭದಲ್ಲಿ ಪ್ರದರ್ಶಿಸಲಾಗುತ್ತದೆ.

ಯಕ್ಷಗಾನ – ಇದು ಜನಪದ ಕಲೆಗಿಂತಲೂ ಹೆಚ್ಚಾಗಿ ಕರ್ನಾಟಕದ ಸಾಂಸ್ಕೃತಿಕ ರಾಯಭಾರಿಯಾಗಿ ಗುರುತಿಸಿಕೊಂಡಿದೆ. ದಕ್ಷಿಣಕನ್ನಡ, ಮಲೆನಾಡು, ಕರಾವಳಿ ಜಿಲ್ಲೆಗಳ ಜೀವಾಳವಾಗಿರುವ ಯಕ್ಷಗಾನದಲ್ಲಿ ಸಂಗೀತ, ನೃತ್ಯ, ಪಾಂಡಿತ್ಯ ಪೂರ್ಣ ಸಂಭಾಷಣೆ, ವರ್ಣರಂಜಿತ ವೇಷಭೂಷಣ ಎಲ್ಲವೂ ಪ್ರಾಧಾನ್ಯತೆ ಪಡೆದುಕೊಂಡಿವೆ. ಬಹಳಷ್ಟು ವಿದ್ವಾಂಸರ ಪ್ರಕಾರ ಕ್ರಿ.ಶ1500 ವರ್ಷಗಳ ಹಿಂದೆಯೇ ವ್ಯವಸ್ಥಿತ ಯಕ್ಷಗಾನ ರೂಢಿಯಲ್ಲಿತ್ತು ಎಂಬ ಅಭಿಪ್ರಾಯವಿದೆ.

ಭೂತಾರಾಧನೆ – ಇತ್ತೀಚಿನ ‘ಕಾಂತಾರ’ ಚಲನಚಿತ್ರದಿಂದ ವಿಶ್ವಪ್ರಸಿದ್ಧಿಯಾದ ಭೂತಾರಾಧನೆ ಕರಾವಳಿ ಪ್ರದೇಶದ ಜನರ ಧಾರ್ಮಿಕ ಭಾವನೆಗಳೊಂದಿಗೆ ಬೆಸೆದುಕೊಂಡಿದೆ. ವೇಷ ಹಾಕಿದ ನರ್ತಕನು ತ್ವರಿತವಾಗಿ ನಂತರ ನಿಧಾನ ಗತಿಯ ಚಲನೆಯ ಮೂಲಕ ದೈವಿಕ ಸ್ವರೂಪವನ್ನು ಸೂಚಿಸುತ್ತಾನೆ. ಭೂತ ಪದವು ತುಳು ಜನರ ಸಾಂಸ್ಕೃತಿಕ ಪದಕೋಶದಲ್ಲಿದ್ದು ದೈವ ಮತ್ತು ದೇವರನ್ನು ಒಂದಾಗಿ ಕಾಣುವ ಅವರ ಧಾರ್ಮಿಕ ನೆಲೆಗಟ್ಟಾಗಿದೆ. ಕ್ರಿ.ಶ 1379ರಷ್ಟು ಹಳೆಯದಾದ ಕಾರ್ಕಳದಲ್ಲಿ ದೊರೆತ ಶಾಸನದಲ್ಲಿಯೂ ಕೂಡ ಭೂತಾರಾಧನೆಯ ವಿವರಗಳಿವೆ.

ಹುತ್ತರಿ – ಕೊಡವ ಸಾಂಪ್ರದಾಯಿಕ ವೇಷಭೂಷಣಗಳೊಂದಿಗೆ, ಅಲಂಕಾರಿಕ ಶಸ್ತ್ರಗಳೊಂದಿಗೆ ಮಾಡುವ ಈ ನಿಧಾನ ಗತಿಯ ನೃತ್ಯ ನೋಡಲು ಆಕರ್ಷಕವಾಗಿರುವುದಲ್ಲದೆ ಕೊಡವರ ಹಿರಿಮೆಯ ಪ್ರತೀಕವಾಗಿದೆ.

ಬೋಲಾಕ್– ಆತ್– ಎಣ್ಣೆಯ ದೀಪದ ಹಿಂಭಾಗದಲ್ಲಿ ಕೊಡವ ಪುರುಷರು ಮಾಡುವ ನೃತ್ಯ ಪ್ರಕಾರವು ಇದಾಗಿದೆ.

ಉಮ್ಮತ್– ಆತ್– ಕೊಡವ ಮಹಿಳೆಯರು ಸಾಂಪ್ರದಾಯಿಕ ವೇಷ ಭೂಷಣಗಳೊಂದಿಗೆ ಆಭರಣಗಳೊಂದಿಗೆ ಈ ನೃತ್ಯವನ್ನು ಪ್ರದರ್ಶಿಸುತ್ತಾರೆ. ಒಬ್ಬ ಮಹಿಳೆಯು ಕಾವೇರಿ ತಾಯಿಯನ್ನು ಪ್ರತಿನಿಧಿಸಿ ಮಧ್ಯದಲ್ಲಿ ನಿಂತಿರುತ್ತಾರೆ.

ಕೊಂಬ್– ಆಟ್– ಧಾರ್ಮಿಕ ಹಿನ್ನೆಲೆಯ ಈ ನೃತ್ಯವು ಕೊಡವರ ಯುದ್ಧ ಕಲೆಯನ್ನು ಸಾರುತ್ತದೆ. ಜಿಂಕೆಯ ಕೊಂಬುಗಳು, ತಾಳಗಳು, ವಾದ್ಯಗಳನ್ನು ಒಳಗೊಂಡ ಈ ಕಲೆಯನ್ನು ಸಾಮಾನ್ಯವಾಗಿ ದೇವಸ್ಥಾನಗಳಲ್ಲಿ ಪ್ರದರ್ಶಿಸಲಾಗುತ್ತದೆ.

ವೀರಗಾಸೆ– ಶೈವರ ಧಾರ್ಮಿಕ ಆಚರಣೆಗಳ ಭಾಗವಾಗಿ ಪ್ರದರ್ಶನಗೊಳ್ಳುವ ವೀರಗಾಸೆಯು ಗಂಡುಕಲೆಯೆಂದೇ ಹೆಸರುವಾಸಿ. ಪಾರ್ವತಿಯ ಅಗ್ನಿ ಪ್ರವೇಶದ ನಂತರ ಕುಪಿತನಾದ ಶಿವನಿಂದ ಉದ್ಭವವಾಗುವ ವೀರಭದ್ರನ ಉಗ್ರ ನರ್ತನದ ಪ್ರತೀಕವಾದ ಈ ನೃತ್ಯ ವೀರಾವೇಶದಿಂದ ಕೂಡಿರುತ್ತದೆ. ಈಗೀಗ ಹೆಣ್ಣುಮಕ್ಕಳ ತಂಡಗಳೂ ವೀರಗಾಸೆಯಲ್ಲಿ ಸಕ್ರಿಯವಾಗಿವೆ.

ತೊಗಲುಗೊಂಬೆ ಆಟ – ನೆರಳು ಮತ್ತು ಗೊಂಬೆಗಳೊಂದಿಗೆ ಮಾಡುವ ಈ ವಿಶಿಷ್ಟ ಪ್ರಕಾರವಾದ ಆಟದ ಕುರಿತು ಕರ್ನಾಟಕ ಚಿತ್ರಕಲಾಪರಿಷತ್ತಿನ ವತಿಯಿಂದ ಬಹಳ ಆಳವಾದ ಅಧ್ಯಯನವನ್ನು ಮಾಡಲಾಗಿದೆ. ಕಿಳ್ಳೆಕ್ಯಾತ, ಸಿಳ್ಳೆಕ್ಯಾತ, ಕೋಲುಕ್ಯಾತ, ಗೊಂಬೆರಾಮರು ಮುಂತಾಗಿ ತೊಗಲುಗೊಂಬೆ ಆಟದವರನ್ನು ಗುರುತಿಸಲಾಗುತ್ತದೆ. ಇತ್ತೀಚೆಗೆ ಕೊಪ್ಪಳದ "ಭೀಮವ್ವ ಶಿಳ್ಳೇಕ್ಯಾತರ" ಅವರು ತೊಗಲುಗೊಂಬೆ ಆಟದಲ್ಲಿ ತಮ್ಮ ಜೀವಮಾನ ಸಾಧನೆಗಾಗಿ ಪದ್ಮಶ್ರೀ ಪ್ರಶಸ್ತಿ ಪಡೆದಿದ್ದನ್ನು ನಾವಿಲ್ಲಿ ಸ್ಮರಿಸಬಹುದು.

ಗಾರುಡಿ ಗೊಂಬೆ – ಎತ್ತರವಾದ ಬಿದಿರಿನ ಕಡ್ಡಿಗಳಿಂದ ಮಾಡಿದ ಹಾಗೂ ವರ್ಣರಂಜಿತ ಉಡುಪುಗಳಿಂದ ಶೃಂಗರಿಸಿದ ಬೊಂಬೆಗಳ ಒಳಗೆ ಒಬ್ಬ ವ್ಯಕ್ತಿಯು ಪ್ರವೇಶಿಸಿ ನೃತ್ಯವನ್ನು ಮಾಡುತ್ತಾನೆ. ಈ ಕಲೆಯು ಮೈಸೂರು ದಸರಾ ಸೇರಿದಂತೆ ಅನೇಕ ಉತ್ಸವಗಳ ಮುಖ್ಯ ಆಕರ್ಷಣೆಯಾಗಿದೆ.

ಜೂಡು ಹಲಗಿ – ಹಿಂದೂ ಪುರಾಣಗಳಲ್ಲಿ ಬೇರೂರಿರುವ ಈ ವಿಶಿಷ್ಟ ಕಲೆಯು ಎರಡು ಅಥವಾ ಮೂರು ಕಲಾವಿದರಿಂದ ಪ್ರದರ್ಶಿತವಾಗುತ್ತದೆ ಹಾಗೂ ಎರಡು

ತಾಳವಾದ್ಯಗಳನ್ನು ಒಳಗೊಂಡಿರುತ್ತದೆ.

ಪಟ ಕುಣಿತ – ಮೈಸೂರು ದಸರದ ಇನ್ನೊಂದು ಮುಖ್ಯ ಆಕರ್ಷಣೆಯಾಗಿರುವ ಪಟಕುಣಿತದಲ್ಲಿ ವರ್ಣರಂಜಿತವಾಗಿ ಅಲಂಕೃತವಾದ ಉದ್ದವಾದ ಬಿದಿರಿನ ಕೋಲುಗಳನ್ನು (ಪಟಗಳು) ಬಳಸಲಾಗುತ್ತದೆ.ಲಯಬದ್ದವಾಗಿ ಕುಣಿಯುವ ಮೂಲಕ ಧಾರ್ಮಿಕ ಹಾಗೂ ಸಾಂಸ್ಕೃತಿಕ ಮೆರವಣಿಗೆಗಳಿಗೆ ಅತ್ಯಾಕರ್ಷಕ ಮೆರುಗು ನೀಡುತ್ತದೆ.

ಕರಗ – ತಿಗಳ ಕ್ಷತ್ರಿಯರ ಧಾರ್ಮಿಕ ಆಚರಣೆಗಳ ಭಾಗವಾಗಿರುವ ಕರಗವು ಬೆಂಗಳೂರು,ಕೋಲಾರ, ತಮಿಳುನಾಡಿನಲ್ಲಿ ಹೆಚ್ಚು ಪ್ರಚಲಿತ. ದ್ರೌಪದಿಯನ್ನು ಶಕ್ತಿದೇವತೆಯಾಗಿ ಆರಾಧಿಸುತ್ತ ತಲೆಯ ಮೇಲೆ ಕಳಿಸಿ ಹೊತ್ತು ನರ್ತಿಸುತ್ತ ಹರಕೆ ತೀರಿಸುವ ಆಚರಣೆಯಾಗಿದೆ.

ನಾಗಮಂಡಲ – ‘ವೈದ್ಯರು’ ಎಂದೇ ಕರೆಯಲ್ಪಡುವ ನರ್ತಕರು ನೆಲದ ಮೇಲೆ ಚಿತ್ರಿಸಿರುವ ಬೃಹತ್ ನಾಗನ ಚಿತ್ರದ ಸುತ್ತಲೂ ನರ್ತಿಸುತ್ತಾರೆ. ಇದು ದಕ್ಷಿಣ ಕರ್ನಾಟಕದ ನಾಗಾರಾಧನೆಯ ಪ್ರಕಾರವಾಗಿದೆ.

ಗೊರವರ ಕುಣಿತ – ಉತ್ತರ ಕರ್ನಾಟಕ ಮತ್ತು ಮೈಸೂರು ಪ್ರದೇಶದಲ್ಲಿ ಹುಟ್ಟಿದ ಈ ಕಲೆಯು ಯಾವುದೇ ಸಾಂಪ್ರದಾಯಿಕ ನೃತ್ಯಶೈಲಿಯನ್ನು ಹೊಂದಿರುವುದಿಲ್ಲ. ವಿಶಿಷ್ಟವಾದ ವೇಷಭೂಷಣಗಳೊಂದಿಗೆ, ಡಮರು,ಗಂಟೆ, ತಾಳವಾದ್ಯಗಳಿಂದ ಶಿವನ ಆರಾಧನೆಯ ಉದ್ದೇಶದಿಂದ ಇದನ್ನು ಪ್ರಸ್ತುತ ಪಡಿಸಲಾಗುತ್ತದೆ.

ಹಗಲುವೇಷ – ಹೆಚ್ಚಾಗಿ ಹಗಲಿನಲ್ಲಿಯೇ ಪ್ರದರ್ಶನಗೊಳ್ಳುವ ಹಗಲುವೇಷಧಾರಿಗಳು ದೈನಂದಿನ ಜೀವನ, ಪೌರಾಣಿಕ ಕಥೆ,ವಚನ ಸಾಹಿತ್ಯಗಳಲ್ಲದೆ ಸಾಮಾಜಿಕ ಸಮಸ್ಯೆಗಳನ್ನೂ ಕೂಡ ರೂಪಕವಾಗಿ ಚಿತ್ರಿಸುತ್ತಾರೆ. ಅವರನ್ನು ಸುಡುಗಾಡು ಸಿದ್ಧರು ಅಥವಾ ಬಹುರೂಪಿಗಳೆಂದೂ ಗುರುತಿಸಲಾಗುತ್ತದೆ.

ಆಟಿಕಳೆಂಜ – ತುಳುವರಲ್ಲಿ ಆಟಿ ಎಂದರೆ ಆಷಾಢ ಮಾಸ ಮತ್ತು ಕಳೆಂಜ ಎಂದರೆ ಭೂತ. ನಲಿಕೆ ಮತ್ತು ಮೇರು ಜನಾಂಗದವರ ನೃತ್ಯಪ್ರಕಾರವಿದು.

ಕಂಗಿಲು ಕುಣಿತ – ಕಂಗ್ ಎಂದರೆ ಅಡಿಕೆ. ಇದು ಮಾರ್ಚ್ ತಿಂಗಳಿನ ಮೊದಲ ಹುಣ್ಣಿಮೆಯಂದು ಕರಾವಳಿ ಭಾಗಗಳಲ್ಲಿ ಅಡಿಕೆ ನಾರಿನಲ್ಲಿ ಮಾಡಿದ ವೇಷಭೂಷಣ ತೊಟ್ಟು ಪಾತ್ರಧಾರಿಗಳು ನಡೆಸಿಕೊಡುವ ದೈವ ಕುಣಿತ.

ಗುಮಟೆ ಕುಣಿತ – ಗುಮಟೆ ದಕ್ಷಿಣ ಕನ್ನಡದಲ್ಲಿ ಪ್ರಸಿದ್ಧವಾದ ವಾದ್ಯ. ಮಣ್ಣಿನಿಂದ ಮತ್ತು ಉಡ ಅಥವಾ ಮೇಕೆಯ ಚರ್ಮದಿಂದ ತಯಾರಿಸಿದ ಈ ವಾದ್ಯವನ್ನು ಬಾರಿಸುತ್ತ ಹಾಡುತ್ತ ಮನೆ ಮನೆಗೆ ಹೋಗಿ ಪ್ರದರ್ಶಿಸುವ ಕಲೆಯಿದು.

ಗೊಂಡರ ಹೋಳಿ ಕುಣಿತ – ಉತ್ತರ ಕನ್ನಡ ಮತ್ತು ಶಿವಮೊಗ್ಗ ಸೀಮೆಯ ಬುಡಕಟ್ಟು ಜನಾಂಗವಾದ ಗೊಂಡರು ನಡೆಸಿಕೊಡುವ ಕಲೆಯಿದು.

ತಾರ್ಲೆ ಕುಣಿತ – ಕಾರವಾರ, ಅಂಕೋಲ ಸೀಮೆಗಳಲ್ಲಿ ಹಾಲಕ್ಕಿ ಹೆಣ್ಣುಮಕ್ಕಳ ನೃತ್ಯವಾಗಿದೆ.

ಪುಗಡಿ ಕುಣಿತ – ಇದು ಉತ್ತರ ಕನ್ನಡ ಜಿಲ್ಲೆಯಲ್ಲಿ ಕಾಣಸಿಗುವ ಮೀನುಗಾರ ಹೆಂಗಸರ ಜಾನಪಧ ನೃತ್ಯಪ್ರಾಕಾರವಾಗಿದೆ.

ದೃಶ್ಯಕಲೆಗಳಷ್ಟೇ ಪ್ರಭಾವಕಾರಿಯಾಗಿ ಜಾನಪದ ಸಾಹಿತ್ಯವೂ ಕೂಡ ನಮ್ಮ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿವೆ. ಅವು ಎಷ್ಟು ವಿಧಗಳೆಂದು ನಿರ್ಧರಿಸುವುದೇ ಅತ್ಯಂತ ಕಠಿಣ ಏಕೆಂದರೆ

ಗೀಗೀ ಪದಗಳು

ರಾಗಿ ಬೀಸುವ ಪದಗಳು

ಕಂಸಾಳೆ ಪದಗಳು

ಕೋಲಾಟದ ಪದಗಳು

ಸುಗ್ಗಿ ಹಾಡುಗಳು

ಭಕ್ತಿ ಪ್ರಧಾನವಾಗಿ ದೇವರ ಹಾಡುಗಳು

ಗಾದೆಗಳು

ಒಗಟುಗಳು

ಜೋಗುಳಗಳು

ಸೀಮಂತದ ಪದಗಳು

ಮುತ್ತೈದೆ ಪದಗಳು

ಲಾವಣಿಗಳು

ಹೀಗೆ ಜನಮಾನಸದ ಎಲ್ಲಾ ಭಾವಗಳನ್ನೂ, ಜೀವನದ ಎಲ್ಲಾ ಮಗ್ಗುಲುಗಳನ್ನೂ ಜಾನಪದ ಸಾಹಿತ್ಯ ಮುಟ್ಟಿದೆ.

ಜಾನಪದ ಕಥಾ ಭಂಡಾರವೂ ಕೂಡ ಅತ್ಯಧಿಕ ಮಟ್ಟದಲ್ಲಿ ಪ್ರಚಾರದಲ್ಲಿದೆ. ತ್ಯಾಗ, ವಂಚನೆ, ಜಾಣತನ, ಪುರಾಣ, ದಯೆ ಹೀಗೆ ಹಲವು ವಿಧಗಳಲ್ಲಿ ಕತೆಗಳನ್ನು ಹೆಣೆಯಲಾಗಿರುತ್ತದೆ. ನರಿಯೊಂದು ದ್ರಾಕ್ಷಿ ಹುಳಿಯೆಂದು ಹೋಗುವ, ಮೊಲವು ಅತಿಯಾದ ಆತ್ಮವಿಶ್ವಾಸದಿಂದ ಆಮೆಯ ಎದುರು ಓಟದ ಸ್ಪರ್ಧೆಯಲ್ಲಿ ಸೋಲುವ ಹಾಗೆಯೇ ಅಣ್ಣ–ತಂಗಿ, ದಂಪತಿಗಳು, ತಂದೆ–ತಾಯಿ ಸಂಬಂಧಗಳ ಮಹತ್ವ ಸಾರುವ

ಕತೆಗಳಿಗೆ ಬರವಿಲ್ಲ. ನಮ್ಮ ಜನಪದರು ಪ್ರತಿಯೊಂದು ಹಬ್ಬದ ವೈಶಿಷ್ಟ್ಯವನ್ನೂ ಕೂಡ ಕತೆಯ ರೂಪದಲ್ಲಿ ಹಿಡಿದಿಟ್ಟಿದ್ದಾರೆ.

ಜಾನಪದ ಚಿತ್ರಕಲೆಗಳಾದ “ಚಿತ್ತಾರ” ದಂತಹ ಕಲೆ ಶಿವಮೊಗ್ಗ ಮತ್ತು ದಕ್ಷಿಣ ಕನ್ನಡದ ಮನೆ ಮನೆಯಲ್ಲಿ ಕಾಣಬಹುದಾಗಿದೆ. ಕೆಂಪು ಮಣ್ಣಿನ ಗೋಡೆಯ ಮೇಲೆ ಬಿಳಿಯ ಬಣ್ಣದಿಂದ ರಚಿಸಲ್ಪಟ್ಟ ಸಂಕೀರ್ಣ ಕಲೆಯಾಗಿದೆ.

ಜಾನಪದದಲ್ಲಿ ಬಿದರಿ ಕಲೆಗಳು, ಕಸೂತಿ, ಕೌದಿ ಹೊಲಿಗೆ, ಲಂಬಾಣಿಗರ ತೊಡುಗೆಗಳು ಹೀಗೆ ಹತ್ತು ಹಲವು ಕುಸುರಿ ಕಲೆಗಳನ್ನು ಕರ್ನಾಟಕದ ಜನರಿಂದ ಜಾನಪದ ಲೋಕಕ್ಕೆ ಕೊಡುಗೆಗಳೆಂದು ನಾವು ಹೆಮ್ಮೆ ಪಡಬೇಕು.

ಬಹಳಷ್ಟು ಜಾನಪದ ಕಲೆಗಳು ಧಾರ್ಮಿಕ ಹಿನ್ನೆಲೆಯಿಂದ ಬಂದರೂ ಮನರಂಜನೆಗೆ ಹೆಚ್ಚಿನ ಒತ್ತು ನೀಡಿವೆ. ಅನಕ್ಷರಸ್ಥ ಗ್ರಾಮೀಣ ಭಾಗದ ಜನರಿಂದಲೇ ಸೃಷ್ಟಿಸಲ್ಪಟ್ಟ ಜಾನಪದ ಪ್ರಾಕಾರಗಳು ದೇವರ ಮೇಲಿನ ಭಕ್ತಿ, ಮನೆಯವರೊಂದಿಗಿನ ಮಮತೆ, ರಾಜರುಗಳ ಪರಾಕ್ರಮ, ಮಕ್ಕಳ ಬೆಳವಣಿಗೆ, ಹೆಣ್ಣಿನ ಜೀವನದ ಸುಖ–ದುಃಖಗಳು, ಬಡತನ, ತಾಯಿ,ತವರು, ಮುತ್ತೈದೆತನ ಹೀಗೆ ಜೀವನದ ನೂರೆಂಟು ಮಜಲುಗಳನ್ನು ಅತ್ಯಂತ ಸರಳವಾದ ಭಾಷೆಯಲ್ಲಿ ಪರಿಚಯಿಸುತ್ತವೆ.

ಪರಂಪರಾಗತವಾಗಿ ಲಿಪಿಯ ಆಧಾರವಿಲ್ಲದೆ ಬಾಯಿಂದ ಬಾಯಿಗೆ ಹರಡಿ ತಲೆಮಾರಿನಿಂದ ತಲೆಮಾರಿಗೆ ವ್ಯಾಪಿಸಿದ ಜಾನಪದ ಕಲೆಗಳು ಕಾಲಕ್ಕೆ ತಕ್ಕಂತೆ ಬದಲಾದರೂ ಅಥವಾ ಅವುಗಳಲ್ಲಿ ಪ್ರಾದೇಶಿಕ ಬದಲಾವಣೆಗಳು ಕಂಡುಬಂದರೂ ಮೂಲ ಆಶಯಕ್ಕೆ ಎಂದೂ ಧಕ್ಕೆ ಬಂದಿಲ್ಲ.ಬ್ರಾಹ್ಮಣರು, ಲಿಂಗಾಯತರು, ದಲಿತರು ಎಂಬ ಭೇದವಿಲ್ಲದೆ ಸರ್ವಜನಾಂಗದ ಜೀವನಶೈಲಿಯನ್ನು ಪ್ರತಿನಿಧಿಸುವ ಜಾನಪದವು ಯಾವುದೇ ಒಂದು ಚೌಕಟ್ಟಿನಲ್ಲಿರದೆ ಕಾಲ ಉರುಳಿದಂತೆ ಬದಲಾಗುತ್ತ ಆಯಾ ಕಾಲಮಾನದ ಜನರ ನಡೆ,ನುಡಿ, ಆಚರಣೆಗಳ, ನಂಬಿಕೆಗಳ ಸಾಕ್ಷಿಯಾಗಿದೆ.

ಉಪಸಂಹಾರ :

ಪುರಾತನ ಶಿಲ್ಪಕಲಾ ವೈಭವವನ್ನು ಹೇಗೆ ಈಗಿನ ತಾಂತ್ರಿಕತೆ ಸೃಷ್ಟಿಸಲಾರದೋ ; ಸಾವಯವ ಕೃಷಿಯಿಂದ ಬೆಳೆದ ಧಾನ್ಯಗಳ ರುಚಿಯನ್ನು ರಾಸಾಯನಿಕಗಳು ಹೇಗೆ ನೀಡಲಾರವೋ ಹಾಗೆಯೇ ಮಣ್ಣಿನ ಸೊಗಡನ್ನು ಸೂಸುವ ಜಾನಪದವು ನೀಡುವ ಜ್ಞಾನ ಮತ್ತು ಆನಂದ ಅವರ್ಣನೀಯವಾಗಿದೆ.

ಆಧುನಿಕತೆಯ ಹೆಸರಿನಲ್ಲಿ ಈಗಿನ ಸಮಾಜವು ಸೋಮಾರಿಗಳನ್ನು, ಹೇಡಿಗಳನ್ನು ಹೆಚ್ಚಾಗಿ ಸೃಷ್ಟಿಸುತ್ತಿದೆ. ಇಂಥಹ ಕಾಲಘಟ್ಟದಲ್ಲಿ ಜಾನಪದದ ಅವಶ್ಯಕತೆ

ಎಂದಿಗಿಂತಲೂ ಅವಶ್ಯಕವಾಗಿದೆ. ಏಕೆಂದರೆ ಜನಪದ ಸಾಹಿತ್ಯದ ಮೂಲ ಆಶಯ ಶ್ರಮ ಮತ್ತು ಕಾಯಕವನ್ನು ಒಳಗೊಂಡಿದೆ. ಪ್ರತಿಯೊಂದು ಜಾನಪದ ನೃತ್ಯದಲ್ಲೇ ಆಗಲಿ ಅಥವಾ ಹಾಡುಗಳಲ್ಲೇ ಆಗಲಿ ಕರ್ಮಯೋಗದ ಪಾಠವನ್ನು ನಾವು ಕಾಣಬಹುದು. ಇದರೊಂದಿಗೆ ಹಿರಿಯರ ಮತ್ತು ಕಿರಿಯರ ನಡುವಿನ ಸಂಬಂಧದ ಸ್ವರೂಪದ ಬಗ್ಗೆಯೂ ಬಹಳಷ್ಟು ವಿವರಣೆಗಳಿವೆ. ಸಾಮಾಜಿಕ ಸ್ವಾಸ್ಥ್ಯವು ಹದಗೆಡುತ್ತಿರುವ ಇಂತಹ ಹೊತ್ತಿನಲ್ಲಿ ಯುವ ಜನಾಂಗಕ್ಕೆ ಜಾನಪದದ ಅರಿವನ್ನು ಮೂಡಿಸುವ ಅಗತ್ಯತೆಯಿದೆ.

ಜಾನಪದ ಪ್ರಕಾರಗಳು ನಮ್ಮ ಸಂಸ್ಕೃತಿಯ ಭಾಗವಾಗಿದ್ದು ಮುಂದಿನ ಪೀಳಿಗೆಗೂ ನಮ್ಮ ಇತಿಹಾಸ – ನಂಬಿಕೆ – ಸಂಪ್ರದಾಯಗಳು ಮುಂದುವರೆಸುವುದು ನಮ್ಮ ಗುರುತರ ಜವಾಬ್ದಾರಿಯೂ ಹೌದು.

ಆಕರ ಗ್ರಂಥಗಳು ಮತ್ತು ಲೇಖನಗಳು :

1. ಜನಪದ ಕಲೆಗಳು ಮತ್ತು ಪ್ರಾಯೋಗಿಕತೆ– ಡಾ.ಅಪ್ಪಗೆರೆ ತಿಮ್ಮರಾಜು
2. ಕರ್ನಾಟಕದ ಜಾನಪದ ಕಲೆಗಳು–ಒಮ್ಮೆ ಓದಿ ನೋಡಿ–2015
3. ವಿಶ್ವ ಕನ್ನಡ– ಕರ್ನಾಟಕ ಜಾನಪದ ಕಲೆಗಳು–ಸಂ.ಗೊ.ರು.ಚನ್ನಬಸಪ್ಪ
4. ಕರಾವಳಿ ಕರ್ನಾಟಕ ಜಾನಪದ ಕಲೆಗಳು– ಡಾ.ಚಕ್ಕೆರೆ ಶಿವಶಂಕರ್
5. ಕರ್ನಾಟಕ ಜಾನಪದ ಕಲೆಗಳ ಮಹತ್ವ– ಡಾ.ನಟರಾಜ್.ಡಿ.ಕೆ
6. ಕರ್ನಾಟಕ ಸಂಸ್ಕೃತಿ ಸಮೀಕ್ಷೆ– ಎಚ್.ತಿಪ್ಪೇರುದ್ರ ಸ್ವಾಮಿ, ಡಿ.ವಿ.ಕೆ.ಮೂರ್ತಿ
7. ಸಾಂಸ್ಕೃತಿಕ ಅಧ್ಯಯನ ರಹಮತ್ ತರೀಕೆರೆ
8. ಕನ್ನಡ ಜನಪದ ಸಾಹಿತ್ಯ ಪ್ರಕಾರಗಳು – ಡಾ.ಹಿ.ಶಿ.ರಾಮಚಂದ್ರೇಗೌಡ
9. ಮಹಿಳಾ ಜಾನಪದ – ಡಾ.ಕೆ.ಆರ್.ಸಂಧ್ಯಾರೆಡ್ಡಿ
10. ಕರ್ನಾಟಕದ ಜಾನಪದ ಚಿತ್ರಕಲೆ ಡಾ.ಎಸ್.ಸಿ.ಪಾಟೀಲ್

***

ಮನ ಮಂದಿರ

1

ಡಾ. ರವಿಶಂಕರ್ ಎ.ಕೆ

ಸಹಾಯಕ ಪ್ರಾಧ್ಯಾಪಕ
ಸಮಾಜ ವಿಜ್ಞಾನಗಳು ಮತ್ತು ಭಾಷಾ ವಿಭಾಗ
ಕ್ರಿಸ್ತು ಜಯಂತಿ ಡೀಮ್ಡ್ ಟು ಬಿ
ವಿಶ್ವವಿದ್ಯಾಲಯ, ಬೆಂಗಳೂರು.
ravishankar@kristujayanti.com

ಸುತ್ತಿ ಸುತ್ತಿ ಬಂದಡಿಲ್ಲ ಲಕ್ಷಗಂಗೆಯ
ಮಿಂದಡಿಲ್ಲ
ತುಟ್ಟತುದಿಯ ಮೇರುಗಿರಿಯ ಮೆಟ್ಟಿ
ಕೂಗಿದಡಿಲ್ಲ
ನಿತ್ಯ ನೇಮದಿಂದ ತನುವ
ಮುಟ್ಟಿಕೊಂಡಡಿಲ್ಲ
ನಿಚ್ಚಕ್ಕೆ ನಿಚ್ಚ ನೆನೆವ ಮನವ ಅಂದಂದಿಗೆ
ಅತ್ತಲಿತ್ತ
ಹರಿವ ಮನವ ಚಿತ್ತದಲ್ಲಿ ನಿಲಿಸಬಲ್ಲಡೆ
ಬಚ್ಚಬರಿಯ ಬೆಳಗು ಗುಹೇಶ್ವರ ಲಿಂಗವು.

ಇದರ ವ್ಯಾಖ್ಯಾನವು ಹೀಗಿದೆ : ದೇವರು ಅಂತರಂಗದಲ್ಲಿಯೇ ಇರುವಾಗ ನಾವು ಹಲವು ಪ್ರದೇಶಗಳನ್ನು ಹುಡುಕುತ್ತಾ ಸದಾ ಸುತ್ತುತ್ತೇವೆ. ಪುಣ್ಯಕ್ಕಾಗಿ ದೇವರ ಹೆಸರಿನಲ್ಲಿ ಲಕ್ಷ ಗಂಗೆಯಲ್ಲಿ ಸ್ನಾನ ಮಾಡುತ್ತೇವೆ. ದೇವರ ನೆಲೆಗಳನ್ನು ಅರಸಿ, ಬೆಟ್ಟ–ಗುಡ್ಡಗಳ ತುತ್ತತುದಿಗೆ ಏರುತ್ತೇವೆ, ದೇವರೇ ಎಲ್ಲಿರುವೆ ಎಂದು ಭಕ್ತಿಯಿಂದ ಕೂಗುತ್ತೇವೆ. ನಿತ್ಯವೂ ಆಚರಣೆಯ ನೆಪದಲ್ಲಿ ನಮಸ್ಕರಿಸುತ್ತೇವೆ.

ಆದರೆ, ನಿತ್ಯವೂ ಸದಾ ಹಲವು ಬಯಕೆಗಳಿಗೆ ವಾಲುವ ಮನಸ್ಸನ್ನು ಒಂದೇ ಗುರಿಯಲ್ಲಿ ಏಕಾಗ್ರತೆಗೊಳಿಸಲು ಸಾಧ್ಯವಾದರೆ ಮಾತ್ರ ಅದು ಪರಿಪೂರ್ಣವಾದ ಬೆಳಕು. ಆ ಬೆಳಗು ಗುಹೇಶ್ವರ ಲಿಂಗ ಎನ್ನಲಾಗಿದೆ.

ಇಲ್ಲಿ ವಚನಗಳೆಂದರೆ ಅರ್ಥಪೂರ್ಣವಾದ ಮಾತುಗಳು, ಲಿಂಗವೆಂದರೆ ನಿರಾಕಾರ ಸ್ವರೂಪವಾದ ದೇವರು ಅದುವೆ, ಈ ಮನಸ್ಸು. ಇದನ್ನು ಅರಿಯಲು ಅಂತರಂಗ ಪ್ರಯಾಣ ಮುಖ್ಯವೇ ಹೊರೆತು, ಬಾಹ್ಯ ಹುಡುಕಾಟಗಳಲ್ಲವೆಂಬ ವಿಚಾರವನ್ನು 12ನೇ ಶತಮಾನದಲ್ಲಿಯೇ ಸ್ಪಷ್ಟಪಡಿಸಲಾಗಿದೆ. ವರ್ತಮಾನದ ನಮ್ಮ ಅರಿವುಗಳು ಯಾವ ನೆಲೆಯಲ್ಲಿ ಸಾಗುತ್ತಿವೆ ಎಂಬುದನ್ನು ವಚನಗಳ ಮೂಲಕ ಪರಿಶೀಲಿಸಿಕೊಳ್ಳಬೇಕಾಗಿದೆ.

ಕನ್ನಡ ಸಾಹಿತ್ಯದಲ್ಲಿ ಮಾಯೆಯನ್ನು ಕುರಿತು ವಿಶಾಲವಾಗಿ ಚರ್ಚಿಸಿದವರು ಈ ವಚನಕಾರರು. ಅಲ್ಲಮಪ್ರಭು ಈ ವಿಷಯದಲ್ಲಿ ನೇರ ಮತ್ತು ಸ್ಪಷ್ಟ ನುಡಿಗಳ ಹರಿಕಾರರು. ಡಾಂಭಿಕ ಭಕ್ತಿಯನ್ನು ವಿರೋಧಿಸಿ, ಮನದ ಶಕ್ತಿಯನ್ನು ಪರಿಚಯಿಸಿದವರು. ಸಮಾಜದ ಅಜ್ಞಾನಗಳನ್ನು ತಿದ್ದಲು ಅವರದೇ ನುಡಿಗಳಲ್ಲಿ ಸರಳವಾಗಿ, ವೈಜ್ಞಾನಿಕ ಉದಾಹರಣೆಗಳ ಮೂಲಕ ಚರ್ಚಿಸಿದವರು. ವಚನಗಳು ಬೋಧನೆಗಳಲ್ಲ. ಇವು ಇನ್ನೊಬ್ಬರಿಗಾಗಿ ನುಡಿದ ಶಬ್ದಸೂತಕಗಳಲ್ಲ. ತನಗಾಗಿ ತಾನು ನುಡಿದಂತೆ ನಡೆಯಬಹುದಾದ ಆತ್ಮ ಸಂವೇದನೆಗಳು. ಆದ್ದರಿಂದಲೇ ಇಂದು ವಿಶ್ವಮಾನ್ಯವಾಗಿ ಹರಡಿ, ಪ್ರತಿಯೊಬ್ಬರು ಸ್ವೀಕರಿಸಲು ಅರ್ಹವಾಗಿರುವುದು.

ಪ್ರಮುಖ ಪದಗಳು : *ಮನ ಮಂದಿರ, ಭಕ್ತಿ, ನೇಮ, ಬೆಳಗು, ಗುಹೇಶ್ವರ*

ಅಲ್ಲಮಪ್ರಭುವಿನ ಈ ವಚನವನ್ನು ಬೇರೆ ಬೇರೆ ವಚನಗಳೊಂದಿಗೆ ಇದರ ಅರ್ಥವನ್ನು ವಿಭಿನ್ನ ದೃಷ್ಟಿಕೋನಗಳ ಮೂಲಕ ವಿಸ್ತರಿಸಬಹುದು.

ಮನ ಮುಟ್ಟದ ಮಜ್ಜನ
ತನು ತಾಗದ ದೇಹಾರ
ಭಾವ ತಾಗದ ಪೂಜೆ
ಎವೆ ತಾಗದ ನೋಟ
ವಾಯು ತಾಗದ ಲಿಂಗದ ಠಾವ ತೋರಾ ಗುಹೇಶ್ವರ॥

ಇಲ್ಲಿ ಪ್ರಯೋಗಗೊಳ್ಳುವ ಮನ, ತನು, ಭಾವ, ಎವೆ, ವಾಯು ಇವೆಲ್ಲವೂ

ಮನಸ್ಸಿನ ಸ್ವರೂಪಗಳು. ನಮ್ಮ ಭಕ್ತಿಯ ಕಾರ್ಯಗಳು ಮನಸ್ಸಿನ ಮೂಲಕ ನಡೆಯಬೇಕು. ಡಾಂಭಿಕ ಆಚಾರಗಳಲ್ಲ. ಈ ಸಮಾಜದಲ್ಲಿ ಎರಡು ವರ್ಗಗಳನ್ನು ಕಾಣಬಹುದು. ತಾನು ಮಾಡಲಾರದೆ, ಮಾಡಿದಂತೆ ಮಾಡಿಸುವ ಒಂದು ವರ್ಗ, ಈ ಜನರ ಸೋಮಾರಿತನವನ್ನೇ ಅಸ್ತ್ರವಾಗಿಸಿಕೊಂಡು ದುಡಿಮೆಯ ಪ್ಯಾಕೇಜ್ ನಲ್ಲಿ ಮುಳುಗಿರುವ ಇನ್ನೊಂದು ದುಡಿಯುವ ವರ್ಗ. ಇಂದು ಭಕ್ತಿಯೂ ಇದೇ ಮಾದರಿಯಲ್ಲಿ ನಡೆಯುತ್ತಿದೆ. ಪೂಜೆಯನ್ನು ಮಾಡುವವರು, ಭಕ್ತಿಯನ್ನು ನಟಿಸುವವರು ಈ ವರ್ಗಗಳ ಬೇಧದಲ್ಲಿ ಭಾವದ ಐಕ್ಯತೆಯು ಹೇಗೆ ಎಂಬುದೇ ಸೂಕ್ತ ಪ್ರಶ್ನೆಯಾಗಿದೆ. ವಚನಕಾರರ ನಿರೂಪಣೆಯು ಇಂದು ವಚನ ಕ್ಷೇತ್ರಗಳಲ್ಲಿಯೇ ಇಲ್ಲದಿರುವಾಗ ಲಿಂಗ ಸ್ಥಾಪಿತ ದೇಗುಲಗಳೆಲ್ಲಾ ವ್ಯರ್ಥ ಕಾರ್ಯಗಳ ಸ್ಥಳಗಳೇ ಆಗಿವೆ. ಲಿಂಗವು ಅಂಗದ ಮೇಲೆ ಸೋಂಕುವ ಪರಿಗಿಂತ, ಅಂಗದೊಳಗಣ ಮನೋಚೈತನ್ಯಕ್ಕೆ ಸೋಂಕುವ ಪರಿಯು ಮಿಗಿಲು.

ಲಿಂಗಕ್ಕೆ ಅಸ್ಥಿತ್ವವೇ ಇಲ್ಲ. ವಚನಕಾರರು ತಿಳಿಸಿದ ನಿರಾಕಾರ ಸ್ವರೂಪದ ಲಿಂಗಕ್ಕೆ ನಾವು ಆಕಾರ ನೀಡಿ ಸ್ಥಾವರದಲ್ಲಿ ಸ್ಥಾಪಿಸುವುದು ಯಾವ ಬಗೆಯ ಸಂವಿಧಾನ ಆಲೋಚಿಸಬೇಕಿದೆ. ಈ ಚಿಂತನೆಗಳನ್ನು ಅಲ್ಲಮಪ್ರಭುಗಳು ನೇರವಾಗಿಯೇ ಸ್ಪಷ್ಟಪಡಿಸಿದ್ದಾರೆ.

ಅಲ್ಲಮಪ್ರಭುವಿನ ವಚನಗಳ ನೇರದೃಷ್ಟಿಯು ಸಮಾಜದ ಸಂಸ್ಕೃತಿಯನ್ನು ವ್ಯಕ್ತಿಗತವಾಗಿ ಪ್ರತಿನಿಧಿಸುತ್ತದೆ. ಆತನ ವಚನಗಳ ಸೂಕ್ಷ್ಮತೆಯೆಲ್ಲವೂ ಸ್ವಯಂ ಬದಲಾವಣೆಯನ್ನು ಸಮಾಜದ ಚಿಕಿತ್ಸೆಯಂತೆ ಸದೃಢಗೊಳಿಸುವುದೇ ಆಗಿದೆ.

ತನು ಬತ್ತಲಿದ್ದಡೇನೂ ಮನ ಶುಚಿಯಾಗದನ್ನಕ್ಕರ?
ಮಂಡೆ ಬೋಳಾದಡೇನೊ, ಭಾವ ಬಯಲಾಗದನ್ನಕ್ಕರ?
ಭಸ್ಮವ ಹೂಸಿದಡೇನೊ,
ಕರಣಾದಿ ಗುಣಂಗಳನೊತ್ತಿ ಮೆಟ್ಟಿ ಸುಡದನ್ನಕ್ಕರ?
ಇಂತೀ ಆಶೆಯ ವೇಷದ ಭಾಷೆಗೆ,
ಗುಹೇಶ್ವರಾ, ನೀ ಸಾಕ್ಷಿಯಾಗಿ ಛೀ ಎಂಬೆನು.

ಇಲ್ಲಿ ಹೊರಗೆ ವೇಷ ಧರಿಸುತ್ತಾ ಆಚರಣೆಯು ನೆಪದಲ್ಲಿ ತೋರಿಕೆಯಲ್ಲಿರುತ್ತಾರೆ. ದಿಗಂಬರರಾಗುತ್ತಾರೆ. ಆದರೆ ಮನದಲ್ಲಿ ಆ ಶುಚಿತ್ವ ಇರದೆ ಈ ಹೊರಗಣದ ಎಲ್ಲಾ ಆಚಾರ ವ್ಯರ್ಥವೆಂದಿದ್ದಾರೆ. ಕೇವಲ ತಲೆಯನ್ನು ಬೋಳಿಸಿದರೆ ತನ್ನ ಹರಕೆ ತೀರಿಸಬಹುದೇ ಹೊರೆತು ಭಾವನೆಗಳು ಶುದ್ಧವಾಗಲಾರದು. ಭಾವನೆಗಳು

ಶುದ್ಧವಿಲ್ಲದೆ ಮಾಡಿದ ಭಕ್ತಿ ವ್ಯರ್ಥ ಕಾರ್ಯ. ಬೂದಿ(ಭಸ್ಮ)ಗಳನ್ನು ಪೂಸಿಕೊಂಡರೆ ಅಂದರೆ ಬಳಿದುಕೊಂಡರೆ ಭಕ್ತನಾಗಲಾರನು. ಅಂತರಂಗ ಶುದ್ಧವಿರಬೇಕು. ಕರಣಗಳು ಎಂದರೆ ಕಾಯ, ವಾಚ, ಮನಸಾ ಈ ಮೂರು ಅಂಶಗಳ ನಿಯಂತ್ರಣ ಮುಖ್ಯ ಇವುಗಳ ಮೇಲೆ ಪ್ರಯೋಗವಾಗುವ ಇಂದ್ರಿಯ ವ್ಯಾಮೋಹಗಳ ನಿಯಂತ್ರಣ, ಅವುಗಳ ನಾಶ ಮುಖ್ಯ ಎಂದಿದ್ದಾರೆ. ಇಂತಹ ತೋರಿಕೆಯ ಭಕ್ತರ ಆಸೆಯ, ವೇಷದ, ನುಡಿಗಳ ಕಂಡರೆ 'ಛೀ' ಎನ್ನುತ್ತೇನೆ, ಇಂತಹವರನ್ನು ತ್ಯಜಿಸುತ್ತೇನೆ ಗುಹೇಶ್ವರನ ಸಾಕ್ಷಿಯಾಗಿ ಎಂದಿದ್ದಾರೆ. ಅಲ್ಲಮನ ವಚನಗಳು ಬೆಡಗಿನಿಂದ ಕೂಡಿದ್ದರೂ ನೇರ ನಿಷ್ಠುರತೆಯನ್ನು ಸಾರುತ್ತವೆ.

ತನುವ ತೋಂಟವ ಮಾಡಿ, ಮನವ ಗುದ್ದಲಿ ಮಾಡಿ,
ಅಗೆದು ಕಳೆದೆನಯ್ಯಾ ಭ್ರಾಂತಿಯ ಬೇರ.
ಒಡೆದು ಸಂಸಾರದ ಹೆಂಟೆಯ, ಬಗಿದು ಬಿತ್ತಿದೆಯ್ಯಾ ಬ್ರಹ್ಮಬೀಜವ.
ಅಖಂಡಮಂಡಲವೆಂಬ ಬಾವಿ, ಪವನವೆ ರಾಟಾಳ,
ಸುಷುಮ್ನನಾಳದಿಂದ ಉದಕವ ತಿದ್ದಿ,
ಬಸವಗಳೈವರು ಹಸಗೆಡಿಸಿಹವೆಂದು
ಸಮತೆ ಸೈರಣೆಯೆಂಬ ಬೇಲಿಯನಿಕ್ಕಿ,
ಆವಾಗಳೂ ಈ ತೋಂಟದಲ್ಲಿ ಜಾಗರವಿದ್ದು
ಸಸಿಯ ಸಲಹಿದೆನು ಕಾಣಾ ಗುಹೇಶ್ವರಾ.

ವಚನಕಾರರ ಕೆಲವು ಕಾಯಕಗಳ ಕುರಿತು ಅಲ್ಲಮನು ನೇರವಾಗಿ ಹೇಳಿದಂತಿದ್ದರೂ ಮನದ ಕಾಯಕ ಮೊದಲಿಗೆ ಇರಬೇಕೆಂಬ ಅನಂತ ಸತ್ಯದ ತಿಳಿ ಹೇಳಿದ್ದಾರೆ. ಗೊಗ್ಗಯ್ಯನೆಂಬ ಕೃಷಿಕ ವಚನಕಾರನಿಗೆ ಮನದ ತೋಟವ ಸಿದ್ಧಮಾಡೆಂದು ಈ ರೀತಿಯಲ್ಲಿ ಹೇಳಿದ್ದಾರೆ. ಕೃಷಿಯು ಇಲ್ಲಿ ಬದುಕಿನ ಮಾದರಿಯಷ್ಟೆ. ಪ್ರತಿ ಮನಸ್ಸನ್ನು ಹದಗೊಳಿಸಲು ಸಿದ್ಧತೆ ಹೀಗಿರಬೇಕು.

ಇದೊಂದು ಸರಳವಾದ ಹಾಗೂ ವಿಶಾಲ ಅರ್ಥವನ್ನು ಒಂದು ಕಾರ್ಯ ವಿವರಣೆಯಂತೆ ಮೂಡಿದ ವಚನವಾಗಿದೆ. ಅಲ್ಲಮರು ಬಾಹ್ಯ ತೋಟವನ್ನು ಸಿದ್ಧಮಾಡುವ ಕ್ರಮದಲ್ಲಿಯೇ ಮನಸ್ಸನ್ನು ಶುದ್ಧಮಾಡಬೇಕೆಂಬ ಎಚ್ಚರ ಮೂಡಿಸಿದ್ದಾರೆ. ಈ ದೇಹವನ್ನು ತೋಟವೆಂದು ಭಾವಿಸಿ, ಮನವನ್ನೇ ಗುದ್ದಲಿಯನ್ನಾಗಿ ಮಾಡಿಕೊಂಡು ಮೊದಲಿಗೆ ಸ್ವಚ್ಛಮಾಡಬೇಕು, ಹಸನುಗೊಳಿಸಬೇಕು. ಅಗೆದು ತೆಗೆಯಬೇಕು ಈ ಶರೀರ ಹೊಂದಿರುವ ಭ್ರಮೆಗಳನೆಲ್ಲವನ್ನು ಹಾಗೆಯೇ ಸಂಸಾರದ ತೊಡಕುಗಳನ್ನು

ಮಣ್ಣಿನ ಹೆಂಟೆಗಳನ್ನು ಉಡಿಗೊಳಿಸಿದಂತೆ ಸರಿಪಡಿಸಿಕೊಳ್ಳಬೇಕು. ಸರಿಯಾದ ಅರ್ಥಗಳನ್ನು ತುಂಬಿಕೊಳ್ಳಬೇಕು. ಇಂತಹ ತೋಟದಲ್ಲಿ ಅಂದರೆ ಶರೀರದಲ್ಲಿ ಬಿತ್ತಬೇಕು ಬ್ರಹ್ಮಬೀಜವನ್ನು ಎಂದಿದ್ದಾರೆ. ಇಲ್ಲಿ ಬ್ರಹ್ಮಬೀಜವೆಂದರೆ ಬದುಕಿನ ನಿಶ್ಚಲವಾದ ಗುರಿಯೆಂದು ಭಾವಿಸಬಹುದು. ಇಂತಹ ತೋಟಕ್ಕೆ ನೀರು, ಗಾಳಿಯನ್ನು ಈ ಅಖಂಡ ಮಂಡಲವೆಂಬ ವಿಶ್ವವೇ ಅಂದರೆ ನಮ್ಮ ಜ್ಞಾನಕೋಶವೆಂಬ ಬಾವಿ, ಈ ಗಾಳಿಯೇ ಅಂದರೆ ಉಸಿರಾಟವೇ ಚಕ್ರವಾಗಿ ಸುಷುಮ್ನ ನಾಳದಿಂದ ನೀರು ತಂದು ಹಾಕಬೇಕು. ಅಂದರೆ ನಮ್ಮ ದೇಹದಲ್ಲಿ ಯೋಗಶಾಸ್ತ್ರವೇಳುವಂತೆ ಮೂರು ನಾಳಗಳಿವೆ ಒಂದು ಇಹಾ, ಪಿಂಗಳ, ಸುಷುಮ್ನ(ಕುಂಡಲಿನಿ). ಈ ಇಹಾ ಮತ್ತು ಪಿಂಗಳಗಳ ನಡುವೆ ಸುಷುಮ್ನ ನಾಳವಿದೆ. ಇವೆರಡು ಉಸಿರಾಟದ ಉಚ್ವಾಸ ಹಾಗೂ ನಿಚ್ವಾಸಗಳಾದರೆ ಸುಷುಮ್ನ ನಾಳವು ಪ್ರಾಣಶಕ್ತಿಯನ್ನು ಈ ದೇಹಕ್ಕೆ ಒದಗಿಸುತ್ತದೆ. ಇಂತಹ ನಾಳದಿಂದ ನಾವು ಈ ತನುವೆಂಬ ತೋಟಕ್ಕೆ ನೀರು ತರಬೇಕು ಎಂದಿದ್ದಾರೆ ಅಲ್ಲಮಪ್ರಭು. ಈ ರೀತಿಯಲ್ಲಿ ಬೆಳೆಸುತ್ತಿರುವ ತೋಟವನ್ನು ಬಸವಗಳೈವರು ಎಂದರೆ ಪಂಚೇಂದ್ರಿಯಗಳು (ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ) ತಮ್ಮ ಇಷ್ಟ ಸುಖಕ್ಕಾಗಿ ಹಾಳು ಮಾಡುತ್ತಾರೆ ಎಂದು ಈ ಪಂಚೇಂದ್ರಿಯಗಳನ್ನು ಸಮತೆ, ಸೈರಣೆಯೆಂಬ ಬೇಲಿಯನ್ನು ಅಂದರೆ ನಿಯಂತ್ರಣವನ್ನು ಹೊಂದಿ ಯಾವಾಗಲೂ ಈ ತೋಟದಲ್ಲಿ ಎಚ್ಚರವಿದ್ದು (ಜಾಗ್ರತೆವಹಿಸಿ) ಬಿತ್ತಿ ಬೆಳೆದ ಸಸಿಯನ್ನು ಕಾಪಾಡಿದೆನು. ಎಂದರೆ ಬದುಕಿನ ಧ್ಯೇಯವನ್ನು ಬರೀ ಹೊಂದುವುದಷ್ಟೇ ಅಲ್ಲದೇ ಕಾಪಾಡಬೇಕಾದ ಎಚ್ಚರವನ್ನು ಈ ರೀತಿಯಲ್ಲಿ ಅರ್ಥಪಡಿಸಿದ್ದಾರೆ.

ತನುವೆಂಬ ಏರಿಗೆ ಮನವೆಂಬ ಕಟ್ಟೆಯ ಮಾಡಿ,
ಬಲಿದು ಷಡ್ವಿಧಭಕ್ತಿಯೆಂಬ ಸೋಪಾನದಿಂದ,
ಪರಮಾನಂದವೆಂಬ ಜಲವ ತುಂಬಿ
ಕೆರೆಯ ಕಟ್ಟಬಲ್ಲವರನಾರನೂ ಕಾಣೆ!
ನಾನು ಕಟ್ಟಿದ ಕೆರೆ ಸ್ಥಿರವಾಯಿತ್ತು, ಗುಹೇಶ್ವರಾ ನಿಮ್ಮಾಣೆ.

ಈ ವಚನವು ಕೂಡ ಶರೀರವನ್ನು ಕುರಿತು ಹೇಳಿದ ವಚನವಾಗಿದೆ. ದೇಹವೆಂಬ ನೀರು ನಿಂತಿರುವ ಜಾಗದಂತಹ ಏರಿಗೆ ಮನಸ್ಸಿನ ಕಟ್ಟೆಯ ಮಾಡಿ, ಈ ನೀರನ್ನು ಮುಟ್ಟಲು ಷಟ್ ವಿಧ ಭಕ್ತಿಯ ಮೆಟ್ಟಿಲುಗಳನ್ನು ನಿರ್ಮಿಸಿ, ಪರಮಾನಂದದ ಜಲವನ್ನು ತುಂಬಿ ನಾವು ಕೆರೆಯ ಕಟ್ಟುವ ಕಾರ್ಯಗಳನ್ನು ಮಾಡುತ್ತಿಲ್ಲ. ಇಂತಹ ಭಕ್ತಿಯ ಕೆರೆಯನ್ನು ನಾನು ನಿರ್ಮಿಸಿದ್ದೇನೆ ಎಂದು ಹೇಳುವ

ಅಲ್ಲಮನ ಧೈರ್ಯವು ಮನಸ್ಸಿನ ಶುದ್ಧಿಗೆ ಷಟ್ ವಿಧ ಭಕ್ತಿಯ ಸಾಕಾರವನ್ನು ತಿಳಿಸುತ್ತದೆ. ಅದ್ವೈತ ಸಾಧನೆಯನ್ನು ನಿರೂಪಿಸುವ ಅಲ್ಲಮರು ಮನದ ಶುದ್ಧಿಗಾಗಿ ಹಲವು ವಚನಗಳನ್ನು ತಿಳಿಸಿದ್ದಾರೆ. ಪರಮಾನಂದದ ಜಲವನ್ನು ನಿರೀಕ್ಷಿಸುವ ಅಲ್ಲಮರು ಭವಿಷ್ಯದ ಶತಮಾನಗಳ ಕುರಿತು ಸ್ಪಷ್ಟವಾದ ಚಿತ್ರಣಗಳನ್ನು ಕಾಣಿಸಿದ್ದಾರೆ. ವಿಗ್ರಹರೂಪಿ ದೇವರ ನಿರಾಕರಣೆ, ಅಧ್ಯಯನದ ಶಿಸ್ತು, ಲಿಂಗಭೇದ ಕುರಿತ ಸ್ಪಷ್ಟತೆ ಮೊದಲಾದ ವಾಸ್ತವ ವಿಚಾರಗಳನ್ನು ಅಲ್ಲಮರ ಕಣ್ಣಿನಿಂದ ಕಾಣಬಹುದು. ದೇಹವನ್ನು ಕೃಷಿಮಾಡುವ ಶಿಸ್ತನ್ನು, ಅದರ ಪರಿಶುದ್ಧತೆಗೆ ಪಂಚೇಂದ್ರಿಯಗಳ ನಿಗ್ರಹ, ಅರಿಷಡ್ವರ್ಗಗಳ ಕಾವಲು ಮೊದಲಾದ ವೈಚಾರಿಕತೆಗಳು ಇವರ ವಚನಗಳಲ್ಲಿ ಸಂವೇದನೆಗೊಂಡಿವೆ. ಇವರು ನೀಡುವ ದೇಹದ ತತ್ತ್ವವು ಅಂದಿನ ವಚನಕಾರರನ್ನೇ ಸರಳವಾಗಿ ತಿದ್ದುವ ಕಾರ್ಯವೂ, ಜನಸಾಮಾನ್ಯರ ಕುರಿತ ತಿಳುವಳಿಕೆಯೂ ಆಗುವ ಮಾರ್ಪಾಡು ಬಹಳ ಮುಖ್ಯವಾದುದು.

ತನ್ನ ತಾನರಿದಡೆ ನುಡಿಯೆಲ್ಲ ತತ್ವ ನೋಡಾ!
ತನ್ನ ತಾ ಮರೆದಡೆ ನುಡಿಯೆಲ್ಲ ಮಾಯೆ ನೋಡಾ!
ಅರಿದು ಮರೆದ ಶಿವಯೋಗಿಯ ಶಬ್ದವೆಲ್ಲವು ಉಪದೇಶವಲ್ಲದೆ ಭಿನ್ನವುಂಟೆ?
ನಿನ್ನ ಮನದ ಕಳವಳವ ತಿಳುಹಲೆಂದು ಮಾತನಾಡಿಸಿ ನೋಡಿದಡೆ
ಎನ್ನ ಮನದೊಳಗೆ ಕಂದು ಕಲೆಯೆಂಬುದಿಲ್ಲ ನೋಡಾ
ನಮ್ಮ ಗುಹೇಶ್ವರಲಿಂಗಕ್ಕೆ ನೀನು ಕರುಣದ ಶಿಶುವಾದ ಕಾರಣ
ಬಾಯ್ದೆಗೆದೆನಲ್ಲದೆ ಭಿನ್ನವುಂಟೇ ಹೇಳಾ ಮರುಳೆ?

ಕಾಯ–ವಾಚ–ಮನಸಗಳ ಪರಿಶುದ್ಧತೆಯಲ್ಲಿ ತನ್ನನ್ನು ತಾನರಿಯುವ ಶರಣರನ್ನು ಗುಹೇಶ್ವರ ಲಿಂಗದ ಕರುಣದ ಶಿಶುವೆಂದಿದ್ದಾರೆ. ದೇವರೆಂದರೆ ನಮ್ಮೊಳಗೆ ಅಂತರ್ಗತವಾಗಿರುವ ಆತ್ಮದ ವಿಚಾರ. ಅದು ಬಾಹ್ಯ ಸ್ವರೂಪವಲ್ಲ. ಅದು ಕೂಡಲ ಸಂಗಮನಂತೆ, ಚೆನ್ನಮಲ್ಲಿಕಾರ್ಜುನನಂತೆ ಗುಹೇಶ್ವರ ಸ್ವರೂಪಿಯ ತತ್ತ್ವ. ತನ್ನನ್ನು ತಾನು ಅರಿಯಬೇಕೆ ಹೊರೆತು, ಮರೆಯುವುದಲ್ಲ. ಅರಿತು ಮರೆಯುವ ಮನಸ್ಸು ಶಿವಯೋಗಿಯಂತೆ ಕಾಣಿಸಿದರೂ ಪ್ರಯೋಜನವಿಲ್ಲ. ಅವರ ನುಡಿಗಳು ಕೇವಲ ಉಪದೇಶಗಳಾಗುತ್ತವೆ. ತತ್ತ್ವವಾಗುವುದಿಲ್ಲ. ಆಚರಿಸಿದ ನೇಮಗಳು ಅನಾಚಾರದ ಸೂತ್ರಗಳಿದ್ದಂತೆ. ಇಂತಹ ಮನಸ್ಸಿನಲ್ಲಿ ಯಾವುದೇ ಕಳವಳ, ನೋವು, ಬೇಸರಗಳು ಇರುವುದಿಲ್ಲ. ದರ್ಶನದಲ್ಲಿ ಪರಿಶುದ್ಧತೆಯನ್ನು ಹಂಬಲಿಸುವ ಅಲ್ಲಮರು ಶರಣರಿಂದ

ಯಾವುದೇ ಕಲೆಯಿಲ್ಲದ ಶರಣತ್ವವನ್ನು ಹೊಂದಿದಾಗ ಮಾತ್ರ ಗುಹೇಶ್ವರ ಮೆಚ್ಚುವನೆಂಬ ಅಂತಃಸಾಕ್ಷಿಯನ್ನು ವಿವರಿಸಿದ್ದಾರೆ.

ಈ ಮೇಲ್ಕಂಡಂತೆ ವಿವರಿಸಿದ ಕೆಲವು ವಚನಗಳು ಮನಸ್ಸಿನ ತತ್ತ್ವವನ್ನು ನಿರ್ವಚಿಸಿದಂತಹವು. ಈ ನಿರ್ವಚನದ ಅರ್ಥವು ವಚನಗಳನ್ನು ತಿಳಿಯುವ ಅರ್ಥದ ದಾಟಿಗಳೆನ್ನಬಹುದು. ನಾವು ನಮ್ಮನ್ನು ವಿವರಿಸಿಕೊಳ್ಳಲು ಮೊದಲಿಗೆ ನಮ್ಮ ಮನಃಶುದ್ಧತೆ ತುಂಬಾ ಅಗತ್ಯವಾಗಿದೆ. ಪ್ರದರ್ಶನದ ಕಾಲದಲ್ಲಿ ನಮ್ಮ ಸಚೇತನ ಉಳಿವು ಅಂತರಂಗದ ತತ್ತ್ವಕ್ಕೆ ಮಾರ್ಗಸೂಚಿಯನ್ನು ತುಂಬಿದೆ. ಅಳಿಯುವ ದೇಹಕ್ಕೆ ನಿತ್ಯವೂ ಉಳಿಯುವ ಪ್ರಯತ್ನಗಳು ಆಹಾರ, ಸುಖ ಮೈಥುನಗಳೊಂದಿಗೆ ಮನುಷ್ಯನು ಹೋರಾಡುತ್ತಿದ್ದಾನೆ. ಇಂತಹ ಹೋರಾಟಗಳಿಗೆ ತನ್ನನ್ನು ತಾನು ಪೂರ್ಣವಾಗಿ ಜಗದೊಡಲ ಅರಿವಿಗೆ ಅರ್ಪಿಸಿಕೊಳ್ಳುವ ಮನೋಧೀಮಂತಿಕೆ ಅಗತ್ಯವಿದೆ. ಈ ನಿಟ್ಟಿನಲ್ಲಿ ಹಲವು ವಚನಗಳು ಅವುಗಳ ಸಹೃದಯ ಓದು ನಮಗೆ ಸಹಕಾರಿಯಾಗಬಲ್ಲುದು.

ವಚನಕಾರರು ನಿರೂಪಿಸಿರುವುದು ಮನ ಮಂದಿರದ ಪರಿಕಲ್ಪನೆ. ನಾವು ಹಂಬಲಿಸುವ ಬಾಹ್ಯದ ಹುಡುಕಾಟಗಳನ್ನು ತಮ್ಮ ಮನಸ್ಸಿನಲ್ಲಿಯೇ ಸ್ಥಾಪಿಸಿಕೊಂಡು, ಇಂದ್ರಿಯ ನಿಗ್ರಹಗಳ ಮೂಲಕ ಸಮಾಜದ ಸ್ವಾಸ್ಥಕ್ಕೆ ಅಣಿಯಾಗಬೇಕಿದೆ. ದೇವರನ್ನು ಹುಡುಕುವ ನೂರಾರು ಬಾಹ್ಯ ನೆಲೆಗಳನ್ನು ವಚನಕಾರರು ಡಾಂಭಿಕತನವೆಂದು ಒಂದೇ ಪದದಲ್ಲಿ ನಿರಾಕರಿಸಿದ್ದಾರೆ. ಅಕ್ಕನು ನುಡಿಯುವ 'ಉಸುರಿನ ಪರಿಮಳ'ದ ಹುಡುಕಾಟದ ಅಗತ್ಯವಿದೆ. ಅದು ಸ್ವಯಂಭೂಪ್ರಭೆ. ಸ್ವಯಂ ಪ್ರಯತ್ನಕ್ಕೆ ಅಣಿಯಾಗದ ಈ ಮನುಷ್ಯ ಜೀವಗಳು ಬಾಹ್ಯದ ನೆಲೆಯಲ್ಲಿ ಕಾಣಿಸುವ ಕ್ರಿಯೆಯಲ್ಲಿ ತೊಡಗಿದ್ದಾರೆ. ಕಾಣು ಎಂಬ ಅನ್ವೇಷಣೆಯಲ್ಲಿ ಈ ಚಿಂತನೆಗಳನ್ನು ಹೆಚ್ಚು ಹೆಚ್ಚು ವಿಸ್ತರಿಸಬಹುದು.

ಅಧ್ಯಯನ ಕೃತಿಗಳು :

1. ಬಸವಯುಗದ ವಚನ ಮಹಾಸಂಪುಟ., ಎಂ.ಎಂ ಕಲಬುರ್ಗಿ(ಸಂ)., 1993, 2001, 2016., ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
2. ಅಲ್ಲಮಪ್ರಭು., ವಿ. ಚಂದ್ರಶೇಖರ ನಂಗಲಿ., ಎಚ್.ಟಿ.ಪೋತೆ., 2011., ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ
3. ವಚನ ಸಾಹಿತ್ಯ ಸಂಗ್ರಹ., ಸಂ.ಶಿ. ಭೂಸನೂರು ಮಠ., 2006., ಕನ್ನಡ ಮತ್ತು

ಸಂಸ್ಕೃತಿ ಇಲಾಖೆ, ಬೆಂಗಳೂರು., ಪುಟ ಸಂಖ್ಯೆ xxxv

4. ಪ್ರತ್ಯೇಕಬುದ್ಧ ಅಲ್ಲಮಪ್ರಭು., ಎಸ್. ನಟರಾಜ ಬೂದಾಳು., 2017, 2021., ಪಲ್ಲವ ಪ್ರಕಾಶನ, ಚನ್ನಪಟ್ಟಣ., ಪುಟ ಸಂಖ್ಯೆ 93
5. ವಚನ ವೈಚಾರಿಕ ವಿಮರ್ಶೆ., ಜಿ.ವಿ. ಸಂಗಮೇಶ್ವರ., 2013., ಸಾಗರ್ ಪ್ರಕಾಶನ, ಬೆಂಗಳೂರು.
6. ವಚನ ಧ್ಯಾನ., ಜರಗನಹಳ್ಳಿ ಶಿವಶಂಕರ್., 2012., ಸ್ನೇಹಬುಕ್ ಹೌಸ್, ಬೆಂಗಳೂರು.
7. ಅಲ್ಲಮನ ವಚನಚಂದ್ರಿಕೆ., ಎಲ್. ಬಸವರಾಜು., 2014., ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

***

ಸಾಹಿತ್ಯ-ಸಂಸ್ಕೃತಿ-ಸಂಶೋಧನೆಯ ನಿಯತಕಾಲಿಕ

ಪ್ರತಿಸ್ಪಂದ

ಕೊಡು-ಕೊಳ್ಳುವಿಕೆಗಳ ಸಂಕರ..

ವೃಕ್ಷಮಾತೆಗೆ ನಮನ

ನಾಡೋಜ ಸಾಲುಮರದ ತಿಮ್ಮಕ್ಕ ಅವರು

1911-2025

ಸಾಹಿತ್ಯ, ಸಂಸ್ಕೃತಿ - ಸಂಶೋಧನ ತ್ರೈಮಾಸಿಕ ತಜ್ಞ ಪರಿಶೀಲನ ಪತ್ರಿಕೆ

LITERATURE, CULTURE - RESEARCH QUARTERLY

PEER - REVIEWED JOURNAL

ISSN: 2320-9941

HTTPS://PRATHISPANDHA.WORDPRESS.COM/

ವೃಕ್ಷಮಾತೆಗೆ ನಮನ

ನಾಡೋಜ ಸಾಲುಮರದ ತಿಮ್ಮಕ್ಕ ಅವರು

1911-2025

ಸಾಹಿತ್ಯ, ಸಂಸ್ಕೃತಿ - ಸಂಶೋಧನ ತ್ರೈಮಾಸಿಕ ತಜ್ಞ ಪರಿಶೀಲನ ಪತ್ರಿಕೆ
LITERATURE, CULTURE - RESEARCH QUARTERLY
PEER - REVIEWED JOURNAL
ISSN: 2320-9941

HTTPS://PRATHISPANDHA.WORDPRESS.COM/

ಪ್ರತಿಸ್ಪಂದ
ಕೊಡು ಕೊಳ್ಳುವಿಕೆಯ ಸಂಕರ

PRATHISPANDA
An Exchange of Creative Impulse

PEER - REVIEWED JOURNAL
ISSN: 2320-9941
ಸಂಪುಟ - 9, ಸಂಚಿಕೆ- 4
VOLUME: 09, ISSUE: 04

ಪ್ರತಿಸ್ಪಂದ

ಕೊಡು ಕೊಳ್ಳುವಿಕೆಯ ಸಂಕರ

PRATHISPANDA

An Exchange of Creative Impulse

ಗೌರವ ಸಂಪಾದಕರು
ಕೆ. ಆರ್. ಬಸವರಾಜು

ಸಂಪಾದಕರು
ಡಾ. ಸರಸ್ವತಿ ಕೆ. ಬಿ.

ಭಾಗ - ೩
PART - 3